ಪ್ರವಾಸಿಗರಿಗೆ ಚೈತನ್ಯ ತುಂಬಲು ಸಜ್ಜಾದ 'ದೇವರನಾಡು'



ಬೇಸಿಗೆ ರಜೆ ಬರುತ್ತಿದ್ದು, ಕೇರಳಕ್ಕೆ ಹೋಗುವವರ ಸಂಖ್ಯೆಯೂ ಹೆಚ್ಚಿದೆ. ಸ್ಥಳೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ದೇವರನಾಡು ಸಜ್ಜುಗೊಂಡಿದೆ. ಇದಕ್ಕಾಗಿ ಅಖಿಲ ಭಾರತ ಅಭಿಯಾನವನ್ನು ಆಯೋಜಿಸಿದೆ.

ಉತ್ತರ ಕೇರಳದ ಪ್ರದೇಶಗಳಾದ ಬೇಕಲ್, ವಯನಾಡ್, ಕೋಯಿಕ್ಕೋಡ್ ಪ್ರದೇಶಗಳಿಗೆ ಆದ್ಯತೆ ನೀಡಿದ್ದು, ಹೆಚ್ಚುವರಿ ಮೂಲಸೌಕರ್ಯಗಳನ್ನು ನೀಡಲಾಗಿದೆ. ಪ್ರವಾಸಿಗರನ್ನು ಸೆಳೆಯುವ ಸಲುವಾಗಿ ಹೆಲಿ ಟೂರಿಸಂ ಮತ್ತು ಸಮುದ್ರ ತೀರಗಳಲ್ಲಿ ವಿಶಿಷ್ಟ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಜತೆಗೆ ಕಡಲತೀರಗಳು, ಗಿರಿಧಾಮಗಳು, ದೋಣಿಮನೆಗಳು, ಹಿನ್ನೀರಿನ ಪ್ರದೇಶವು ಪ್ರವಾಸೋದ್ಯಮದ ಅನುಭವವನ್ನು ನೀಡಲು, ಪ್ರವಾಸಿಗರಲ್ಲಿ ಹೊಸ ಚೈತನ್ಯ ತುಂಬಲು ಕಾದು ನಿಂತಿವೆ.

ಇದರ ಜತೆಗೆ ಪ್ರವಾಸಿಗರಿಗೆ ಕೇರಳದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಿಚಯವನ್ನು ನೀಡಲು ಫೆಬ್ರುವರಿ 15ರಿಂದ 21ರವರೆಗೆ ಕನಕಕ್ಕುನ್ನು ಪ್ಯಾಲೇಸ್‌ನಲ್ಲಿ ನಿಶಾಗಂಧಿ ನೃತ್ಯೋತ್ಸವ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ಮೋಹಿನಿಯಾಟ್ಟಂ, ಕಥಕ್, ಕೂಚಿಪುಡಿ, ಭರತನಾಟ್ಯ ಮತ್ತು ಮಣಿಪುರಿ ನೃತ್ಯಗಳನ್ನು ನೃತ್ಯಪಟುಗಳು ಪ್ರದರ್ಶಿಸಲಿದ್ದಾರೆ.

ಕೇರಳ ಸಾಹಿತ್ಯ ಉತ್ಸವವು ಜ 26ರವರೆಗೆ ಕೋಯಿಕ್ಕೋಡ್‌ನ ಸಮುದ್ರತೀರದಲ್ಲಿ ನಡೆಯಲಿದೆ. 12ಕ್ಕೂ ಹೆಚ್ಚು ದೇಶಗಳ 400ಕ್ಕೂ ಹೆಚ್ಚು ಸಾಹಿತಿಗಳು, ಭಾಷಣಕಾರರು ಭಾಗವಹಿಸಲಿದ್ದಾರೆ. ವಿವಿಧ ವೇದಿಕೆಗಳಲ್ಲಿ ಸುಮಾರು 200ರಕ್ಕೂ ಹೆಚ್ಚು ವಿಚಾರಸಂಕಿರಣ ನಡೆಯಲಿದೆ.

ಕೇರಳ ಡೆಸ್ಟಿನೇಷನ್ ವೆಡ್ಡಿಂಗ್ ಮತ್ತು ಎಂಐಸಿಇಗೆ ಆದ್ಯತೆ ನೀಡುತ್ತಿದ್ದು, ಈವೆಂಟ್ ಪ್ಲಾನರ್‌ಗಳ ಕಾರ್ಪೊರೇಟ್ ಗ್ರಾಹಕರ ಮೆಚ್ಚಿನ ತಾಣವಾಗಿದೆ. ದೋಣಿಮನೆ, ಕಾರಾವಾನ್ ವಸತಿ, ಪ್ಲಾಂಟೇಷನ್ ಹಾಗೂ ಜಂಗಲ್ ರೆಸಾರ್ಟ್‌ಗಳು, ಹೋಮ್‌ಸ್ಟೇಗಳು, ಆಯುರ್ವೇದ ಆಧರಿತ ವೆಲ್‌ನೆಸ್ ಪರಿಹಾರಗಳು, ಸಾಹಸ ಚಟುವಟಿಕೆಗಳು, ಚಾರಣಕ್ಕೆ ಪ್ರಸಿದ್ಧಿ ಪಡೆಯುತ್ತಿದೆ.

ಕೋವಿಡ್‌ಗಿಂತಲೂ ಮೊದಲು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದರು. 2024ರಲ್ಲಿ ಯಥಾ ಪ್ರಕಾರ ಜನವರಿಯಿಂದ ಜೂನ್‌ವರೆಗೆ 1 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇರುವುದು ಈಗಾಗಲೇ ಬುಕ್ಕಿಂಗ್‌ನಿಂದ ದೃಢವಾಗಿದೆ.

ಬಿ2ಬಿ ಟ್ರಾವೆಲ್ ಮೀಟ್ ಅಭಿಯಾನವು ಜನವರಿ- ಮಾರ್ಚ್ ಅವಧಿಯಲ್ಲಿ ಅಹಮದಾಬಾದ್, ಚಂಡೀಗಢ, ದೆಹಲಿ, ಜೈಪುರ, ಚೆನ್ನೈ ಮತ್ತು ಕೋಲ್ಕತ್ತಗಳಲ್ಲಿ ಬಿ2ಬಿ ಸಭೆಗಳ ಸರಣಿ ನಡೆಯಲಿದೆ ಎಂದು ಕೇರಳ ಸರ್ಕಾರದ ಪ್ರಕಟಣೆ ತಿಳಿಸಿದೆ. ❖



ನೃತ್ಯಾಂಜಲಿ ನೃತ್ಯ ಶಾಲೆಯ ಕಲಾವಿದೆಯರಿಂದ ನೃತ್ಯಪ್ರದರ್ಶನ

ರಸಸಂಜೆ ಇಂದಿನಿಂದ

ವೆಂಕಟೇಶ ನಾಟ್ಯ ಮಂದಿರವು ಜನವರಿ 25 ಮತ್ತು 26ರಂದು ಎರಡು ದಿನಗಳ ಕಾಲ ಎಡಿಎ ರಂಗಮಂದಿರದಲ್ಲಿ 'ರಸಸಂಜೆ' ಭರತನಾಟ್ಯ ಪ್ರದರ್ಶನವನ್ನು ಆಯೋಜಿಸಿದೆ. ನೃತ್ಯಾಂಜಲಿ ನೃತ್ಯ ಶಾಲೆಯ ನಿರ್ದೇಶಕ ಅಶೋಕ್ ಕುಮಾರ್ ಅವರ ಶಿಷ್ಯಂದಿರು ನೃತ್ಯ ಪ್ರದರ್ಶನ ನೀಡಲಿದ್ದಾರೆ.

25ರಂದು ವಿದುಷಿ ತೇಜಸ್ವಿ ಕೊಂಡೂರಿ ಅವರಿಂದ ನೃತ್ಯ ಪ್ರದರ್ಶನವಿದೆ. 26ರಂದು ಶ್ರವಣ್ ಯು.ಎಂ., ಸಂಗೀತಾ ಅಯ್ಯರ್, ಸುಮತಿ ವಿ. ಅವರಿಂದ ನೃತ್ಯಪದರ್ಶನ ನಡೆಯಲಿದೆ. ಪ್ರಿಯದರ್ಶಿನಿ ವಾಸುದೇವ್, ಮಾಧುರಿ ಅಚಲ್, ಸುಮಾ ರಾಜೇಶ್, ಮಿಥುನ್ ಶ್ಯಾಂ ಅವರಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಸಂಜೆ 6ಕ್ಕೆ ❖



ಆರಲ್

ಆರಲ್ ಅಗರ್‌ವಾಲ್ ರಂಗಪ್ರವೇಶ

ಕೃಶಾಲಾ ಡ್ಯಾನ್ಸ್ ಥಿಯೇಟರ್ ಸಂಸ್ಥಾಪಕಿ ಸಿಮ್ರಾನ್ ಗೋಧ್ವಾನಿ ಅವರ ಶಿಷ್ಯೆ ಆರಲ್ ಅಗರ್‌ವಾಲ್ ಅವರ ರಂಗಪ್ರವೇಶ ಜನವರಿ 26ರಂದು ಭಾನುವಾರ ಸಂಜೆ 4.30ಕ್ಕೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನಡೆಯಲಿದೆ.

ಕಥಕ್ ನೃತ್ಯವನ್ನು ಬಹಳ ಆಸ್ಥೆಯಿಂದ ಕಲಿಯುತ್ತಿರುವ ಆರಲ್ ವೇದಿಕೆಯಲ್ಲಿ ನೃತ್ಯ ಕಾರ್ಯಕ್ರಮ ನೀಡುವ ಪ್ರಯಾಣ ಈ ರಂಗಪ್ರವೇಶದಿಂದ ಆರಂಭಗೊಳ್ಳಲಿದೆ. ಕಥಕ್‌ನಲ್ಲಿ ಕಲಿತ ಹಲವು ಪಟ್ಟುಗಳು, ಶುದ್ಧ ನೃತ್ಯ, ಲಯ, ಚಲನೆಯ ಕೌಶಲಗಳನ್ನು ಆರಲ್ ವ್ಯಕ್ತಪಡಿಸಲಿದ್ದಾರೆ. ❖

'ಕಾಮಿಕ್ ಕಾನ್'ನಲ್ಲಿ ಸೃಜನಶೀಲ ಮನಸ್ಸುಗಳು



ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಕೆಟಿಪಿಒದಲ್ಲಿ ಎರಡು ದಿನಗಳ ಕಾಮಿಕ್ ಕಾನ್ ಉತ್ಸವ ನಡೆಯಿತು. ಕಾಮಿಕ್ ಪುಸ್ತಕದ ಅಭಿಮಾನಿಗಳು, ಅನಿಮೆ ಆಸಕ್ತರು, ಮೋಟಾರ್ ಸೈಕಲ್ ಪ್ರೇಮಿಗಳು ಮತ್ತು ಟೆಕ್‌ಸ್ಯಾವಿ ಯುವಕರು ಸೇರಿದ್ದರು.

ಎಲ್ಲರೂ ಯಮಹಾ ಸಂಸ್ಥೆಯು ಆಯೋಜಿಸಿದ್ದ ಮೋಟೋ ಜಿಪಿ ಗೇಮಿಂಗ್ ಸೆಟ್ ಅಪ್ ಅನ್ನು ಕಂಡು ಖುಷಿಪಟ್ಟರು. ವರ್ಚುವಲ್ ರೇಸಿಂಗ್‌ನಲ್ಲಿ ಭಾಗವಹಿಸಿದರು. ಸಮುರಾಯ್ ಥೀಮ್‌ನ ಎಂಟಿ- 03 ಮತ್ತು ವೈಝಡ್‌ಎಫ್- ಆರ್15 ಮೋಟಾರ್ ಸೈಕಲ್‌ಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಭಾಗವಹಿಸಿದವರು ಖುಷಿಯಿಂದ ಫೋಟೋ ತೆಗೆಸಿಕೊಂಡರು.

ರೇ ಝಡ್ ಆರ್ ಸ್ಟ್ರೀಟ್ ರಾಲಿ ಸ್ಕೂಟರ್ ತನ್ನ ಅಭಿಮಾನಿಗಳಿಗೆ ಸ್ಮರಣೀಯ ಕ್ಷಣಗಳನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟಿತು.

ಭಾಗವಹಿಸಿದವರು ಮೋಟಾರ್ ಸೈಕ್ಲಿಂಗ್ ಮತ್ತು ಯಮಹಾ ಕಾಲಕಾಲಕ್ಕೆ ತೋರಿಸುವ ಹೊಸತನದ ಬಗ್ಗೆ ಪ್ರೀತಿಯನ್ನು ವ್ಯಕ್ತಪಡಿಸಿದರು. ತಮ್ಮಿಷ್ಟದ ಪಾತ್ರಗಳ ಉಡುಗೆ ತೊಟ್ಟುಕೊಂಡು ಸಂಭ್ರಮಿಸಿದರು.

ಕಾಸ್ ಪ್ಲೇಯರ್‌ಗಳು ಅಭಿಮಾನಿಗಳಿಗೆ ವಿಶೇಷವಾದ ಕಾಮಿಕ್ ಕಾನ್ ಮತ್ತು ಯಮಹಾ ಬ್ರಾಂಡ್‌ನ ದಿರಿಸುಗಳು ಮತ್ತು ಸ್ಮರಣಿಕೆಗಳನ್ನು ನೀಡಿ ಸಂಭ್ರಮವನ್ನು ಹೆಚ್ಚಿಸಿದರು.

ಈ ಎರಡೂ ದಿನಗಳಲ್ಲಿ ಯುವಜನಾಂಗವು ವೈವಿಧ್ಯಮಯ ಚಟುವಟಿಕೆಗಳಲ್ಲಿ ಭಾಗವಹಿಸಿ ಸಂತೋಷಪಟ್ಟರು. ❖







email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

ANJANAPURA SITE for Sale 4th Block 30x40 Facing South good location immediate construction near last Busstop. 9845132011, 9663554448

ANJANAPURA SITE For Sale 4th Block 30x40 Developed Area Good Location Direct Owner Contact: 9880776950

ANJANAPURA 6TH Block Site No.925, 30X40ft, West Facing Good Location 10,000/-Per sqft, Negotiable. Contact: 9880812364.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 3RD Stage, Behind Motherhood Hospital, 30x45 West facing, old House for Sale. Brokers Excuse. Call: 9886711760.

BANASHANKARI 6TH Stage 10th Block, 30x40 W/F, Site, Near 100 feet Road, 1.35Cr. 9799099699, 9993959099.

Gnanabharathi

DIRECT OWNER 30x40 BDA Site Sale. Gnanabharathi 2nd Block, Amma Ashrama, Full Developed Area. 9886634578

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Horamavu

HORAMAVU AGARA 20*43 E/F BBMP E Khatha 6000/ sqft, near Banjara Layout. 7259678555/ 9972849555.

Intl Airport Road

IVC ROAD_GATED With Amenities 40x60 'A'khatha (2_sites) Immediate Settlement Unbelievable Price 2250 only_95% funding 8951240669

Jayanagar

1ST BLOCK JAYANAGAR 45x40 South, 40x60 West, 50x75 West. Contact ESHWARI ENTERPRISES- Property Consultant. 98454-97163

JAYANAGARA 4TH Block, 30x40,Near Vijaya College3.40Cr JPNagar 2nd Phase 40x60, North Facing 32000/- 9845600007

Kanakapura Road

KAGGALIPURA 'E' Khatha Site Sale 60x90 West Facing Gated Community 3,950/- Psqft. Negotioble 9740150364/ 8884707773

Kempegowda Layout

***NADAPRABHU* KEMPEGOWDA** LAYOUT 5th Block 30X40 E/F,7th Block 30x40 E/F,50x80 W/F,8th Block 40x60 W/F.and VISHVESHWARIAH LAYOUT 3rd Block 40x60 E/F. Contact:9686469799

Mysore

SITES_@MYSORE DTCP Facing State_Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD_Kote Road. 10Minutes to Airport,Ring Road, 15Minutes to Palace: 9845287802/ 8050001571.

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact:6361819741.

Padmanabha Nagar

COMMERCIAL 35X47 SITE For Sale Chikkalasandra Next to More`Super Market 40feet Road 'A'Katha East Facing 14000/- sft Call:8618443326

Rajajinagar

SALE 15X35, West facing, Rajajinagar 2nd stage A block, Good location, Near Orion mall. 9845527196.

Vishweshwariah Layout

AVAILABLE 30X40 BDA Site Viswesavaraiah Layout 1st-Block Near 100ft Parallel Road, Close To Shirke Apartment: 9035470616

"VISHVESWARAIAH 6TH-BLOCK 40x60 East facing Allottee Site Sale near 100`ft Road, Genuine Buyers only. 9845268611"

SMVL 5TH Block 40×60 East Face Near KLE Low College Semi Commercial BDA Site For Sale 8217392686

SMV 1ST Block BDA No. 3327 40x60 East 11000/- 6th Block No. 3514 Commercial 100ft Road 50x80 East 17000/-: 9844155175

'DIRECT OWNER' 30x40 & 40x60 'BDA SITE'S' Sale Vishveswaraiah Layout 1st Block, Prime Location. 8496030007

DIRECT OWNER 20x30, 30x40, 40x60 site for sale. Near RTO Vishweswaraiah Layout. No Brokerage. 8971851966, 9880781399

Kumbalgodu

SALE: EIGHT DC Converted Industrial Sites 4800 Sft each with 40 ft tar roads, touching KUMBALGUD KIADB Industrial Sheds. Price 3800/- per Sft. G.N Properties 7483338122

J P Nagar

30X40 B Khata site for immediate sale. East facing site with civic amenities in JP Nagar 8th phase near B.K. Circle. Genuine buyers only. Ph: 9844455628

AVAILABLE 30X40 And 40X60 Residential & Commercial Sites in Anjanapura, JPNagar 9th Phase. Kalpatharu- 9483494764

Rajarajeshwari Nagar

40X77 (3080.SQFT.) East`Facing, A & E Khata, BBMP`Site Sale`at SrinivasaNagar Near Krishnappa Layout,RR.Nagar Price: 3.10.Cr. Call: 9167979901.

House

Jayanagar

SALE HOUSES & Flats Jayanagar JPNagar Banashankari 30x40 30x50, 40x60, 60x90 Price 2.9cr To 10cr CLASSIC ESTATES 9845302589

Kanakapura Road

4 BEDROOM Designed Stone Constructed Duplex House And Hallow Bricks Factory For Sale Contact: 9916817739

Rajajinagar

RAJAJINAGAR 2ND Block, House for Sale G+4 (Floor) Lift 25x40 South near K.L.E College: 9743113700/ 7899570235

Poorna Pragna Layout

4BHK INDEPENDENT Designer House For Sale with office Room, Servant Room,Gim,3Car parking, 3Balcony @ 30X50 Poornaprajna Layout Call:7892586674 /9343742082

Vidyaranyapura

DUPLEX 4 BHK Lease 25L, 2 BHK Rent FF, SF, TF, FF Room Attach Bath GF 5 Shops: 8296895858

Flat

Mysore Road

AVAILABLE LEASE/ RENT/ SALE SPACIOUS 3BHK APARTMENT FLAT EIGHTH FLOOR, BASEMENT CARPARK MYSORE ROAD 8105273951

Uttarahalli

2/3/4 BHK New FLATS SALE, A Khatha, Ready-move. 40L/ 75L/ 1Cr. Carparking, Cauvery, Vaasthu. 9945224058, 6360501159.

Vijayanagar

2-BHK FLAT For Sale with Granite flooring & Fully furnished @ Prashanthnagar, Near Magadi road Housing board. Contact-9901127774 (Brokers excuse)

Commercial Land

Devanahalli

DEVANAHALLI NEAR Nandi Upachar 8 Acres, Doddaballapur Industrial 15 Acres with Shed. Nelamangala- Dabaspet Industrial Converted 12 Acres on NH-4, Also 10 Acres and Thyamagondlu- Dabaspet 1-200 Acres Available: 9980830798

Electronic City

SALE 28000SFT KIADB suitable for Industrial/ Commercial at Electronic City Phase 2,facing North and South both sides 40feet road width. Call Verna Developers, MG-Road. 9916310226/ 9620253180.

Magadi Road

COMMERCIAL LAND 4 ACRES for`Sale: Magadi Road, Shanubhoganahalli, Clear Title, Brokers Excuse. Contact: 8105688602.

Commerical

Yelahanka

YELAHANKA NEAR ASIAN Mall 72000 Sft, Vijayanagar Near Indraprasta 60x90 and 6700 Sft, Malleswaram 140x160, Cunningham Cresent Road 19000 Sft, Jayanagar, Basavangudi, Rajajinagar, BSK, Sadashivnagar Residental/ Commercial Sites: 9845057822

Industrial & Factory

Electronic City

ELECTRONIC CITY Phase-1 Phase-2, Bommasandra Industrial Area 1- 5 Acres Close to Main Road. Kanakapura Main Road after Harohalli 32 Acres, Hosakote KIADB 4.5 Acres, Mysore Road Near KADAMBA: 9845057822

Yeshwanthpur

PEENYA 1 Acre Commercial Land with 30,000 Sft Shed, Suitable: MNC/ Engineering Shed, Also 1,25,000 Builtup For Garments and KAIDB Plots any Measurements Available: 9980830798

COMMERCIAL PREMISES for RENT: 24,000 Sft. with LIFT. Ground, 1st, 2nd, 3rd and 4th floor, Chunchaghatta Main Road, 5 Minutes from yelchenahalli Metro Station, Bangalore-78 (Site No.7, 8 Portion) 18 and 19 Portion) Suitable for Pickle/ Icecream Factory/ Teachers/ Tution Centers/ Garments Contact: 88848-55475/ 96111-83868 Email: sheela.acc1 @gmail.com

VACANT LAND 3.5 Acres for RENT SY. No.17/2, 17/4, 17/7, 17/5, 17/10 KUMBALAGODU VILLAGE, KENGERI HOBLI, Bangalore South- 560074 Suitable for any Industry/ Parking/ Ready Mix Concrete. Contact: 88848-55475/ 96111-83868 Email: Sheela.acc1 @gmail.com

VACANT LAND 10 ACRES for RENT SY NO. 91, 144, 92 THAVAREKERE HOBLI, YELACHAGUPPE VILLAGE, BANGALORE URBAN DSITRICT, Bangalore South- 562130 Suitable for any Industry, Parking or Ready Mix Concrete Contact: 88848-55475/ 96111-83868 Email: Sheela.acc1 @gmail.com

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

FACTORY SHEAD For Rent with 125 KWV Power, Around 24,000Sft built-up Including Staffroom, Watchman room, in 1Acre Industrial Converted Plot, Location: Just 1km from Nelamangala Kunigal Toll on NH Road: Sudarshan 9945275995.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE FOR LEASE 300 Sft.Lalbagh Main Road East`Facing Ideal for Stationary/ Showrooms, Next to CMS Jain College. 8296947177

RENT/SALE COMMERCIAL Building on 11th Main,3rd block Jayanagar- 1st & 2nd floor- 1750 Sq.ft. Each Floor. Contact: 9535553068

REAL ESTATE BUYING

Agricultural Land Converted

Multiple Locations

ANEKAL/HOSKOTE NELAMANGALA Land Require 2acre`to 10acres For`Purchase with`minimum 40feet Road,`Budget Per acre 1.5cr, Agents Without Property details Don't Call, PH:9740803686

Sites

Anjanapura

WANTED BDA Site Anjanapura, Banashankari 6th Stage,Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

"REQUIRED VISHWESHWARAIH- LAYOUT 40x60 Sites Immediate settlement please Brokers excuse Contact Genuine Sellers/ Owners: 9945662333"

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

WANTED BDA SITE 30x40, 40x60, 50x80 Visweshwarayya Layout, Nagarabhavi, RHCS Layout, NGF, Banashankari 6th Stage. 8105688602.

MATRIMONIAL

Brides Wanted

Bride Required Others

ENGINEER, 52, 6 feet, own company, Bangalore, unmarried seeks graduate below 47. Mob 8698966952.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

JOB OPPORTUNITIES

Drivers

'WANTED DRIVER for real estate company with 3 yrs of experience. working hours and salary negotiable. contact 9341239981, 9916454170'

PUBLIC NOTICE

PUBLIC NOTICE

This is to inform to the General Public that, my client **Mr. N. R. Revannasiddaiah,** S/o: Late. T. S Rajappa, Aged about 70 years, Residing at Patelara Beedi, Thyamagondlu Hobli, Nelamangala Taluk, Bangalore Urban District, has lost the following Original Sale deed Dated.20.02.2024 Reg on 21.06.2014 as **Doc No.NMG-1-02857/2014-15** of **Book -1** Stored in **CD No. NMGD308** in the office of the sub Registrar Nelamangala, in respect of the property bearing Sy.No.41/3, measuring 01 acre, situated at Beeragondanahalli Village, Thyamagondlu Hobli, Nelamanagala Taluk.

It was lost on 01.07.2024 and he has lodged a Police complaint on **01.07.2024** with Crime Branch, Bengaluru Rural Police, vide lost article **report No.1123542/2024** in that behalf and filed an Affidavit on 01.07.2024. The General Public are hereby informed that if any person holding/trace out the above said Original document, may inform to the undersigned within **07 days** from the date of this notice.

If any person or any bank or any financial institution having any charge, lien, right, title or interest over the above said property should inform to the undersigned with the relevant documentary evidence in person within **7 days** from the date of publication of this notice failing which the title of the above said property will be presumed to be clear and marketable and my client will go further in respect of the said property.

Sd/- Sangeeta Pujar, Advocate.
Sadashivanagara, Bangalore
Mob No.9632278104
Place: Bangalore Date: 24-01-2025

I, AMIT KUMAR S/o.Mohanlal Bagrecha R/a Flat.No.2FD Pranava Radhakrishna Tranquil Apartment No.67 K.R.Road Basavanagudi Bangalore- 560004 have changed my Minor Son's Name from VIDHAAN to VIDHAAN KUMAR vide`affidavit dated:24.1.2025 before`Notary N.Nagappa Bangalore

I, AMIT KUMAR S/o.Mohanlal Bagrecha R/a.Flat No.2FD, Pranava Radhakrishna Tranquil Apartment No.67 K.R.Road Basavanagudi Bangalore- 560004 have changed my Minor Son's Name from VIVAN to VIVAN KUMAR vide`affidavit dated:24.1.2025 before Notary N.Nagappa Bangalore.

CHANGE OF NAME

I, **Archana Sarah Linson,** R/@ # B1 504, 5th Floor, 80 Trees Apartment by Surya Shakti, next to Gear International School, Kanahalli Road, Kadubesanahalli, Bangalore 560035, have changed my name to **ARCHANA SUDHARSHAN,** Vide affidavit dated: 24/01/2025, before notary S. Subashini, Bangalore.

1, SURESH.C.P Residing at No.103, Shampura, Main Road, Opp to Indian Oil Petrol Bunk, A.C.Post, Bengaluru- 560045 Have changed my minor Daughter name from LASYA.S to LAHARII.S Vide affidavit dated 13.11.2024 before Notary Dayananda, Metropolitan Area Bangalore.

I, SRIVIDYA N D/o Nagaraj .S aged about 36 Years, resident of Kadripura, Kolar 563101. Have changed my name to Sreevidya .N vide affidavit dated 24.01.2025 before Notary Bisappa Gowda Kolar. Henceforth I shall be called as Sreevidya N only.

THE IDEAL HOMES CO-OPERATIVE BUILDING SOCIETY LIMITED
(Reg. No. DYR 352 dt. 29.4.1964)
Ideal Homes Township, Mysore Road,
Bangalore - 560 098. Ph: 28600892 / 35006228
Email: ihcbs.idealhomes@gmail.com

ELECTION NOTICE

The Election to the Board of Directors of the Society for the year 2025-26 to 2029-30 (5 years) has been scheduled to be held on 9th **February 2025 (Sunday)** from **9:00 a.m. to 4:00 p.m.** at the Ideal Homes Community Hall of the Society. Filing of **Nominations starts from 26-01-2025 to 01-02-2025 up to 3:00 p.m.**

Individual Election Notices have already been posted in time to the addresses of all the Eligible Members. If the same has not been received, please treat this publication itself as the Election Notice.

By Order of the Board of Directors
Place : Bangalore Sd/-
Date : 23-01-2025 SECRETARY

PERSONAL

Change of Name

CHANGE OF NAME

I, **Mrinalika M.N,** R/a #84, KHB Colony, JB Kaval, Nandini Layout Post, Bangalore-560096 have changed my name to **MRINALIKA MANDAYAM NYAYACHAVADI** vide affidavit dated 24/01/2025 before notary D G Shanthappa Bangalore


I, SANJAYA KUMAR MOHANTY R/a #208, 2nd floor, Brindavan Apt, Trinity Complex, Sarjapur road, Sarjapura, Bengaluru- 562125 Have Changed My Name From SANJAYA KUMAR MOHANTY To SANJAY MOHANTY Vide Affidavit Dated 20/01/2025 before Notary Mohammed Hussain K Bangalore

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಥೈರಾಯ್ಡ್ ಗಂಟುಗಳು ಕ್ಯಾನ್ಸರ್‌ಕಾರಕವೇ?



ಡಾ. ಮಂಜುನಾಥ ಮಾಳಿಗೆ

ಥೈರಾಯ್ಡ್ ಸಮಸ್ಯೆ ಈಚೆಗೆ ಹೆಚ್ಚುತ್ತಿದೆ. ಜೀವನಶೈಲಿಯಲ್ಲಿನ ಬದಲಾವಣೆಯು ಇದಕ್ಕೆ ಬಹುದೊಡ್ಡ ಕಾರಣವಾಗಿದೆ. ದೇಹದಲ್ಲಿ ಅಯೋಡಿನ್ ಕೊರತೆ ಉಂಟಾದರೆ ಗಾಯಿಟರ್ ಮತ್ತು ಹೈಪೋಥೈರಾಯ್ಡ್‌ಗಳಿಗೆ ಕಾರಣವಾಗಬಹುದು. ಮಹಿಳೆಯರಲ್ಲಿ ಎಂಡೋಕ್ರೈನ್ ಗ್ರಂಥಿಗಳಲ್ಲಿ ವ್ಯತ್ಯಾಸ ಉಂಟಾಗಬಹುದು.

ಥೈರಾಯ್ಡ್ ಗ್ರಂಥಿಯ ಕೆಲಸವೇನು?

ಕುತ್ತಿಗೆಯ ಭಾಗದಲ್ಲಿ ಚಿಟ್ಟೆಯ ಆಕಾರದಲ್ಲಿರುವ ಥೈರಾಯ್ಡ್ ಗ್ರಂಥಿಯು ಜೀರ್ಣಕ್ರಿಯೆ, ಮೂಡ್‌ಸ್ವಿಂಗ್ಸ್, ಉತ್ಸಾಹ, ದೇಹದ ಉಷ್ಣತೆ, ಜೀರ್ಣಕ್ರಿಯೆ, ನಾಡಿ ಮತ್ತು ಹೃದಯದ ಬಡಿತ, ಜೀರ್ಣಕ್ರಿಯೆ ಸೇರಿದಂತೆ ಹಲವು ಜೈವಿಕ ಕ್ರಿಯೆಗಳಿಗೆ ಅಗತ್ಯವಿರುವ ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಮುಖ್ಯವಾಗಿ ಥೈರಾಕ್ಸಿನ್ (T4), ಟ್ರಯೊಡೋಥೈರೋನೈನ್ (T3)ಸೇರಿದಂತೆ ಎರಡೂ ಹಾರ್ಮೋನ್‌ಗಳು ಥೈರಾಯ್ಡ್ ಗ್ರಂಥಿಯಿಂದ ಉತ್ಪಾದನೆಗೊಳ್ಳುತ್ತವೆ.

ಹೆಚ್ಚುತ್ತಿರುವ ಥೈರಾಯ್ಡ್ ಕ್ಯಾನ್ಸರ್!

ಥೈರಾಯ್ಡ್ ಗ್ರಂಥಿಯಲ್ಲಿ ಕಾಣಿಸಿಕೊಳ್ಳುವ ಗಂಟುಗಳು ಕೆಲವೊಮ್ಮೆ ಕ್ಯಾನ್ಸರ್ ಆಗಿಯೂ ರೂಪುಗೊಳ್ಳಬಹುದು. ಸಂಶೋಧನೆಯ ಪ್ರಕಾರ ಥೈರಾಯ್ಡ್ ಕ್ಯಾನ್ಸರ್ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿದೆ. ಭಾರತದಲ್ಲಿ ಪ್ರತಿ ಲಕ್ಷ ಜನರಿಗೆ 5.4 ಥೈರಾಯ್ಡ್ ಕ್ಯಾನ್ಸರ್ ಪ್ರಕರಣಗಳು ಕಂಡುಬರುತ್ತಿವೆ. ಮೊದಲಿಗೆ ಥೈರಾಯ್ಡ್ ಗಂಟುಗಳ ರಚನೆಯನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿದೆ. ಥೈರಾಯ್ಡ್ ಗಂಟುಗಳನ್ನು ಹೀಗೆ ವಿಂಗಡಿಸಲಾಗಿದೆ. ಒಂಟಿ (ಒಂದು ಗಂಟು), ಬಹು (ಒಂದಕ್ಕಿಂತ ಹೆಚ್ಚು ಗಂಟುಗಳು), ಸಿಸ್ಟಿಕ್ (ದ್ರವದಿಂದ ತುಂಬಿದ) ಮತ್ತು ಘನ ಗಂಟುಗಳು.

ಗಂಟುಗಳಾಗಲು ಕಾರಣಗಳು

ತಲೆ ಮತ್ತು ಕತ್ತಿನ ಭಾಗದಲ್ಲಿ ವಿಕಿರಣ ಬಿದ್ದಿದ್ದರೆ, ಆನುವಂಶೀಕ ಕಾರಣಗಳು, ವಯಸ್ಸಾದಂತೆ ಕಬ್ಬಿಣದ ಕೊರತೆ, ರಕ್ತಹೀನತೆ, ಧೂಮಪಾನ, ಬೊಜ್ಜು, ಅತಿಯಾದ ಮದ್ಯ ಬಳಕೆ, ಹಾರ್ಮೋನ್ ವ್ಯತ್ಯಯ, ಇನ್ಸುಲಿನ್ ಮಟ್ಟ ಹೆಚ್ಚಳ, ಗರ್ಭಕೋಶದಲ್ಲಿ ಫೈಬ್ರಾಯ್ಡ್‌ಗಳಿಂದಾಗಿ ಥೈರಾಯ್ಡ್ ಗಂಟುಗಳು ಉಂಟಾಗಬಹುದು. .

ಎಲ್ಲಾ ಥೈರಾಯ್ಡ್ ಗಂಟುಗಳು ಕ್ಯಾನ್ಸರ್ ಗಡ್ಡೆಗಳಾಗಬೇಕಿಲ್ಲ. ಹೀಗಿದ್ದೂ ಗಂಟುಗಳ ಬಗ್ಗೆ ಜಾಗ್ರತೆ ವಹಿಸಬೇಕು. ಸಾಮಾನ್ಯವಾಗಿ ಥೈರಾಯ್ಡ್ ಗ್ರಂಥಿಯಲ್ಲಿ ಒಂದು ಅಥವಾ ಹೆಚ್ಚಿನ ಅಂಗಾಂಶ ಬೆಳವಣಿಗೆಯನ್ನು ಕೊಲಾಯ್ಡ್ ಗಂಟುಗಳು ಎಂದೂ ಕರೆಯಲಾಗುತ್ತದೆ. ಈ ಬೆಳವಣಿಗೆಳು ಹಾನಿಕಾರಕವಲ್ಲ. ಇವು ಹರಡುವುದಿಲ್ಲ. ಇವು ದೊಡ್ಡದಾದರೂ ಆತಂಕ ಪಡಬೇಕಾಗಿಲ್ಲ. ಭಾಗಶಃ ಘನ ಮತ್ತು ಭಾಗಶಃ ದ್ರವದಿಂದ ತುಂಬಿದ್ದರೆ ಅದನ್ನು ಥೈರಾಯ್ಡ್ ಚೀಲಗಳು ಎಂದೂ ಕರೆಯಲಾಗುತ್ತದೆ. ಸಿಸ್ಟಿಕ್ ಗಂಟುಗಳಿಂದ ಕ್ಯಾನ್ಸರ್ ಬರುವ ಸಾಧ್ಯತೆ ಕಡಿಮೆ. ಹೈಪರ್ ಥೈರಾಯ್ಡ್ ಗಂಟುಗಳಿಂದ ಉತ್ಪತ್ತಿಯಾಗುವ ಹೆಚ್ಚುವರಿ ಥೈರಾಯ್ಡ್ ಹಾರ್ಮೋನ್‌ಗಳಿಂದ ಉಂಟಾಗಬಹುದು.

ಥೈರಾಯ್ಡ್ ಗಂಟುಗಳು ರೂಪುಗೊಳ್ಳುವಾಗ ಯಾವುದೇ ಗುಣಲಕ್ಷಣಗಳನ್ನು ತೋರಿಸುವುದಿಲ್ಲ. ಗಂಟುಗಳು ದೊಡ್ಡದಾಗುತ್ತಿದ್ದರೆ, ದನಿ ಹೊರಡಿಸಲು ಕಷ್ಟವಾದರೆ, ತಿನ್ನಲು ಕಷ್ಟವಾದರೆ, ಉಸಿರಾಡಲು ತೊಂದರೆ ಕೊಟ್ಟರೆ, ಗಾಯಿಟರ್ ಥೈರಾಯ್ಡ್ ಗ್ರಂಥಿಯ ಹಿಗ್ಗುವಿಕೆ, ಥೈರಾಯ್ಡ್ ಗ್ರಂಥಿಯ ಹಿಗ್ಗುವಿಕೆ, ಕುತ್ತಿಗೆ ನೋವು ಕಾಣಿಸಿಕೊಳ್ಳಬಹುದು. ಥೈರಾಯ್ಡ್ ಗ್ರಂಥಿಯಲ್ಲಿ ಹಲವು ಬಗೆಯ ಕ್ಯಾನ್ಸರ್‌ಗಳು ಉಂಟಾಗಬಹುದು. ಪ್ಯಾಪಿಲ್ಲರ್ ಥೈರಾಯ್ಡ್ ಕ್ಯಾನ್ಸರ್, ಪೋಲಿಕ್ಯುಲರ್ ಥೈರಾಯ್ಡ್ ಕ್ಯಾನ್ಸರ್, ಆಂಕೊಸೈಟಿಕ್ ಕಾರ್ಸಿನೋಮ, ಮೆಡುಲ್ಲರಿ ಥೈರಾಯ್ಡ್ ಕ್ಯಾನ್ಸರ್, ಅನಾಪ್ಲಾಸ್ಟಿಕ್ ಥೈರಾಯ್ಡ್ ಕ್ಯಾನ್ಸರ್. ಪ್ಯಾರಾಥೈರಾಯ್ಡ್, ಸರ್ಕೋಮಾ, ಎಸ್‌ಸಿಸಿ ಮತ್ತು ಥೈರಾಯ್ಡ್ ಲಿಂಫೋಮಾ.

ಪತ್ತೆ ಹೇಗೆ?

ಥೈರಾಯ್ಡ್‌ನಲ್ಲಿ ಯಾವುದೇ ಗಡ್ಡೆಗಳು ವಿಪರೀತ ದೊಡ್ಡದಾಗಿದ್ದು ಕಂಡು ಬಂದರೆ ಅಲ್ಟ್ರಾ ಸೌಂಡ್ ಮೂಲಕ ತಿಳಿಯಬಹುದು. ಗಂಟು ಘನವಾಗಿದೆಯೇ ಅಥವಾ ದ್ರವದಿಂದ ಕೂಡಿದೆಯೇ ಎಂದು ಇಮೇಜಿಂಗ್ ತಂತ್ರಜ್ಞಾನದಿಂದ ಅರಿತು ಚಿಕಿತ್ಸೆ ನೀಡಬಹುದು. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಹಚ್ಚಿದರೆ, ಅದರಿಂದಾಗುವ ಅಪಾಯವನ್ನು ತಪ್ಪಿಸಬಹುದು. ಅಯೋಡಿನ್ ಕೊರತೆಯಾಗದಂತೆ, ಅನಗತ್ಯವಾಗಿ ವಿಕಿರಣಗಳಿಗೆ ಒಡ್ಡಿಕೊಳ್ಳದಂತೆ ನೋಡಿಕೊಳ್ಳಬೇಕು. ಆದಷ್ಟು ಬಿಳಿ ಉಪ್ಪಿನ ಸೇವನೆ ಕಡಿಮೆ ಮಾಡಿ, ಗುಲಾಬಿ ಬಣ್ಣದ ಲವಣ ಬಳಸಬಹುದು.

ಎಂಡೋಕ್ರೈನಾಲಜಿಸ್ಟ್, ಸಾಕ್ರಾ ವರ್ಲ್ಡ್ ಆಸ್ಪತ್ರೆ

ಮಕ್ಕಳಲ್ಲೂ ಹೆಚ್ಚಿದ ಉಸಿರಾಟದ ಸಮಸ್ಯೆ

ಡಾ. ಅಶೋಕ್ ಎಂ.ವಿ.

ಕಾಳಜಿ

ಇತ್ತೀಚಿನ ದಿನಗಳಲ್ಲಿ ಚಿಕ್ಕ ಮಕ್ಕಳಲ್ಲಿ ಅಂದ್ರೆ ಮೂರರಿಂದ ಆರು ತಿಂಗಳ ಒಳಗಿನ ಮಕ್ಕಳಲ್ಲೂ ಶ್ವಾಸಕೋಶ ಸಂಬಂಧಿತ ಮತ್ತು ಬ್ರಾಂಕೈಟಿಸ್ ಸಮಸ್ಯೆಯು ಕಾಣಿಸಿಕೊಳ್ಳುತ್ತಿದೆ. ಇದು ಅಸಹಜವೆಂದೇ ಭಾವಿಸಬೇಕು.



ಹವಾಮಾನದಲ್ಲಿ ಉಂಟಾಗುವ ಏರಿಳಿತ, ಚಳಿಗಾಲವೂ ಮಕ್ಕಳಲ್ಲಿ ಶೀತ, ಕೆಮ್ಮು, ಉಬ್ಬಸ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಹವಾಮಾನದಲ್ಲಿ ವೈಪರೀತ್ಯ ಹೆಚ್ಚು. ಹಾಗಾಗಿ ಮಕ್ಕಳಲ್ಲಿ ವೈರಾಣು ಸೋಂಕು ತಗುಲುವ ಸಾಧ್ಯತೆ ಹೆಚ್ಚಿರುತ್ತದೆ. ಉಬ್ಬಸ, ಆಸ್ತಮಾ, ಶ್ವಾಸಕೋಶ ಸಂಬಂಧಿತ ಮತ್ತು ಉಸಿರಾಟ ಸಂಬಂಧಿತ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಮನೆಯಲ್ಲಿರುವ ಮಕ್ಕಳು, ಪೋಷಕರು ಹೊರಗಡೆ ಹೋಗುವಾಗ ಮಾಸ್ಕ್ ಧರಿಸುವುದು ಒಳ್ಳೆಯದು.

ಚಿಕ್ಕಮಕ್ಕಳಲ್ಲಿ ಬ್ರಾಂಕೈಟಿಸ್ ಸಮಸ್ಯೆ ಕಂಡುಬರುವುದು ಸಾಮಾನ್ಯ. ವೈರಾಣುವಿಗೆ ದಾಳಿಗೆ ತುತ್ತಾದ ಒಂದು ಮಗುವಿನ ಸಂಪರ್ಕದಿಂದ ಮತ್ತೊಂದು ಮಗುವಿಗೆ ಹರಡುವ ಸಾಧ್ಯತೆ ಹೆಚ್ಚು. ಕುಟುಂಬದಲ್ಲಿ ಯಾರಾದರೂ ಆಸ್ತಮಾ ಹೊಂದಿದ್ದರೆ, ಮಕ್ಕಳು ಬಹುಬೇಗ ವೈರಾಣುವಿನ ದಾಳಿಗೆ ತುತ್ತಾಗುತ್ತಾರೆ. ದೂಳು ಮತ್ತು ವೈರಾಣು ಜ್ವರದಿಂದಲೂ ಆಸ್ತಮಾ ಕಂಡುಬರಬಹುದು. ಪೋಷಕರು ನಿಗದಿತ ಸಮಯದಲ್ಲಿ ಲಸಿಕೆ ಹಾಕಿಸುವ ಮೂಲಕ ಜಾಗ್ರತೆ ವಹಿಸಿ.

ವಿಪರೀತ ಕಫ ಕಟ್ಟಿಕೊಂಡಿದ್ದರೆ ಮಕ್ಕಳಿಗೆ ನೆಬ್ಯುಲೈಸೇಶನ್ ಮತ್ತು ದೊಡ್ಡ ಮಕ್ಕಳಿಗೆ ಕೆಮ್ಮಿನ ಔಷಧಿಯನ್ನು ನೀಡಲಾಗುತ್ತದೆ. ಒಂದು ವೇಳೆ ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡದಿದ್ದಲ್ಲಿ ಹೈಪೋಕ್ಸಿಯಾಗೆ ಕಾರಣವಾಗಬಹುದು. ದೇಹಕ್ಕೆ ಕಡಿಮೆ ಆಮ್ಲಜನಕ ಪೂರೈಕೆಯಾಗುವ ಕಾರಣ ನ್ಯುಮೋನಿಯಾಕ್ಕೆ ತಿರುಗಬಹುದು. ದೇಹದಲ್ಲಿ ಆಮ್ಲಜನಕವು ಕಡಿಮೆಯಾದಂತೆ ಪರಿಸ್ಥಿತಿ ಹದಗೆಡಬಹುದು. ಹಾಗಾಗಿ ಮಕ್ಕಳನ್ನು ಹೊರಗಿನ ವಾತಾವರಣಕ್ಕೆ ಒಡ್ಡುವುದಕ್ಕೆ ಮಿತಿ ಹಾಕಿಕೊಳ್ಳಿ. ಅತಿಯಾದ ಜ್ವರ, ಶೀತ, ಕೆಮ್ಮಿನ ಸಮಸ್ಯೆಯಿಂದ ಬಳಲುತ್ತಿದ್ದರೆ ವೈದ್ಯರನ್ನು ಸಂಪರ್ಕಿಸಿ.

ಮಕ್ಕಳತಜ್ಞ, ವಾಸವಿ ಆಸ್ಪತ್ರೆ

ಸಂಧಿವಾತಕ್ಕೆ ವ್ಯಾಯಾಮ ಮದ್ದಾಗಬಲ್ಲದು

ಡಾ. ಮಾನಸ

ಅವೈಜ್ಞಾನಿಕವಾಗಿ ವ್ಯಾಯಾಮ ಮಾಡಿದರೆ ಮೂಳೆಗಳು ಸವೆಯುತ್ತವೆ ನಿಜ. ಆದರೆ, ಕ್ರಮಬದ್ಧವಾಗಿ ವ್ಯಾಯಾಮ ಮಾಡುವುದರಿಂದ ಸಂಧಿವಾತಕ್ಕೆ ಪರಿಹಾರವಿದೆ ಎಂಬುದನ್ನು ಮರೆಯುವ ಹಾಗಿಲ್ಲ. ನೋವಿನ ಕೀಲುಗಳು ಮತ್ತು ಅವುಗಳ ಸುತ್ತವಿರುವ ಸ್ನಾಯುಗಳನ್ನು ಬಲಪಡಿಸಲು, ಮೂಳೆ ಸದರವಾಗದಂತೆ ತಡೆಯಲು ವ್ಯಾಯಾಮ ಉತ್ತಮ ರೀತಿಯಲ್ಲಿ ನೆರವು ನೀಡಬಲ್ಲದು. ಊತ ಮತ್ತು ನೋವನ್ನು ನಿಯಂತ್ರಿಸಿ, ಕಾರ್ಟಿಲೆಜ್ ಇನ್ನಷ್ಟು ನಯಗೊಳ್ಳಲು, ಬಿಗಿತ ಕಡಿಮೆಯಾಗಲು ವ್ಯಾಯಾಮ ಸಹಕಾರಿಯಾಗುತ್ತದೆ.

ವ್ಯಾಯಾಮ ನಿಯಮಿತವಾಗಿದ್ದರೆ ದೇಹ ಶೀಘ್ರ ದಣಿವಾಗುವುದನ್ನು ತಪ್ಪಿಸಬಹುದು. ನಿದ್ರೆಯು ಚೆನ್ನಾಗಿ ಬರುತ್ತದೆ. ಕೀಲುಗಳಲ್ಲಿರುವ ಕಾರ್ಟಿಲೆಜ್ ಹದಗೆಟ್ಟಾಗ ಅಸ್ಥಿ ಸಂಧಿವಾತ ಸಂಭವಿಸುತ್ತದೆ. ವ್ಯಾಯಾಮದಿಂದ ದೇಹದೆಲ್ಲೆಡೆಗೆ ರಕ್ತಪೂರೈಕೆ ಸಮರ್ಪಕವಾಗಿ ಆಗುತ್ತದೆ. ಇದರಿಂದ ಕಾರ್ಟಿಲೆಜ್‌ಗೆ ಅಗತ್ಯವಿರುವ ಪೋಷಕಾಂಶಗಳು ರವಾನೆಯಾಗುತ್ತದೆ.

ವ್ಯಾಯಾಮವು ಥೆರಪಿಯೇ...

ಅತಿಯಾದ ವ್ಯಾಯಾಮ ಪಟ್ಟುಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಸಂಧಿವಾತ ಇರುವವರು ಲಘು ವ್ಯಾಯಾಮಗಳನ್ನು ಮಾಡಬೇಕು. ಹಾರ್ಮೋನ್ ಅಸಮತೋಲನ ಮತ್ತು ಹೃದ್ರೋಗದಂಥ ಸಮಸ್ಯೆಗಳಿರುವವರು ವೈದ್ಯರ ನಿಗಾದಲ್ಲಿ ವ್ಯಾಯಾಮಗಳನ್ನು ಮಾಡುವುದು ಒಳಿತು. ಸದಾ ಸೂಕ್ತ ಪಾದರಕ್ಷೆಗಳನ್ನು ಧರಿಸಿ.

ವ್ಯಾಯಾಮದಿಂದಾಗುವ ಪ್ರಯೋಜನಗಳು:ದೈಹಿಕವಾಗಿ ಸದೃಢರನ್ನಾಗಿ ಮಾಡುವುದಲ್ಲದೇ, ಮಾನಸಿಕ ಯೋಗಕ್ಷೇಮವನ್ನು ಸುಸ್ಥಿತಿಯಲ್ಲಿಡುತ್ತದೆ. ದೇಹದ ಎಲ್ಲ ಭಾಗಗಳಿಗೂ ಸರಿಯಾದ ಪೋಷಕಾಂಶ ದೊರೆಯುವುದರಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ಸಂಧಿವಾತ ಹೊಂದಿರುವವರಲ್ಲಿ ಖಿನ್ನತೆಯು ಸಾಮಾನ್ಯವಾಗಿದ್ದು, ವ್ಯಾಯಾಮದಿಂದ ಪರಿಹಾರ ಸಿಗಬಲ್ಲದು.

ಕೀಲುಗಳು ಎಷ್ಟರ ಮಟ್ಟಿಗೆ ನಮ್ಯವಾಗಿ ಚಲಿಸಬಲ್ಲದು ಎಂಬುದನ್ನು ಮೊದಲು ಗಮನಿಸಿ. ಅದರ ಆಧಾರ ಮೇಲೆ ವ್ಯಾಯಮ ಮಾಡಿ. ಸ್ನಾಯುವಿನ ಶಕ್ತಿ ಮತ್ತು ಧಾರಣಾ ಶಕ್ತಿಯನ್ನು ಹೆಚ್ಚಿಸುವ ವ್ಯಾಯಾಮಗಳನ್ನು ಆಯ್ಕೆ ಮಾಡಿ. ಜಡ ಜೀವನಶೈಲಿಯಿಂದ ಹೊರ ಬರಲು ಏರೋಬಿಕ್ ವ್ಯಾಯಾಮ ಉತ್ತಮ.



ಯಾವಾಗಲೂ ಕಡಿಮೆ ಸ್ಟ್ರೆಚಿಂಗ್ ಇರುವ ವ್ಯಾಯಾಮಗಳನ್ನು ಆರಿಸಿಕೊಳ್ಳಿ. ವಿಶೇಷವಾಗಿ ಸಂಧಿವಾತ ಇರುವವರಲ್ಲಿ ಕಾರ್ಟಿಲೆಜ್ ಅನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ವ್ಯಾಯಾಮ ಇರಬೇಕು. ಒಮ್ಮೆಲೇ ಶ್ರಮದಾಯಕ ವ್ಯಾಯಾಮಗಳಿಂದ ಆರಂಭಿಸಬೇಡಿ. ಬದಲಿಗೆ ಲಘು ವ್ಯಾಯಾಮಗಳನ್ನು ಆರಿಸಿಕೊಳ್ಳಿ. ಕೀಲುಗಳ ನೋವಿಗೆ ಬಿರುಸು ನಡಿಗೆಯೂ ಉತ್ತಮ ಔಷಧವಾಗಬಲ್ಲದು.

ಸಂಧಿವಾತ ಇರುವವರು ಹೆಚ್ಚು ದೈಹಿಕ ಚಟುವಟಿಕೆಯಿಂದ ಇರಬಾರದು ಎಂಬ ತಪ್ಪು ಕಲ್ಪನೆಯಿದೆ. ದೈಹಿಕ ಚಟುವಟಿಕೆ ಮತ್ತು ವಿಶ್ರಾಂತಿಗಳ ನಡುವೆ ಸಮತೋಲನ ಸಾಧಿಸವುದಷ್ಟೆ ಮುಖ್ಯವೇ ಹೊರತು ಚಟುವಟಿಕೆಯಿಂದ ಇಲ್ಲದೇ ಇರುವುದಲ್ಲ. ವ್ಯಾಯಾಮವು ವೈಜ್ಞಾನಿಕವಾಗಿ ಇಡೀ ದೇಹಕ್ಕೆ ಅಗತ್ಯವಿರುವಷ್ಟು ಮಾಡಬೇಕು. ಬದಲಿಗೆ ಕೇವಲ ನೋವುಪೀಡಿತ ಕೀಲುಗಳನ್ನು ಗಮನದಲ್ಲಿಟ್ಟುಕೊಂಡು ವ್ಯಾಯಾಮ ಮಾಡಿದರೆ ನೋವು ಉಲ್ಬಣಗೊಳ್ಳುವ ಸಾಧ್ಯತೆ ಹೆಚ್ಚು.

ಹಿರಿಯ ಫಿಸಿಯೋಥೆರಪಿಸ್ಟ್, ಎಸ್‌ಬಿಎಫ್ ಹೆಲ್ತ್‌ಕೇರ್



Reliance
Growth is Life
SMART BAZAAR
PRICE METER
LOW HIGH
ದುಬಾರಿ ಮೀಟರ್ ಆಗಲಿದೆ ಫೇಲ್,
ಬಂದಿದೆ
ಫುಲ್ ಪೈಸಾ ವಸೂಲ್ ಸೇಲ್
ಕೊನೆಯ 2 ದಿನಗಳು
22nd - 26th JAN
ಗುಡ್ ಲೈಫ್ ಡೈಲಿ / ಪ್ರೀಮಿಯಂ ಸೋನಾ ಮಸೂರಿ ಕಚ್ಚಾ ರೈಸ್ 26 kg
₹43.03 /kg
₹51.88 /kg
ಸ್ಮಾರ್ಟ್ ಬೆಲೆ ₹1119/ ₹1349
ಎಮ್‌ಆರ್‌ಪಿ ₹1950 / ₹2100
ಉಳಿಸಿರಿ ₹831 / ₹751
ಗುಡ್ ಲೈಫ್ ಬಾದಾಮ್ / ಕ್ಯಾಶ್ಯೂ (W320) 500 g
ಸ್ಮಾರ್ಟ್ ಬೆಲೆ ₹409/ ₹449
ಎಮ್‌ಆರ್‌ಪಿ ₹620 / ₹725
ಉಳಿಸಿರಿ ₹211 / ₹276
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ / ರಸ್ಕ್ 230 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹120 ರಿಂದ/ಯೂನಿಟ್
ವಿಶೇಷ ಆಫರ್
BUY 2 CORNETTOS @ ₹49
ಜನವರಿ 25 ರಂದು ಮಾತ್ರ
ಸ್ಪ್ರೈಟ್ / ಕೋಕಾ ಕೋಲಾ / ಫಂಟಾ / ಥಮ್ಸ್ ಅಪ್ / ಮಾಝಾ 600 ml ರಿಂದ (ಆಯ್ದ ಪ್ರಕಾರಗಳು)
BUY ANY 3 GET ANY 1 FREE
ಎಮ್‌ಆರ್‌ಪಿ ₹42 ರಿಂದ/ಯೂನಿಟ್
ಸನ್ ಪ್ಯೂರ್ ರೀಫೈನ್ಡ್ ಸೂರ್ಯಕಾಂತಿ ಎಣ್ಣೆ 1 L / ಫಿಯೋನಾ ರೀಫೈನ್ಡ್ ಸೂರ್ಯಕಾಂತಿ ಎಣ್ಣೆ 5 L
₹125 /L
ಸ್ಮಾರ್ಟ್ ಬೆಲೆ ₹139/ ₹625
ಎಮ್‌ಆರ್‌ಪಿ ₹165 / ₹875
ಉಳಿಸಿರಿ ₹26 / ₹250
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg / ಆಶೀರ್ವಾದ್ ಸುಪೀರಿಯರ್ ಎಂಪಿ ಆಟ್ಟಾ 10 kg
₹50 ಕಡಿತ
ಸ್ಮಾರ್ಟ್ ಬೆಲೆ ₹201 (₹40.20 /kg)
ಎಮ್‌ಆರ್‌ಪಿ ₹300
ಉಳಿಸಿರಿ ₹99
ಟೂತ್‌ಪೇಸ್ಟ್ 160 g ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 33% ಕಡಿತ
ಎಮ್‌ಆರ್‌ಪಿ ₹212 ರಿಂದ
ಸಾಬೂನುಗಳು 125 g ರಿಂದ (ಮಲ್ಟಿ ಪ್ಯಾಕ್) (ಆಯ್ದ ಪ್ರಕಾರಗಳು)
ಮಿನಿಮಮ್ 40% ಕಡಿತ
ಎಮ್‌ಆರ್‌ಪಿ ₹175 ರಿಂದ
ಡಿಟರ್ಜಂಟ್ ಪೌಡರ್ 5 kg ರಿಂದ / ಲಿಕ್ವಿಡ್ 4 L ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹565 ರಿಂದ
ಸ್ಮಾರ್ಟ್ ಬೆಲೆ ₹379 ರಿಂದ
ಚಾಕೊಲೇಟ್ ಹೋಮ್ ಪ್ಯಾಕ್ (ಕ್ಯಾಡ್ಬರಿಸ್ ಜೆಮ್ಸ್ / 5 ಸ್ಟಾರ್ / ನೆಸ್ಲೆ ಕಿಟ್ ಕ್ಯಾಟ್ / ಮಂಚ್ / ಸ್ನಿಕರ್ಸ್) 108 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹100 ರಿಂದ/ಯೂನಿಟ್
ಟಾಟಾ ಚಹಾ ಗೋಲ್ಡ್ 500 g
ಉಳಿಸಿರಿ ₹80
ಎಮ್ ಆರ್‌ಪಿ ₹310 ರಿಂದ
ಸ್ಮಾರ್ಟ್ ಬೆಲೆ ₹230 ರಿಂದ
3 ಪೀಸಸ್ ಬ್ರ್ಯಾಂಡೆಡ್ ಹಾರ್ಡ್ ಟ್ರಾಲಿ ಸೆಟ್
ಎಮ್‌ಆರ್‌ಪಿ ₹26000
ಸ್ಮಾರ್ಟ್ ಬೆಲೆ ₹4999
ಶಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹850 ರಿಂದ
ಉಳಿಸಿರಿ ₹451 ರಿಂದ
ಸ್ಮಾರ್ಟ್ ಬೆಲೆ ₹399
ARVIND raymond TRIDENT
100% ಕಾಟನ್ ಡಬಲ್ ಬೆಡ್ ಶೀಟ್ ನೊಂದಿಗೆ ಪಿಲ್ಲೋ ಕವರ್
ಎಮ್‌ಆರ್‌ಪಿ ₹2699 ರಿಂದ
ಸ್ಮಾರ್ಟ್ ಬೆಲೆ ₹699
SINGER Surya flame LYF Kelvinator
3 ಹಿತ್ತಾಳೆ ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್
ಎಮ್‌ಆರ್‌ಪಿ ₹7560 ರಿಂದ
ಸ್ಮಾರ್ಟ್ ಬೆಲೆ ₹1999
ಶರ್ಟ್ ಗಳು, ಟಿ-ಶರ್ಟ್ ಗಳು, ಜೀನ್ಸ್, ಡ್ರೆಸ್ ಗಳು, ಕುರ್ತಾಗಳು ಮತ್ತು ಇನ್ನಷ್ಟು
BUY 1 GET 1 FREE*
ಆರಂಭಿಕ ಬೆಲೆ ₹199
ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್ ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ . • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು. • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3ನೇ ಹಂತ. • ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೇಗೂರ್ – ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್ ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. ವಿದ್ಯಾರಣ್ಯಪುರ • ವಿಜ್ಞಾನನಗರ್ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ ಹಳ್ಳಿ, ವಿಜ್ಞಾನನಗರ್ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, ಕೆ ಆರ್ ಪುರಂ • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ : ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್ಆರ್ ಫೇಲಿಸಿಟಿ, ಡಿಎಸ್ಆರ್ ಅಲ್ಟಿಮ ಅಪಾರ್ಟ್ಮೆಂಟ್ ಹತ್ತಿರ. • ಎನ್ಆರ್ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್ : ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ. • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ. ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.
10% INSTANT DISCOUNT#
SBI card
#Min. Trxn.: ₹3,000; Max. Discount: ₹500 per Trxn.; Valid only on one Trxn. per credit card; Validity: 22 Jan - 26 Jan 2025. T&C Apply.
ಸ್ಕ್ಯಾನ್ ಮಾಡಿ ಹೆಚ್ಚಿನ ಆಫರ್ ಗಳನ್ನು ತಿಳಿದುಕೊಳ್ಳಿ
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
milkbasket
fresh Signature.
SMART BAZAAR
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಎಸ್ ಬಿಐ ಕಾರ್ಡ್ ಆಫರ್ ಸ್ಮಾರ್ಟ್ ಬಜಾರ್ ಮತ್ತು ರಿಲಯನ್ಸ್ ಫ್ರೆಶ್ ಸಿಗ್ನೇಚರ್‌ನಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಮತ್ತು ಅಪ್ಪರೇಲ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಗಳಲ್ಲಿ ಮಾತ್ರ ಊರ್ಜಿತವಿದೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು 26 ಜನವರಿ 2025. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.



सत्यमेव जयते
GOVERNMENT OF GUJARAT

From Start to Success

20+ Policies that Inspire Investor Confidence

Gujarat has 20+ sector-specific policies that incentivise investments, foster entrepreneurship, and create employment opportunities. With a focus on renewable energy, high-tech industries, and inclusive development, Gujarat ensures seamless support for businesses through its visionary and investor-friendly governance.

Aatmanirbhar Gujarat Schemes 2022 for Assistance to Industries
Supporting industries with targeted schemes for high-value sectors like green energy, electric vehicles, and medical devices to ensure local self-reliance.

Gujarat Semiconductor Policy 2022-27
Transforming Gujarat into India's semiconductor and ESDM hub, with robust support for manufacturing and innovation in semiconductor technology.

Textile Policy 2024
Aligned with the government's vision, this policy focuses on the entire textile value chain, emphasising labour-intensive units and women entrepreneurship.

Gujarat Renewable Energy Policy 2023
Driving the development of 100 GW of renewable energy capacity by 2030, with a focus on solar, wind, and hybrid projects.

New Cottage Policy 2024
Fostering the growth of self-sustaining cottage industries with a focus on skill development, innovation, and technology for artisans and entrepreneurs.

Gujarat Tourism Policy 2021-25
Positioning Gujarat as India's leading sustainable and inclusive tourism destination, with a focus on global benchmarks, facilitation and local entrepreneurs.

Gujarat IT/ITeS Policy (2022-27)
Boosting IT exports and advancing infrastructure for co-working spaces, data centers, and deep tech innovation.

Gujarat Sports Policy 2022-27
Building world-class sports infrastructure and promoting the manufacturing of sports goods through dedicated clusters.

& Many More to Boost Your Success





Invest in Gujarat

Where the World Comes to Grow

Scan the QR Code for
More Sector-centric Policies

ಅದ್ದೂರಿ ಗಣರಾಜ್ಯೋತ್ಸವಕ್ಕೆ ಸಜ್ಜಾದ ಮಾಣೆಕ್ ಷಾ ಪರೇಡ್ ಮೈದಾನ

ಖುಕ್ರಿ, ಭಾಂಗ್ರಾ ನೃತ್ಯ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಅದ್ದೂರಿ ಆಚರಣೆಗೆ ನಗರದ ಮಾಣೆಕ್ ಷಾ ಪರೇಡ್ ಮೈದಾನ ಸಂಪೂರ್ಣ ಸಜ್ಜಾಗಿದ್ದು, ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಾಹಸ ಪ್ರದರ್ಶನದ ಪೂರ್ವಭಾವಿ ತಾಲೀಮು ಶುಕ್ರವಾರ ನಡೆಯಿತು.

ಕೇರಳ ಪೊಲೀಸರ ಪಥಸಂಚಲನ, ಪಂಜಾಬಿ ಸೈನಿಕರ ಭಾಂಗ್ರಾ ಜಾನಪದ ನೃತ್ಯ, ಗೂರ್ಖಾ ರೈಫಲ್ಸ್ ತಂಡದ ಖುಕ್ರಿ ನೃತ್ಯ ಹಾಗೂ ಗ್ಯಾಟ್ಕಾ ತಂಡದ ಸಾಂಸ್ಕೃತಿಕ ಕಾರ್ಯಕ್ರಮ ಈ ಬಾರಿಯ ವಿಶೇಷಗಳಾಗಿವೆ.

ಗ್ಯಾಟ್ಕಾ ಟೀಮ್, ಮೈಸೂರಿನ ಕೆಐಆರ್‌ಪಿ ಮೌಂಟೆಡ್ ಪೊಲೀಸ್ ತಂಡದಿಂದ ಟೆಂಟ್ ಪೆಗ್ಗಿಂಗ್ ಸಹ ಇರಲಿದೆ. ಭಯೋತ್ಪಾದನಾ ನಿಗ್ರಹ ಪಡೆಯಿಂದ ಅಣುಕು ಕಾರ್ಯಾಚರಣೆ ಪ್ರದರ್ಶನವಿದೆ.

ಪಥಸಂಚಲನದ ವಿಶೇಷ: ಪಂಥ ಸಂಚಲನದಲ್ಲಿ ರಾಜ್ಯದ ಪೊಲೀಸರ ಜೊತೆಗೆ ಕೇರಳ ಪೊಲೀಸರೂ ಹೆಜ್ಜೆ ಹಾಕಲಿದ್ದಾರೆ. ಸ್ಕೌಟ್ಸ್, ಗೈಡ್ಸ್, ಎನ್.ಸಿ.ಸಿ, ಸೇವಾದಳ ಹಾಗೂ ವಿವಿಧ ಶಾಲೆಗಳ ಮಕ್ಕಳನ್ನೊಳಗೊಂಡಂತೆ ಕವಾಯತು ಮತ್ತು ಬ್ಯಾಂಡ್‌ನ ಒಟ್ಟು 38 ತುಕಡಿಗಳಲ್ಲಿ ಸುಮಾರು 1,150 ಮಂದಿ ಭಾಗವಹಿಸಲಿದ್ದಾರೆ. ಸುಮಾರು 1,500 ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುವರು. ಸಮಾರಂಭದ ಸಿದ್ಧತೆ ಪರಿಶೀಲನೆ ಬಳಿಕ ಮಾಧ್ಯಮದವರಿಗೆ ಮಾಹಿತಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, 'ಸಮಾರಂಭಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜನವರಿ 26ರ ಬೆಳಿಗ್ಗೆ 9 ಗಂಟೆಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ತೆರೆದ ಜೀಪಿನಲ್ಲಿ ಪರೇಡ್ ಪರಿವೀಕ್ಷಣೆ ಮತ್ತು ಗೌರವ ರಕ್ಷೆ ಸ್ವೀಕರಿಸುವರು. ಬಳಿಕ ಜನತೆಗೆ ಸಂದೇಶ ನೀಡಲಿದ್ದಾರೆ' ಎಂದು ತಿಳಿಸಿದರು.

ಪೊಲೀಸ್ ಹಾಗೂ ರಕ್ಷಣಾ ಇಲಾಖೆಯಿಂದ ಕ್ರಮವಾಗಿ ಎರಡು ಮತ್ತು ಮೂರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದರು.

ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡದಿಂದ ನಾಡಗೀತೆ ಮತ್ತು ರೈತಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ. ಬೆಂಗಳೂರು ದಕ್ಷಿಣ ವಲಯ-3ರ ಅಗರದ ಕರ್ನಾಟಕ ಪಬ್ಲಿಕ್ ಶಾಲೆಯ 800 ಮಕ್ಕಳು 'ನಾವೆಲ್ಲರೂ ಒಂದೇ ನಾವು ಭಾರತೀಯರು' ಹಾಗೂ ಹೇರೋಹಳ್ಳಿಯ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಒಟ್ಟು 650 ಮಕ್ಕಳು 'ಅರಿವೇ ಅಂಬೇಡ್ಕರ್' ಕುರಿತು ನೃತ್ಯ ಪ್ರದರ್ಶಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ವೀಕ್ಷಣೆಗೆ ಬರುವ ಅತಿಗಣ್ಯ, ಗಣ್ಯ, ಇತರೆ ಸಾರ್ವಜನಿಕರಿಗೆ ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ. ಆಕಸ್ಮಿಕ ವಿಪತ್ತು ಸಂಭವಿಸಿದಲ್ಲಿ ಅಗತ್ಯವಿರುವಷ್ಟು ಆಂಬುಲೆನ್ಸ್, ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ನಗರದ ಹಲವು ಆಸ್ಪತ್ರೆಗಳನ್ನು ಗುರುತಿಸಿ ಸಾಕಷ್ಟು ಸಂಖ್ಯೆಯಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ ಎಂದು ವಿವರಿಸಿದರು.

ಭದ್ರತೆ ಕುರಿತು ಮಾತನಾಡಿದ ನಗರದ ಪೊಲೀಸ್ ಕಮಿಷನರ್ ಬಿ. ದಯಾನಂದ, 'ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ. 8 ಡಿಸಿಪಿ, 17 ಎಸಿಪಿ, 44 ಪೊಲೀಸ್ ಇನ್‌ಸ್ಪೆಕ್ಟರ್, 114 ಪೊಲೀಸ್ ಸಬ್ ಇನ್‌ಸ್ಪೆಕ್ಟರ್, 58 ಎಎಸ್‌ಐ, 30 ಕ್ಯಾಮೆರಾ ಸಿಬ್ಬಂದಿ ಸೇರಿದಂತೆ ಒಟ್ಟು 1,051 ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಹತ್ತು ಕೆಎಸ್‌ಆರ್‌ಪಿ ತುಕಡಿ, ಎರಡು ಅಗ್ನಿಶಾಮಕ ವಾಹನ, ಕ್ಷಿಪ್ರ ಕಾರ್ಯಾಚರಣೆ ತಂಡ ಹಾಗೂ ಮೈದಾನದ ಸುತ್ತ 103 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ' ಎಂದರು.

ಕಾರ್ಯಕ್ರಮಕ್ಕೆ ಬರುವವರು ಪಾಸು ಮತ್ತು ಗುರುತಿನ ಚೀಟಿ ಹೊಂದಿರಬೇಕು. ಪರ್ಸ್ ಮತ್ತು ಮೊಬೈಲ್ ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ತರುವಂತಿಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಗಣರಾಜ್ಯೋತ್ಸವ ಸಮಾರಂಭದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಶಾಲಾ ಮಕ್ಕಳು ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ತಾಲೀಮು ನಡೆಸಿದರು ಪ್ರಜಾವಾಣಿ ಚಿತ್ರ

ವಾಹನ ಸಂಚಾರದಲ್ಲಿ ಮಾರ್ಪಾಡು

ಭಾನುವಾರ ಬೆಳಿಗ್ಗೆ 8.30ರಿಂದ 10.30ರವರೆಗೆ ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗೆ ಎರಡೂ ದಿಕ್ಕುಗಳಲ್ಲಿನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯವಾಗಿ ಇನ್‌ಫೆಂಟ್ರಿ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಕಡೆಗೆ ಸಂಚರಿಸುವ ವಾಹನಗಳು ನೇರವಾಗಿ ಇನ್‌ಫೆಂಟ್ರಿ ರಸ್ತೆಯಲ್ಲಿ ಎಡತಿರುವು ಪಡೆದು ಮೈನ್ ಗಾರ್ಡ್ ರಸ್ತೆ- ಅಲಿ ಸರ್ಕಲ್- ಡಿಸ್ಪೆನ್ಸರಿ ರಸ್ತೆ- ಕಾಮರಾಜ ರಸ್ತೆ ಮತ್ತು ಡಿಕನ್ಸನ್ ರಸ್ತೆ ಜಂಕ್ಷನ್ನಲ್ಲಿ ಬಲಕ್ಕೆ ತಿರುವು ಪಡೆದು ಕಾಮರಾಜ ರಸ್ತೆ- ಕಬ್ಬನ್‌ರಸ್ತೆ ಮತ್ತು ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು, ಕಬ್ಬನ್ ರಸ್ತೆ ಮುಖಾಂತರ ಮಣಿಪಾಲ್ ಸೆಂಟರ್ ಕಡೆಗೆ ಸಾಗಬಹುದು.

ಕಬ್ಬನ್ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಜಂಕ್ಷನ್‌ನಿಂದ ಬಿ.ಆರ್.ವಿ. ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ಮಣಿಪಾಲ್ ಸೆಂಟರ್ ಬಳಿ ನಿರ್ಬಂಧಿಸಲಾಗಿದೆ. ಪರ್ಯಾಯವಾಗಿ ವೆಬ್ ಜಂಕ್ಷನ್ ಬಳಿ ಬಲ ತಿರುವು ಪಡೆದು ಎಂ.ಜಿ. ರಸ್ತೆಯ ಮೂಲಕ ಮೆಯೋ ಹಾಲ್ - ಕಾವೇರಿ ಎಂಪೋರಿಯಂ - ಅನಿಲ್ ಕುಂಬ್ಳೆ ವೃತ್ತದಲ್ಲಿ ಬಲ ತಿರುವು ಪಡೆದು ಮುಂದೆ ಸಾಗಬಹುದು.

ಅನಿಲ್ ಕುಂಬ್ಳೆ ವೃತ್ತದಿಂದ ಕಬ್ಬನ್ ರಸ್ತೆ ಕಡೆಗೆ ಬರುವ ವಾಹನಗಳು ಸೆಂಟ್ರಲ್ ರಸ್ತೆಯಲ್ಲಿ ಸಾಗಿ, ಬಲಕ್ಕೆ ತಿರುವು ಪಡೆದು ಇನ್‌ಫೆಂಟ್ರಿ ರಸ್ತೆ-ಸಫೀನಾ ಪ್ಲಾಜಾ ಬಳಿ ಎಡ ತಿರುವು ಪಡೆದು ಮೈನ್‌ಗಾರ್ಡ್ ರಸ್ತೆ - ಅಲಿ ಸರ್ಕಲ್ - ಡಿಸ್ಪೆನ್ಸರಿ ರಸ್ತೆ - ಕಾಮರಾಜ ರಸ್ತೆ ಮತ್ತು ಡಿಕನ್ಸನ್ ರಸ್ತೆ ಜಂಕ್ಷನ್ - ಬಲಕ್ಕೆ ತಿರುವು ಪಡೆದು ಕಾಮರಾಜ ರಸ್ತೆ - ಕಬ್ಬನ್ ರಸ್ತೆ ಮತ್ತು ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು, ಕಬ್ಬನ್ ರಸ್ತೆ ಮುಖಾಂತರ ಮಣಿಪಾಲ್ ಸೆಂಟರ್ ಕಡೆಗೆ ಸಾಗಬಹುದಾಗಿದೆ.

ವಾಹನ ನಿಲುಗಡೆ ನಿಷೇಧಿತ ರಸ್ತೆಗಳು

- ಸೆಂಟ್ರಲ್ ಸ್ಟ್ರೀಟ್‌ನ, ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ
- ಕಬ್ಬನ್ ರಸ್ತೆಯ ಸಿ.ಟಿ.ಒ ವೃತ್ತದಿಂದ ಕೆ.ಆರ್.ರಸ್ತೆ, ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ
- ಎಂ.ಜಿ. ರಸ್ತೆಯ, ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ

ಪ್ರವೇಶ ದ್ವಾರಗಳ ವಿವರ

ಸಮಾರಂಭಕ್ಕೆ ಬರುವವರಿಗೆ ವಿವಿಧ ಬಣ್ಣದ ಪಾಸ್ ವಿತರಿಸಲಾಗಿದೆ. ವಿಐಪಿ ಪಾಸ್ ಹೊಂದಿರುವವರು ಗೇಟ್-2 ಹಾಗೂ ಮುಖ್ಯ ಅತಿಥಿಗಳು, ಗಣ್ಯರು ಗೇಟ್-3 ಮೂಲಕ ಪ್ರವೇಶಿಸಬಹುದು. ಗೇಟ್-4ರಲ್ಲಿ ಬಿಳಿ ಪಾಸ್ ಹಾಗೂ ಮಾಧ್ಯಮದವರಿಗೆ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ.

ಸಾರ್ವಜನಿಕ ಸಾರಿಗೆ ಬಳಸಲು ಮನವಿ: ಮಾಣೆಕ್ ಷಾ ಪರೇಡ್ ಮೈದಾನ ಹಾಗೂ ಸುತ್ತಮುತ್ತ ವಾಹನಗಳ ನಿಲುಗಡೆಗೆ ಸ್ಥಳಾವಕಾಶದ ಕೊರತೆಯಿರುವ ಕಾರಣ ಹಾಗೂ ಸಂಚಾರ ದಟ್ಟಣೆ ಕಡಿಮೆ ಮಾಡಲು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮತ್ತು ನಮ್ಮ ಮೆಟ್ರೊ ಸೇವೆ ಬಳಸುವಂತೆ ಸಾರ್ವಜನಿಕರಿಗೆ ಮನವಿ ಮಾಡಲಾಗಿದೆ.



ಶತಮಾನದ ಸಮತಾ ಸಂಭ್ರಮ ಕಾರ್ಯಕ್ರಮದಲ್ಲಿ ಜಿ. ಪರಮೇಶ್ವರ ಅವರು ಡಾ.ಬಿ.ಆರ್ ಅಂಬೇಡ್ಕರ್ ಅವರ ಪುತ್ಥಳಿಗೆ ಗೌರವ ನಮನ ಸಲ್ಲಿಸಿದರು. ಎಂ. ವೆಂಕಟಸ್ವಾಮಿ ಉಪಸ್ಥಿತರಿದ್ದರು

'ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯಗಳ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿಯೇ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರ ನೇತೃತ್ವದಲ್ಲಿ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯ, ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟ ಶನಿವಾರ ಆಯೋಜಿಸಿದ್ದ ಶತಮಾನದ ಸಮತಾ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ 2.5 ಲಕ್ಷ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಘೋಷಿಸಿದ್ದೇವೆ. ಈ ಸಂಬಂಧ ನಿರಂತರ ಸಭೆಗಳನ್ನು ನಡೆಸಲಾಗುತ್ತಿದೆ. ಶೀಘ್ರದಲ್ಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು' ಎಂದು ಭರವಸೆ ನೀಡಿದರು.

'ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಮತಾ ಸೈನಿಕ ಸಂಘಟನೆ ಪ್ರಾರಂಭಿಸಿ 100 ವರ್ಷ ಪೂರೈಸಿದೆ. ಶತಮಾನ ಕಳೆದರೂ ಸಂಘಟನೆಯು ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಇಂದಿಗೂ ಸಂಘಟನೆ ಉಳಿದಿರುವುದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕು' ಎಂದರು.

ಇದೇ ಸಂದರ್ಭ ಸಮತಾ ಸೈನಿಕ ದಳದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಅವರಿಗೆ 'ಸಮತಾ ಸಾರಥಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾದ ಶೇಕ್ ಲತೀಫ್, ಶ್ರೀನಿವಾಸ್ ಸಿ., ವಿಶ್ವವಿದ್ಯಾಲಯದ ಗ್ರಂಥಪಾಲಕ ಎಂ.ರಘುನಂದನ, ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಅಧ್ಯಕ್ಷ ಸತೀಶ ಜಿ.ಕೆ., ಚಂದ್ರು ಪೆರಿಯಾರ್ ಭಾಗವಹಿಸಿದ್ದರು.



ಗುತ್ತಿಗೆದಾರ ಅಂಜನ್ ಮೂರ್ತಿ ಅವರು ವ್ಯಾಪಾರಿಗಳು, ಆಟೊ ಚಾಲಕರೊಂದಿಗೆ ಕೆ.ಆರ್.ಪುರ ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು

'ಸುಂಕ ವಸೂಲಿ: ವಿನಾಕಾರಣ ತೊಂದರೆ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಕೆ.ಆರ್.ಪುರ ಮಾರುಕಟ್ಟೆಗೆ ಕಾನೂನು ಬದ್ಧವಾಗಿ ಟೆಂಡರ್ ಪಡೆದು ಸುಂಕ ವಸೂಲು ಮಾಡುತ್ತಿದ್ದರೂ ಕೆಲವರು ವಿನಾಕಾರಣ ತೊಂದರೆ ನೀಡುತ್ತಿದ್ದಾರೆ' ಎಂದು ಗುತ್ತಿಗೆದಾರ ಅಂಜನ್ ಮೂರ್ತಿ ಅವರು ವ್ಯಾಪಾರಿಗಳು, ಆಟೊ ಚಾಲಕರೊಂದಿಗೆ ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

'ಬಿಬಿಎಂಪಿ ವ್ಯಾಪ್ತಿಯ ಕೆ.ಆರ್. ಪುರ ಮಾರುಕಟ್ಟೆಗೆ 1 ಎಕರೆ 14 ಗುಂಟೆಗೆ ಟೆಂಡರ್ ಕರೆಯಲಾಗಿತ್ತು. ಈ ವೇಳೆ ₹9.81 ಲಕ್ಷಕ್ಕೆ ಟೆಂಡರ್ ನನ್ನ ಪಾಲಾಗಿರುತ್ತದೆ. ಮುಂಗಡವಾಗಿ ಮೂರು ತಿಂಗಳ ಹಣವನ್ನು ಠೇವಣಿಯಾಗಿ ಪಾಲಿಕೆಗೆ ಪಾವತಿಸಿ ಕಾನೂನು ರೀತಿಯಲ್ಲಿ ನಿಯಮಾನುಸಾರ ಸುಂಕ ವಸೂಲಿ ಮಾಡುತ್ತಿದ್ದೇನೆ. ಇದನ್ನು ಸಹಿಸದ, ಈ ಹಿಂದೆ ಟೆಂಡರ್ ಪಡೆದಿದ್ದ ಎಲೆ ಶ್ರೀನಿವಾಸ್ ಮತ್ತು ಆತನ ಸಂಗಡಿಗರು ವಿನಾಕಾರಣ ತೊಂದರೆ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

'ವ್ಯಾಪಾರಿಗಳ ಮೇಲೆ ನಿಗಾ ಇಡಲು ಪಾಲಿಕೆ ಮತ್ತು ಪೊಲೀಸ್ ಅಧಿಕಾರಿಗಳ ಅನುಮತಿಯಿಲ್ಲದೆ ರಸ್ತೆಗಳಲ್ಲಿ ಅಕ್ರಮವಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಇದನ್ನು ತೆರವುಗೊಳಿಸಿ ನ್ಯಾಯ ಒದಗಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಪಾಲಿಕೆ ಮತ್ತು ಪೊಲೀಸ್ ಠಾಣೆಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ. ಐಟಿಐನಿಂದ ವೆಂಗಯ್ಯನಕೆರೆವರೆಗಿನ ರಾಷ್ಟ್ರೀಯ ಹೆದ್ದಾರಿ ರಸ್ತೆಯ ಎರಡೂ ಬದಿಯ ವ್ಯಾಪಾರಿಗಳಿಗೆ 1 ಎಕರೆ 14 ಗುಂಟೆ ಜಾಗದಲ್ಲಿ ವ್ಯಾಪಾರ ನಡೆಸುವ ವ್ಯವಸ್ಥೆ ಮಾಡಬೇಕು. ಅಕ್ರಮ ಶೆಡ್‌ಗಳನ್ನು ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ಟೆಂಡರ್ ರದ್ದುಪಡಿಸಿ ಮುಂಗಡ ಹಣ ವಾಪಸು ನೀಡಬೇಕು' ಎಂದರು.

ವ್ಯಾಪಾರಿಗಳಾದ ಅಸ್ಲಂಬಾಬು, ಅಂಬರೀಶ್, ನಟರಾಜ್, ಕೇಶವ್, ಅಂಜನ್ ಕುಮಾರ್, ಆಟೊ ಘಟಕದ ಮುನಿಕೃಷ್ಣ, ಆನಂದ್ ರಾಜ್ ಭಾಗವಹಿಸಿದ್ದರು.

'ಚಾಲಕರಹಿತ ಮೆಟ್ರೊದಿಂದ ಕಾರ್ಯಾಚರಣೆ ಸುಗಮ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಚಾಲಕರಹಿತ ಮೆಟ್ರೊ ವ್ಯವಸ್ಥೆಯಿಂದ ಕಾರ್ಯಾಚರಣೆ ಸುಗಮಗೊಳ್ಳಲಿದ್ದು, ನಿರ್ವಹಣೆಯಲ್ಲಿನ ದಕ್ಷತೆ ಹೆಚ್ಚಾಗಲಿದೆ' ಎಂದು ಜರ್ಮನಿಯ ಡಿಬಿ ಎಂಜಿನಿಯರಿಂಗ್ ಆ್ಯಂಡ್ ಕನ್ಸಲ್ಟಿಂಗ್‌ನ ಮುಖ್ಯ ವ್ಯವಸ್ಥಾಪಕ ಮೈಕೆಲ್ ಚೂ ಹೇಳಿದರು.

ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಸುಸ್ಥಿರ ಮತ್ತು ಡಿಜಿಟಲ್ ನಿರ್ಮಾಣ ಪ್ರಕ್ರಿಯೆಗಳಲ್ಲಿ ಆವಿಷ್ಕಾರ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಚಾಲಕರಹಿತ ಮೆಟ್ರೊ ವ್ಯವಸ್ಥೆಯಿಂದ ನಿರ್ವಹಣೆ ವೆಚ್ಚ ಕಡಿಮೆಯಾಗುವ ಜೊತೆಗೆ, ಆಕ್ಸಲರೇಷನ್, ಬ್ರೇಕಿಂಗ್ ವ್ಯವಸ್ಥೆಯಲ್ಲಿ ಸುಧಾರಣೆಯಾಗಲಿದ್ದು, ಇಂಧನ ವ್ಯಯವೂ ಕಡಿಮೆಯಾಗಲಿದೆ. 'ನಮ್ಮ ಮೆಟ್ರೊ'ದಲ್ಲಿ ಚಾಲಕರಹಿತ ಕಾರ್ಯಾಚರಣೆಯನ್ನು ಅಳವಡಿಸಲಾಗುತ್ತಿದೆ. ಆದರೆ, ತುರ್ತು ಸಂದರ್ಭದಲ್ಲಿ ರೈಲು ಕಾರ್ಯಾಚರಣೆ ಮಾಡುವ ಪ್ಯಾನಲ್‌ನಲ್ಲೂ ಉನ್ನತ ತಂತ್ರಜ್ಞಾನದ ಅಳವಡಿಕೆಯಾಗಬೇಕಿದೆ' ಎಂದು ಸಲಹೆ ನೀಡಿದರು.

ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್ ಮತ್ತು ಮಷಿನ್ ಕಲಿಕಾ ತಂತ್ರಜ್ಞಾನಗಳನ್ನು ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಅಳವಡಿಸಿಕೊಂಡರೆ, ದಕ್ಷತೆಯ ಮಟ್ಟವನ್ನು ವೃದ್ಧಿಸಿಕೊಳ್ಳಬಹುದು ಎಂದು ದಯಾನಂದಸಾಗರ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಬಿ.ಜಿ. ಪ್ರಸಾದ್ ಹೇಳಿದರು.

ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಚ್.ಕೆ. ರಾಮರಾಜು ಮಾತನಾಡಿ, 'ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳು ಈ ಸಮ್ಮೇಳನಕ್ಕಾಗಿ 415 ಪ್ರಾತ್ಯಕ್ಷಿಕೆಗಳನ್ನು ಕಳುಹಿಸಿದ್ದವು. ಅತ್ಯುತ್ತಮ ಗುಣಮಟ್ಟದ 215 ಪ್ರಾತ್ಯಕ್ಷಿಕೆಗಳನ್ನು ಆಯ್ಕೆ ಮಾಡಿ, ಅವುಗಳನ್ನು ತಾಂತ್ರಿಕ ಗೋಷ್ಠಿಗಳಲ್ಲಿ ಪ್ರದರ್ಶಿಸಲಾಗುತ್ತದೆ' ಎಂದರು.

ಬಾಂಗ್ಲಾದೇಶದಿಂದ ಬಂದಿದ್ದ ಮಹಿಳೆ: ಆರೋಪಿಗಳಿಗಾಗಿ ಪೊಲೀಸರ ಹುಡುಕಾಟ

ಲೈಂಗಿಕ ದೌರ್ಜನ್ಯ ಎಸಗಿ ಮಹಿಳೆಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕಲ್ಕೆರೆ ಬಳಿಯ ನಿರ್ಜನ ಪ್ರದೇಶದಲ್ಲಿ ಶುಕ್ರವಾರ ಬೆಳಿಗ್ಗೆ ಮಹಿಳೆಯ ಮೃತದೇಹ ಪತ್ತೆಯಾಗಿದ್ದು, ಅವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಬಾಂಗ್ಲಾದೇಶದ ಮಹಿಳೆ (28) ಕೊಲೆಯಾದವರು.

ಪತಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸುತ್ತಿದ್ದಾರೆ.

ಕೊತ್ತನೂರು ಬಳಿ ಬಾಡಿಗೆ ಮನೆಯೊಂದರಲ್ಲಿ ಪತಿ ಹಾಗೂ ಸಹೋದರನ ಜತೆಗೆ ಮಹಿಳೆ ವಾಸವಿದ್ದರು. ಕಲ್ಕೆರೆಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮನೆಗೆಲಸ ಮಾಡುತ್ತಿದ್ದರು. ಎಂದಿನಂತೆ ಗುರುವಾರ ಸಹ ಕೆಲಸಕ್ಕೆ ತೆರಳಿದ್ದರು. ರಾತ್ರಿ ವಾಪಸ್ ಬಂದಿರಲಿಲ್ಲ. ಪತ್ನಿ ನಾಪತ್ತೆಯಾಗಿರುವ ಕುರಿತು ಪತಿ ರಾಮಮೂರ್ತಿನಗರ ಠಾಣೆಗೆ ದೂರು ನೀಡಿದ್ದರು. ಮಹಿಳೆಯ ಕೊಲೆ ಆಗಿರುವುದು ಶುಕ್ರವಾರ ಬೆಳಿಗ್ಗೆ ಗೊತ್ತಾಗಿದೆ.

‘ನಿರ್ಜನ ಪ್ರದೇಶದಲ್ಲಿ ಮೃತದೇಹ ಬಿದ್ದಿರುವುದನ್ನು ಕಂಡ ಸ್ಥಳೀಯರು, ಬೆಳಿಗ್ಗೆ 8.45ರ ಸುಮಾರಿಗೆ ಮಾಹಿತಿ ನೀಡಿದ್ದರು. ತಕ್ಷಣವೇ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ತಲೆಗೆ ಕಲ್ಲಿನಿಂದ ಜಜ್ಜಿ, ಹರಿತವಾದ ಆಯುಧದಿಂದ ಚುಚ್ಚಿ ಕೊಲೆ ಮಾಡಿರುವುದು ಕಂಡುಬಂದಿದೆ. ಮುಖ ಹಾಗೂ ಕುತ್ತಿಗೆ ಭಾಗದಲ್ಲಿ ಗಾಯಗಳಾಗಿವೆ. ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು’ ಎಂದು ಮೂಲಗಳು ತಿಳಿಸಿವೆ.

‘ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಮಹಿಳೆಯ ಮೇಲೆ ಅತ್ಯಾಚಾರ ನಡೆಸಲಾಗಿತ್ತೇ ಅಥವಾ ಲೈಂಗಿಕ ದೌರ್ಜನ್ಯ ನಡೆದಿತ್ತೇ ಎಂಬುದು ಮರಣೋತ್ತರ ಪರೀಕ್ಷೆಯ ಬಳಿಕ ಗೊತ್ತಾಗಲಿದೆ’ ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಪೂರ್ವ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ರಮೇಶ್ ಬಾನೋತ್, ಡಿಸಿಪಿ ದೇವರಾಜ್ ಭೇಟಿ ನೀಡಿ ಪರಿಶೀಲಿಸಿದರು.

‘ಕೊಲೆ ಹಾಗೂ ಲೈಂಗಿಕ ದೌರ್ಜನ್ಯ ಆರೋಪದ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕರೆಗಳ ಪರಿಶೀಲನೆ: ಕೊಲೆಯಾದ ಮಹಿಳೆಯ ಮೊಬೈಲ್ ಕರೆಗಳನ್ನು ಪರಿಶೀಲಿಸಲಾಗುತ್ತಿದೆ. ಅಲ್ಲದೇ ಮಹಿಳೆ ಓಡಾಟ ನಡೆಸಿದ್ದ ರಸ್ತೆಗಳಲ್ಲಿರುವ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಯನ್ನೂ ಪರಿಶೀಲಿಸಲಾಗಿದೆ. ಸದ್ಯ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಪತಿ ಹಾಗೂ ಮಹಿಳೆಯ ಸಹೋದರನನ್ನೂ ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆ ಹಾಕಲಾಗುವುದು ಎಂದು ಮೂಲಗಳು ತಿಳಿಸಿವೆ.

ಗುರುವಾರ ಅಪಾರ್ಟ್‌ಮೆಂಟ್‌ಗೆ ಕೆಲಸಕ್ಕೆ ತೆರಳಿದ್ದ ಮಹಿಳೆ, ವಿವಿಧ ಫ್ಲ್ಯಾಟ್‌ಗಳಲ್ಲಿ ಸಂಜೆ ತನಕ ಕೆಲಸ ಮಾಡಿದ್ದರು. ಕೆಲಸ ಮುಗಿಸಿ ಸ್ನೇಹಿತೆಯರ ಜತೆಗೆ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಕರೆಯೊಂದು ಬಂದಿತ್ತು ಎನ್ನಲಾಗಿದೆ. ಕರೆ ಬಂದ ಬಳಿಕ ಮಹಿಳೆ ಅಲ್ಲಿಂದ ಒಬ್ಬರೇ ತೆರಳಿದ್ದರು. ನಂತರ, ಕೊಲೆಯಾಗಿ ಪತ್ತೆ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಪಾಸ್‌ಪೋರ್ಟ್ ಇಲ್ಲದೇ ಬಂದಿದ್ದ ಮಹಿಳೆ’

ಕೊಲೆಯಾದ ಮಹಿಳೆಯ ಪತಿ ಆರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಬಿಬಿಎಂಪಿಯ ಕಸ ವಿಂಗಡಣೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಮೂರು ವರ್ಷಗಳ ಹಿಂದೆ ಪತ್ನಿಯನ್ನೂ ನಗರಕ್ಕೆ ಕರೆ ತಂದಿದ್ದರು. ಮಹಿಳೆ ಮನೆಗೆಲಸ ಮಾಡುತ್ತಿದ್ದರು. ದಂಪತಿಗೆ ಮೂವರು ಮಕ್ಕಳಿದ್ದು, ಅವರು ಬಾಂಗ್ಲಾದೇಶದಲ್ಲೇ ಇದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಮಹಿಳೆಯ ಪತಿ ಪಾಸ್‌ಪೋರ್ಟ್ ಬಳಸಿಕೊಂಡು ಭಾರತಕ್ಕೆ ಬಂದಿದ್ದಾರೆ. ಆದರೆ ಕೊಲೆಯಾದ ಮಹಿಳೆಯ ಬಳಿ ಪಾಸ್‌ಪೋರ್ಟ್ ಸೇರಿದಂತೆ ಯಾವುದೇ ದಾಖಲೆಗಳು ಇರಲಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಜಂಟಿ ಪೊಲೀಸ್ ಕಮಿಷನರ್ ರಮೇಶ್ ಬಾನೋತ್ ತಿಳಿಸಿದರು.

ಕೆಲವು ಸುಳಿವು ಆಧರಿಸಿ ಆರೋಪಿಗಳ ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ

ರಮೇಶ್ ಬಾನೋತ್
ಜಂಟಿ ಪೊಲೀಸ್ ಕಮಿಷನರ್

ಅಪರಾಧ ಸುದ್ದಿ

ವಿಳಾಸ ಕೇಳುವ ನೆಪದಲ್ಲಿ ಯುವತಿಯೊಂದಿಗೆ ಅಸಭ್ಯ ವರ್ತನೆ

ಬೆಂಗಳೂರು: ವಿಳಾಸ ಕೇಳುವ ನೆಪದಲ್ಲಿ ಯುವತಿಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಾಸೀನ್ ಬಂಧಿತ ಆರೋಪಿ. ಆರೋಪಿಯು ತಿಲಕ್ ನಗರದಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ.

19 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಜಯನಗರದ 3ನೇ ಬ್ಲಾಕ್ ಬಸ್ ನಿಲ್ದಾಣದ ಬಳಿ ಜನವರಿ 17ರಂದು ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿ, ಯುವತಿಯ ಬಳಿ ವಿಳಾಸ ಕೇಳಿದ್ದ. ‘ಗೊತ್ತಿಲ್ಲ’ ಎಂದು ಯುವತಿ ಪ್ರತಿಕ್ರಿಯಿಸಿ ಮುಂದಕ್ಕೆ ತೆರಳಿದ್ದರು. ಯುವತಿಯನ್ನು ಹಿಂಬಾಲಿಸಿಕೊಂಡು ಹೋಗಿದ್ದ ಆರೋಪಿ, ತನ್ನ ಮೊಬೈಲ್‌ನಲ್ಲಿದ್ದ ಅಶ್ಲೀಲ ವಿಡಿಯೊ ತೋರಿಸಿದ್ದ. ಇದರಿಂದ ಗಾಬರಿಗೊಂಡ ಯುವತಿ ಮುಂದಕ್ಕೆ ಸಾಗಿದ್ದರು. ಆರೋಪಿ ಇದೇ ರೀತಿ ಹಲವು ಬಾರಿ ಕೃತ್ಯ ಎಸಗಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಆಂಬುಲೆನ್ಸ್‌ಗೆ ದಾರಿ ಬಿಡದ ಆಟೊ ಚಾಲಕನ ಬಂಧನ

ಬೆಂಗಳೂರು: ಮಾರ್ಗ ಮಧ್ಯದಲ್ಲಿ ಆಂಬುಲೆನ್ಸ್‌ಗೆ ದಾರಿ ಬಿಡದ ಆಟೊ ಚಾಲಕನನ್ನು ಬೆಳ್ಳಂದೂರು ಸಂಚಾರ ಠಾಣೆಯ ಪೊಲೀಸರು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಪರಮೇಶ್ ಬಂಧಿತ ಆಟೊ ಚಾಲಕ.

ಕೂಡ್ಲುವಿನಲ್ಲಿ ನೆಲಸಿರುವ ಪರಮೇಶ್, ಪಕ್ಕದ ಮನೆಯವರ ಆಟೊ ಪಡೆದು ಮಂಗಳವಾರ ಹರಳೂರು ಮಾರ್ಗವಾಗಿ ಆಟೊ ಚಲಾಯಿಸಿಕೊಂಡು ಹೋಗುತ್ತಿದ್ದ. ಆಟೊ ಹಿಂಬದಿಯಲ್ಲಿ ಆಂಬುಲೆನ್ಸ್ ಬರುತ್ತಿತ್ತು. ಆಂಬುಲೆನ್ಸ್ ಚಾಲಕ ನಿರಂತರವಾಗಿ ಹಾರ್ನ್ ಮಾಡಿದ್ದರೂ ದಾರಿ ಬಿಟ್ಟಿರಲಿಲ್ಲ. ಅದೇ ಮಾರ್ಗದಲ್ಲಿ ತೆರಳುತ್ತಿದ್ದವರು ತಮ್ಮ ಮೊಬೈಲ್‌ನಲ್ಲಿ ಈ ದೃಶ್ಯ ಸೆರೆ ಹಿಡಿದಿದ್ದರು.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದ ವಿಡಿಯೊ ಗಮನಿಸಿ ಆಟೊದ ನೋಂದಣಿ ಸಂಖ್ಯೆ ಪತ್ತೆಹಚ್ಚಿ ಚಾಲಕನನ್ನು ಬಂಧಿಸಲಾಯಿತು. ಚಾಲಕನ ಚಾಲನಾ ಪರವಾನಗಿ (ಡಿಎಲ್) ರದ್ದು ಮಾಡುವಂತೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು ಎಂದು ಪೊಲೀಸರು ತಿಳಿಸಿದರು.

‘ಆಟೊ ಚಾಲನೆ ವೇಳೆ ಅಧಿಕ ರಕ್ತದ ಒತ್ತಡದಿಂದ ಬಳಲುತ್ತಿದ್ದೆ. ಹಿಂಬದಿಯಿಂದ ಆಂಬುಲೆನ್ಸ್ ಬರುತ್ತಿರುವುದು ಗೊತ್ತಾಗಿರಲಿಲ್ಲ’ ಎಂದು ಪೊಲೀಸರ ವಿಚಾರಣೆ ವೇಳೆ ಆರೋಪಿ ಹೇಳಿದ್ದಾನೆ ಎಂದು ಮೂಲಗಳು ತಿಳಿಸಿವೆ.

‘ಲಾಯರ್’ ಜಗದೀಶ್ ಮೇಲೆ ಹಲ್ಲೆ

ಬೆಂಗಳೂರು: ಸಹಕಾರ ನಗರದಲ್ಲಿ ಶುಕ್ರವಾರ ರಾತ್ರಿ ವಕೀಲ ಜಗದೀಶ್ ಮೇಲೆ ಹಲ್ಲೆ ನಡೆಸಲಾಗಿದೆ.

‘ನನ್ನ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ’ ಎಂದು ಜಗದೀಶ್ ಅವರು ವಿಡಿಯೊ ಮಾಡಿ ಹೇಳಿಕೊಂಡಿದ್ದಾರೆ. ಮುಖದಲ್ಲಿ ರಕ್ತದ ಕಲೆಗಳು ಆಗಿರುವುದು ವಿಡಿಯೊದಲ್ಲಿದೆ. ಮೂಗಿನಿಂದ ರಕ್ತ ಬರುವಂತೆ ಆರೋಪಿಗಳು ಹಲ್ಲೆ ನಡೆಸಿದ್ದಾರೆ ಎಂದು ಜಗದೀಶ್ ಆರೋಪಿಸಿದ್ದಾರೆ.

ಅಣ್ಣಮ್ಮ ದೇವಿಯ ಮೂರ್ತಿಯನ್ನು ಕೂರಿಸುವ ವಿಚಾರದಲ್ಲಿ ಸ್ಥಳೀಯರು ಹಾಗೂ ‘ಲಾಯರ್’ ಜಗದೀಶ್ ನಡುವೆ ಗುರುವಾರ ಸಹ ಗಲಾಟೆ ನಡೆದಿತ್ತು. ಈ ಸಂಬಂಧ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು–ಪ್ರತಿದೂರು ದಾಖಲಾಗಿತ್ತು. ಅದೇ ಗುಂಪು ಹಲ್ಲೆ ನಡೆಸಿದೆ ಎನ್ನಲಾಗಿದೆ.

ಸಾಲ ತೀರಿಸದ್ದಕ್ಕೆ ಕಲಾವಿದನಿಗೆ ಬಾರುಕೋಲಿನಿಂದ ಹೊಡೆತ

ಪ್ರಜಾವಾಣಿ ವಾರ್ತೆ



ನಿತಿನ್ ಆಚಾರ್ಯ

ಉಡುಪಿ: ಸಾಲದ ಹಣ ಬಡ್ಡಿ ಸಮೇತ ತೀರಿಸಿಲ್ಲ ಎಂಬ ಕಾರಣಕ್ಕೆ ಯಕ್ಷಗಾನ ಕಲಾವಿದ ಪಡುಬಿದ್ರಿ ಬಳಿಯ ನಡ್ಸಾಲು ಗ್ರಾಮದ ನಿತಿನ್ ಆಚಾರ್ಯ ಎಂಬುವವರ ಮೇಲೆ ಬಾರುಕೋಲಿನಿಂದ ಹಲ್ಲೆ ನಡೆಸಲಾಗಿದೆ.

ಈ ಕುರಿತು ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳು ನ್ಯಾಯಾಲಯಕ್ಕೆ ಶರಣಾಗಿ ಜಾಮೀನು ಪಡೆದುಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ‘ಸಚಿನ್ ಅಮೀನ್, ಆತನ ತಂದೆ ಮತ್ತು ಇನ್ನೊಬ್ಬ ವ್ಯಕ್ತಿ ಸೇರಿ ಎರಡು ದಿನದ ಹಿಂದೆ ನಿತಿನ್‌ನನ್ನು ಅಪಹರಿಸಿ, ಫ್ಲಾಟ್‌ಗೆ ಎಳೆದುಕೊಂಡು ಹೋಗಿ ಮೈ ಪೂರ್ತಿ ಬಾಸುಂಡೆ ಬರುವಂತೆ ಬಾರುಕೋಲಿನಿಂದ ಹೊಡೆದು ರಸ್ತೆಯಲ್ಲಿ ಎಸೆದು ಹೋಗಿ ದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ನಿತಿನ್ ಆಚಾರ್ಯ ಮತ್ತು ಸಚಿನ್ ಅಮೀನ್ ಇಬ್ಬರೂ ಯಕ್ಷಗಾನ ಮೇಳದಲ್ಲಿ ಕಲಾವಿದರು. ನಿತಿನ್ ಆಚಾರ್ಯ ನಾಲ್ಕು ವರ್ಷಗಳ ಹಿಂದೆ ಸಚಿನ್‌ನಿಂದ ಬಡ್ಡಿಗೆ ₹1.80 ಲಕ್ಷ ಸಾಲ ಪಡೆದಿದ್ದು, ಬಡ್ಡಿ ಸೇರಿ ಹಣ ಪಾವತಿಸಲಾಗಿದೆ. ಇನ್ನೂ ಹಣ ನೀಡಬೇಕು ಎಂದು ಒತ್ತಾಯಿಸಿ ಸಚಿನ್ ಹಾಗೂ ಇತರರು ಹಲ್ಲೆ ನಡೆಸಿದ್ದಾರೆ’ ಎಂದು ನಿತಿನ್ ತಂದೆ ರತ್ನಾಕರ ಆಚಾರ್ಯ ಆರೋಪಿಸಿದ್ದಾರೆ.

‘ನಿತಿನ್ ಆಚಾರ್ಯ ಮತ್ತು ಸಚಿನ್ 10 ವರ್ಷಗಳಿಂದ ಗೆಳೆಯರಾಗಿದ್ದು, ಇವರಿಬ್ಬರು ಎರಡು ದಿವಸಗಳ ಹಿಂದೆ ಬಾರ್‌ನಲ್ಲಿ ಕುಳಿತಿದ್ದಾಗ ಅಲ್ಲಿಗೆ ಸಚಿನ್ ತಂದೆ ಕುಶಾಲ್ ಅಮೀನ್ ಅವರು ಬಂದು ಇಬ್ಬರನ್ನು ಕರೆದುಕೊಂಡು ಹೋಗಿದ್ದಾರೆ. ನಿತಿನ್ ಆಚಾರ್ಯ ಈ ಹಿಂದೆ ಸಚಿನ್‌ನಿಂದ ಚಿನ್ನ ಪಡೆದು ಅದನ್ನು ಅಡವಿಟ್ಟಿದ್ದು, ಚಿನ್ನ ಹಾಗೂ ಬಡ್ಡಿ ಹಣ ನೀಡದ್ದಕ್ಕೆ ನಿತಿನ್ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ತಿಳಿಸಿದ್ದಾರೆ.

ಪಡೆದ ಚಿನ್ನಾಭರಣ ವಾಪಸ್ ನೀಡಿಲ್ಲ ಎಂದು ಆರೋಪಿಸಿ ನಿತಿನ್ ಆಚಾರ್ಯ ವಿರುದ್ಧ ಸಚಿನ್ ಅವರ ತಾಯಿ ಕಾಪು ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ಹೇಳಿದ್ದಾರೆ.

ಪಿಸ್ತೂಲ್ ತೋರಿಸಿ ಉದ್ಯಮಿಗೆ ಜೀವ ಬೆದರಿಕೆ ಹಾಕಿದ ಪ್ರಕರಣ

‘ಫೈಟರ್’ ರವಿ, ಗನ್‌ಮ್ಯಾನ್ ಬಂಧನ

ಪ್ರಜಾವಾಣಿ ವಾರ್ತೆ



‘ಫೈಟರ್’ ರವಿ

ಬೆಂಗಳೂರು: ಉದ್ಯಮಿಗೆ ಜೀವ ಬೆದರಿಕೆ ಹಾಕಿದ್ದ ಆರೋಪದ ಅಡಿ ಮಾಜಿ ರೌಡಿಶೀಟರ್ ಬಿ.ಎಂ. ಮಲ್ಲಿಕಾರ್ಜುನ್ ಅಲಿಯಾಸ್ ‘ಫೈಟರ್’ ರವಿ ಹಾಗೂ ಆತನ ಗನ್‌ಮ್ಯಾನ್ ವಿಜೇಶ್ ಕುಮಾರ್‌ನನ್ನು ಸದಾಶಿವನಗರ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

‘ಇಬ್ಬರೂ ಗನ್ ತೋರಿಸಿ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ್ದರು’ ಎಂದು ಆರೋಪಿಸಿ ಉದ್ಯಮಿ ಸೋಮಶೇಖರ್ ದೂರು ನೀಡಿದ್ದರು. ಆ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಇಬ್ಬರನ್ನೂ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ ಎರಡು ದಿನ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಉದ್ಯಮಿ ಸೋಮಶೇಖರ್ ಅವರು ಶ್ರೀಕಾಂತ್ ಎಂಬಾತನಿಗೆ ಸಾಲದ ರೂಪದಲ್ಲಿ ₹75 ಲಕ್ಷ ಕೊಟ್ಟಿದ್ದರು. ಹಣ ಮರಳಿ ಪಡೆಯುವ ಸಲುವಾಗಿ ಆಗಾಗ ಶ್ರೀಕಾಂತ್‌ನನ್ನು ಸೋಮಶೇಖರ್ ಭೇಟಿ ಮಾಡುತ್ತಿದ್ದರು. ಆಗ ಮಧ್ಯಪ್ರವೇಶಿಸಿದ್ದ ‘ಫೈಟರ್’ ರವಿ, ಶ್ರೀಕಾಂತ್ ಬಳಿ ಹಣ ಕೇಳದಂತೆ ಪಿಸ್ತೂಲ್ ತೋರಿಸಿ ಜೀವ ಬೆದರಿಕೆ ಹಾಕಿದ್ದ’ ಎಂದು ಪೊಲೀಸರು ಹೇಳಿದರು.

ಕೆಲವು ವರ್ಷಗಳ ಹಿಂದೆ ‘ಫೈಟರ್’ ರವಿ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿಯಿಂದ ಟಿಕೆಟ್ ಬಯಸಿದ್ದ. ಟಿಕೆಟ್ ಸಿಕ್ಕಿರಲಿಲ್ಲ. ಅದಾದ ಮೇಲೆ ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ. ಹಿಂದೆ ರೌಡಿ ಚಟುವಟಿಕೆಯಲ್ಲಿ ಗುರುತಿಸಿಕೊಂಡಿದ್ದ ಆರೋಪವೂ ‘ಫೈಟರ್’ ರವಿ ಮೇಲಿದೆ ಎಂದು ಮೂಲಗಳು ತಿಳಿಸಿವೆ.

ಲಂಚ: ಪಿಡಿಒ, ಮಧ್ಯವರ್ತಿ ಬಂಧನ

ಬೆಂಗಳೂರು: ನಿವೇಶನದ ಖಾತೆ ಬದಲಾವಣೆಗೆ ₹20 ಸಾವಿರ ಲಂಚ ಪಡೆದ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮ ಪಂಚಾಯತಿಯೊಂದರ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹಾಗೂ ಅವರ ಪರವಾಗಿ ಹಣ ಪಡೆದ ಖಾಸಗಿ ವ್ಯಕ್ತಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನೆಲಮಂಗಲ ತಾಲ್ಲೂಕಿನ ಟಿ.ಬೇಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮದಲ್ಲಿ ನಿವೇಶನ ಹೊಂದಿರುವ ರಮೇಶ್ ಎಂಬುವವರು ಖಾತೆ ಬದಲಾವಣೆ ಸಂಬಂಧ ಪಿಡಿಒ ಶೋಭಾರಾಣಿ ಅವರನ್ನು ಭೇಟಿ ಮಾಡಿದ್ದರು. ಕೆಲಸ ಮಾಡಿಕೊಡಲು ಪಿಡಿಒ ₹20,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ರಮೇಶ್ ಅವರು ಈ ಸಂಬಂಧ ದೂರು ನೀಡಿದ್ದರು. ದೂರು ದಾಖಲಿಸಿಕೊಂಡು ಕಾರ್ಯಾಚರಣೆ ಆರಂಭಿಸಲಾಗಿತ್ತು. ಅದರಂತೆ ದೂರುದಾರರು ಶುಕ್ರವಾರ ಹಣದೊಂದಿಗೆ ಗ್ರಾಮ ಪಂಚಾಯತಿ ಕಚೇರಿಗೆ ತೆರಳಿದ್ದರು. ಶೋಭಾರಾಣಿ ಅವರು ತಮ್ಮ ಪರವಾಗಿ ರುದ್ರಪ್ಪ ಎಂಬ ವ್ಯಕ್ತಿಗೆ ಹಣ ನೀಡುವಂತೆ ಸೂಚಿಸಿದ್ದರು ಎಂದು ತಿಳಿಸಿದ್ದಾರೆ.

ರುದ್ರಪ್ಪ ಲಂಚ ಪಡೆಯುವಾಗ ದಾಳಿ ನಡೆಸಿ ಅವರನ್ನು ಲಂಚದ ಜತೆಗೆ ವಶಕ್ಕೆ ಪಡೆಯಲಾಯಿತು. ಅವರ ಹೇಳಿಕೆ ಆಧಾರದಲ್ಲಿ ಶೋಭಾರಾಣಿ ಅವರನ್ನು ಬಂಧಿಸಲಾಯಿತು. ತನಿಖೆ ಮುಂದುವರಿದಿದೆ ಎಂದು ವಿವರಿಸಿದ್ದಾರೆ.

ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ: ನಿಖಿಲ್ ಕತ್ತಿ ರಾಜೀನಾಮೆ

ಹುಕ್ಕೇರಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಸಂಕೇಶ್ವರದಲ್ಲಿರುವ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಸ್ಥಾನಕ್ಕೆ ಶಾಸಕ ನಿಖಿಲ್ ಕತ್ತಿ ದಿಢೀರ್ ರಾಜೀನಾಮೆ ನೀಡಿದ್ದಾರೆ.

‘ಕಾರ್ಖಾನೆಯನ್ನು 20 ವರ್ಷಗಳ ಅವಧಿಗೆ ‘ಲೀಸ್’ ನೀಡುವ ಸಂಬಂಧ ಶುಕ್ರವಾರ ಎಲ್ಲ 10 ನಿರ್ದೇಶಕರ (ಒಬ್ಬರು ನಿಧನರಾಗಿದ್ದಾರೆ) ಸಭೆ ನಡೆದಿತ್ತು. ಕಾರ್ಖಾನೆ ಸಹಕಾರ ಕ್ಷೇತ್ರದಲ್ಲಿದ್ದರೆ ಇದೇ ಕ್ಷೇತ್ರದಿಂದ ಮಾತ್ರ ಸಾಲ ಪಡೆಯಬೇಕಾಗುತ್ತದೆ. ಲೀಸ್ ನೀಡಿದರೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೂ ಸಾಲ ಪಡೆಯಬಹುದು. ಆ ಮೂಲಕ ಇನ್ನಷ್ಟು ಅಭಿವೃದ್ಧಿ ಮಾಡಬಹುದು’ ಎಂದು ನಿಖಿಲ್ ಕತ್ತಿ ವಾದ ಮಂಡಿಸಿದ್ದರು.

ಸಭೆಯಲ್ಲಿದ್ದ ಬಹುತೇಕ ನಿರ್ದೇಶಕರು ಸಮ್ಮತಿಸಲಿಲ್ಲ. ಹೀಗಾಗಿ, ನಿಖಿಲ್ ರಾಜೀನಾಮೆ ಪ್ರಕಟಿಸಿದರು ಎಂದು ಮೂಲಗಳು ತಿಳಿಸಿವೆ.

ನಿಖಿಲ್ ಅವರ ಅಜ್ಜ ವಿಶ್ವನಾಥ ಕತ್ತಿ ಎರಡು ದಶಕಗಳವರೆಗೆ ಸಹಕಾರ ರಂಗದಲ್ಲಿ ದುಡಿದು, ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯನ್ನೂ ಅವರು ಮುನ್ನಡೆಸಿದ್ದರು. ಅವರ ನಿಧನದ ಬಳಿಕ ಮಾಜಿ ಸಚಿವ, ಉಮೇಶ ಕತ್ತಿ ಕೂಡ ಮೂರು ದಶಕಗಳ ಕಾಲ ಸಹಕಾರ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದರು. ಅವರೂ ಇದೇ ಕಾರ್ಖಾನೆಯ ಅಧ್ಯಕ್ಷರಾಗಿದ್ದರು. ಅವರ ನಿಧನದ ಬಳಿಕ ಪುತ್ರ ನಿಖಿಲ್ ಕತ್ತಿ ಅಧ್ಯಕ್ಷರಾಗಿದ್ದಾರೆ. ಮೂರು ಬಾರಿ ನಿರ್ದೇಶಕರಾಗಿರುವ ಅವರು, ಎರಡನೇ ಅವಧಿಗೆ ಅಧ್ಯಕ್ಷರಾಗಿದ್ದರು.

ನಿಖಿಲ್ ರಾಜೀನಾಮೆ ನೀಡಿದರೂ ಅವರದೇ ಪೆನಲ್‌ನ ನಿರ್ದೇಶಕರು ಕಾರ್ಖಾನೆಯ ಚುಕ್ಕಾಣಿ ಹಿಡಿಯಲಿದ್ದಾರೆ.



ಸಮಾರಂಭದಲ್ಲಿ ಸಾ.ರಾ. ಗೋವಿಂದು ಅವರನ್ನು ಸಿದ್ದರಾಮಯ್ಯ ಗೌರವಿಸಿದರು. ರಾಮಲಿಂಗಾರೆಡ್ಡಿ, ಹಂ.ಪ. ನಾಗರಾಜಯ್ಯ, ಟಿ. ವೆಂಕಟೇಶ್, ಬರಗೂರು ರಾಮಚಂದ್ರಪ್ಪ, ಗೊ.ರು. ಚನ್ನಬಸಪ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪರಭಾಷಾ ಚಿತ್ರಗಳ ಟಿಕೆಟ್ ದರಕ್ಕೆ ಅಂಕುಶ: ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಪರಭಾಷಾ ಚಿತ್ರಗಳ ಟಿಕೆಟ್ ದರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನೆರೆಯ ರಾಜ್ಯಗಳಿಂದ ವರದಿ ತರಿಸಿಕೊಂಡು, ಕ್ರಮಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಸಾ.ರಾ. ಗೋವಿಂದು ಅಭಿನಂದನಾ ಸಮಿತಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸಾ.ರಾ. ಗೋವಿಂದು ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ಈ ವೇಳೆ ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ಸಾ.ರಾ. ಗೋವಿಂದು ಅವರು ಕನ್ನಡ ಚಿತ್ರೋದ್ಯಮ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ, ‘ಕನ್ನಡ ಚಿತ್ರರಂಗ ಬೆಳೆಸಲು ಹಾಗೂ ಪರಭಾಷಾ ಚಿತ್ರಗಳಿಗೆ ಕಡಿವಾಣ ಹಾಕಲು ಕ್ರಮಕೈಗೊಳ್ಳಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಸಿದ್ದರಾಮಯ್ಯ, ‘ಪರಭಾಷಾ ಚಿತ್ರಗಳ ಟಿಕೆಟ್ ದರ ನಿಯಂತ್ರಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಈ ಹಿಂದೆ ಪರಭಾಷಾ ಚಿತ್ರಗಳ ಟಿಕೆಟ್ ದರವನ್ನು ₹ 200 ಗೊತ್ತುಪಡಿಸಲಾಗಿತ್ತು. ಆದರೆ, ಈ ಆದೇಶಕ್ಕೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದರಿಂದ ದರ ನಿಯಂತ್ರಣ ಸಾಧ್ಯವಾಗಲಿಲ್ಲ. ಈಗ ತಮಿಳುನಾಡು, ಆಂಧ್ರಪ್ರದೇಶ, ಕೇರಳ ಸೇರಿ ನೆರೆಯ ರಾಜ್ಯಗಳಲ್ಲಿ ಅಲ್ಲಿನ ಚಿತ್ರಗಳಿಗೆ ಇರುವ ದರದ ಬಗ್ಗೆ ವರದಿ ತರಿಸಿಕೊಂಡು, ಅಷ್ಟೇ ದರವನ್ನು ಇಲ್ಲಿಯೂ ಗೊತ್ತುಪಡಿಸಲು ಕ್ರಮವಹಿಸಲಾಗುವುದು’ ಎಂದರು.

‘ಕಲಾತ್ಮಕ ಚಿತ್ರಗಳ ಪ್ರೋತ್ಸಾಹಕ್ಕೆ ಪ್ರತಿ ಜಿಲ್ಲೆಯಲ್ಲಿಯೂ 200 ಆಸನಗಳ ಮಿನಿ ಚಿತ್ರಮಂದಿರಗಳನ್ನು ನಿರ್ಮಾಣ ಮಾಡಲಾಗುವುದು’ ಎಂದು ಘೋಷಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಚಲನಚಿತ್ರ ನಟ ಸುದೀಪ್, ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಸಾಹಿತಿ ಹಂ.ಪ. ನಾಗರಾಜಯ್ಯ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಹಾಗೂ ಪತ್ರಕರ್ತ ಟಿ. ವೆಂಕಟೇಶ್ ಉಪಸ್ಥಿತರಿದ್ದರು.

‘ಆರೋಗ್ಯ ಸ್ಥಿರ’

ಮಂಗಳೂರು: ಮಂಕಿಪಾಕ್ಸ್ ದೃಢಪಟ್ಟಿರುವ ರೋಗಿ ಆರೋಗ್ಯವಾಗಿದ್ದಾರೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರಿಗೆ ಇನ್ನೂ ಒಂದು ವಾರ ಕ್ವಾರಂಟೈನ್ ಮುಂದುವರಿಸಲಾಗುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಚ್.ಆರ್.ತಿಮ್ಮಯ್ಯ ತಿಳಿಸಿದ್ದಾರೆ.

ಜ.17ರಂದು ದುಬೈನಿಂದ ಮಂಗಳೂರಿಗೆ ಬಂದಿದ್ದ ಉಡುಪಿ ಜಿಲ್ಲೆ ಕಾರ್ಕಳದ ವ್ಯಕ್ತಿಗೆ (40 ವರ್ಷ) ಮಂಕಿಪಾಕ್ಸ್ ತಗುಲಿರುವುದು ಬುಧವಾರ ದೊರೆತ ವರದಿಯಲ್ಲಿ ದೃಢಪಟ್ಟಿತ್ತು. ಜ್ವರದಿಂದ ಬಳಲಿದ್ದ ಅವರಿಗೆ ಚರ್ಮದ ಮೇಲೆ ಕಾಣಿಸಿಕೊಂಡಿದ್ದ ದದ್ದಿನ ಲಕ್ಷಣಗಳನ್ನು ಗಮನಿಸಿ ಮಾದರಿಯನ್ನು ಬೆಂಗಳೂರಿನ ವೈದ್ಯಕೀಯ ಕಾಲೇಜು (ಬಿಎಂಸಿ) ಮತ್ತು ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ (ಎನ್‌ಐವಿ) ಕಳುಹಿಸಲಾಗಿತ್ತು. ಮಂಕಿಪಾಕ್ಸ್ ತಗುಲಿರುವುದು ವರದಿಯಲ್ಲಿ ಖಚಿತವಾಗಿತ್ತು.

ಗೌರವಧನ, ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಪ್ರತಿಭಟನೆ

ಹಾವು ರಕ್ಷಕರಿಗೆ ದೊರೆಯದ ಸೌಲಭ್ಯ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವಧನ ನೀಡುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ವನ್ಯಜೀವಿ ಸಂರಕ್ಷಕರ ಹಿತರಕ್ಷಣೆ ಮತ್ತು ಕಲ್ಯಾಣ ಸಂಸ್ಥೆಯ ನೇತೃತ್ವದಲ್ಲಿ ವನ್ಯಜೀವಿ ಸಂರಕ್ಷಕರು ಹಾಗೂ ಹಾವು ರಕ್ಷಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ವನ್ಯಜೀವಿ ರಕ್ಷಣೆ ವೇಳೆ ಆಕಸ್ಮಿಕವಾಗಿ ಮೃತಪಡುವ ಪ್ರಕರಣ ವರದಿ ಆಗುತ್ತಿವೆ. ಅಂತಹ ಸಂದರ್ಭದಲ್ಲಿ ವನ್ಯಜೀವಿ ಸಂರಕ್ಷಕರು ಹಾಗೂ ಹಾವು ರಕ್ಷಕರ ಕುಟುಂಬಕ್ಕೆ ಪರಿಹಾರ ವಿತರಣೆ ಮಾಡಬೇಕು. ರಕ್ಷಣೆ ವೇಳೆ ವನ್ಯಜೀವಿಗಳಿಂದ ದಾಳಿಗೆ ಒಳಗಾದರೆ ವೈದ್ಯಕೀಯ ವೆಚ್ಚವನ್ನು ಸರ್ಕಾರ ಭರಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ಸೌಲಭ್ಯ ಕಲ್ಪಿಸಲು ಆಗ್ರಹಿಸಿ ವನ್ಯಜೀವಿ ಸಂರಕ್ಷಕರ ಹಿತರಕ್ಷಣೆ ಮತ್ತು ಕಲ್ಯಾಣ ಸಂಸ್ಥೆ ನೇತೃತ್ವದಲ್ಲಿ ವನ್ಯಜೀವಿ ಸಂರಕ್ಷಕರು ಹಾಗೂ ಹಾವು ರಕ್ಷಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಗೌರವಧನ ನೀಡಬೇಕು. ರಕ್ಷಕರಿಗೆ ತರಬೇತಿ ನೀಡಬೇಕು. ಅತ್ಯಾಧುನಿಕ ಸಲಕರಣೆ ಒದಗಿಸಬೇಕು. ಜೀವ ವಿಮೆ ಮಾಡಿಸಬೇಕು, ಗುರುತಿನ ಚೀಟಿ ವಿತರಣೆ ಮಾಡಬೇಕು ಎಂದೂ ಆಗ್ರಹಿಸಿದರು.

‘ಸ್ವಾತಂತ್ರ್ಯ ಪೂರ್ವದಿಂದಲೂ ಹಾವು ಸಂರಕ್ಷಣೆ ಮಾಡುತ್ತಿದ್ದೇವೆ. ಆದರೆ, ಯಾವುದೇ ಸೌಲಭ್ಯ ಕಲ್ಪಿಸಿಲ್ಲ’ ಎಂದು ಆಕ್ರೋಶ ಹೊರಹಾಕಿದರು.

‘ಸಾರ್ವಜನಿಕರ ಜೀವ ಹಾನಿ ಆಗದಂತೆ ಕಾಪಾಡುತ್ತಿದ್ದೇವೆ. ಹಾವುಗಳನ್ನೂ ರಕ್ಷಿಸಿ ಅರಣ್ಯಕ್ಕೆ ಬಿಡುತ್ತಿದ್ದೇವೆ. ಇದು ಅತ್ಯಂತ ಅಪಾಯಕಾರಿ ಕೆಲಸ. ರಾಜ್ಯದಲ್ಲಿ 600ಕ್ಕೂ ಹೆಚ್ಚು ಹಾವು ಸಂರಕ್ಷಕರಿದ್ದು, ಹಾವು ರಕ್ಷಣೆ ವೇಳೆ ಅಪಾಯಕ್ಕೆ ಸಿಲುಕುತ್ತಿದ್ದಾರೆ. ಕೆಲವರು ಮೃತಪಟ್ಟರೆ, ಇನ್ನೂ ಕೆಲವರು ಶಾಶ್ವತ ಅಂಗವಿಕಲತೆ ಸಮಸ್ಯೆಯಿಂದ ಬಳಲುತ್ತಿದ್ದಾರೆ’ ಎಂದು ನೋವು ತೋಡಿಕೊಂಡರು.

‘ಹಾವು ಕಡಿತವನ್ನು ‘ಘೋಷಿತ ಕಾಯಿಲೆ’ ಎಂದು ರಾಜ್ಯ ಸರ್ಕಾರ ಗುರುತಿಸಿದೆ. ಆದರೆ, ಹಾವು ರಕ್ಷಣೆ ಮಾಡುವವರಿಗೆ ಯಾವುದೇ ಸೌಲಭ್ಯ ಕಲ್ಪಿಸಿಲ್ಲ’ ಎಂದು ದೂರಿದರು.

ಬ್ಯಾಂಕ್ ಪ್ರತಿನಿಧಿ ಸೋಗಿನಲ್ಲಿ ಕರೆ ಮಹಿಳೆಗೆ ₹ 2 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿನಿತ್ಯ ಹೊಸ ಹೊಸ ಮಾದರಿಯಲ್ಲಿ ವಂಚನೆ ನಡೆಸುತ್ತಿರುವ ಸೈಬರ್ ಕಳ್ಳರು, ಇದೀಗ ಬ್ಯಾಂಕ್‌ಗಳು ಕೈಗೊಂಡಿರುವ ಕ್ರಮವನ್ನೂ ದುರ್ಬಳಕೆ ಮಾಡಿಕೊಂಡು ₹2 ಲಕ್ಷ ದೋಚಿದ್ದಾರೆ. ಈ ಸಂಬಂಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ದೊಡ್ಡ ಮೊತ್ತದ ಹಣ ವರ್ಗಾವಣೆಯಾದ ವೇಳೆ ಬ್ಯಾಂಕ್‌ಗಳು ಖಚಿತ ಪಡಿಸಿಕೊಳ್ಳಲು ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಹಕರಿಗೆ ಇ–ಮೇಲ್ ಅಥವಾ ಸಂದೇಶ ಕಳುಹಿಸುತ್ತವೆ. ಅದೇ ರೀತಿ ಮಹಿಳೆಯೊಬ್ಬರಿಗೆ ಸೈಬರ್ ವಂಚಕರು ಕರೆ ಮಾಡಿ, ‘ನಿಮ್ಮ ವಹಿವಾಟು ಖಚಿತಪಡಿಸಿ’ ಎಂದು ಕರೆಮಾಡಿ, ಖಾತೆಯಿಂದ ಕ್ಷಣಮಾತ್ರದಲ್ಲಿ ಹಣ ದೋಚಿದ್ದಾರೆ.

ರಾಷ್ಟ್ರೀಕೃತ ಬ್ಯಾಂಕ್‌ವೊಂದರ ಪ್ರತಿನಿಧಿಗಳು ಎಂದು ಕರೆ ಮಾಡಿದ್ದ ವಂಚಕರು 58 ವರ್ಷದ ಮಹಿಳೆಗೆ ವಂಚಿಸಿದ್ದಾರೆ.

‘ಜ.20ರಂದು ಬ್ಯಾಂಕ್ ಪ್ರತಿನಿಧಿಯ ಸೋಗಿನಲ್ಲಿ ಕರೆ ಮಾಡಿದ್ದ ವಂಚಕ, ‘ನಿಮ್ಮ ಖಾತೆಯಿಂದ ಬೇರೆ ಖಾತೆಗೆ ಹಣ ವರ್ಗಾವಣೆ ಆಗುತ್ತಿದೆ. ಈ ಹಣವನ್ನು ನೀವೇ ವರ್ಗಾಯಿಸಿದ್ದರೆ ಸಂಖ್ಯೆ ಮೂರನ್ನು ಒತ್ತಿ, ಇಲ್ಲದಿದ್ದರೆ ಒಂದನ್ನು ಒತ್ತಿ’ ಎಂದು ಹೇಳಿದ್ದ. ಮಹಿಳೆ ಒಂದನ್ನು ಒತ್ತಿದ್ದರು. ಆಗ ಸೈಬರ್ ವಂಚಕರು ‘ಬ್ಯಾಂಕ್ ಸಂಪರ್ಕಿಸಿ’ ಎಂದು ಹೇಳಿ ಕರೆ ಕಡಿತ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

‘ಕರೆ ಕಡಿತಗೊಂಡ ಬಳಿಕ ಅನುಮಾನಗೊಂಡ ಮಹಿಳೆ, ತಮ್ಮ ಖಾತೆಯಿದ್ದ ಬ್ಯಾಂಕ್‌ಗೆ ತೆರಳಿ ವಿಚಾರಿಸಿದ್ದರು. ತಮ್ಮ ಖಾತೆಯಿಂದ ₹2 ಲಕ್ಷ ಹಣ ವರ್ಗಾವಣೆ ಆಗಿರುವುದು ಪತ್ತೆ ಆಗಿತ್ತು’ ಎಂದು ಮೂಲಗಳು ಹೇಳಿವೆ.

ಈ ರೀತಿಯ ಕರೆಗಳು ಬಂದಾಗ ಬ್ಯಾಂಕ್ ಖಾತೆ ಹೊಂದಿರುವವರು ಎಚ್ಚರಿಕೆ ವಹಿಸಬೇಕು. ಕರೆ ಬಂದಾಗ ನೇರವಾಗಿ ಬ್ಯಾಂಕ್‌ಗೆ ತೆರಳಿ ಪರಿಶೀಲಿಸಿಕೊಳ್ಳಬೇಕು ಎಂದು ಪೊಲೀಸರು ಕೋರಿದ್ದಾರೆ.

ಕೇಂದ್ರೀಯ ವಿ.ವಿ: ಸ್ನಾತಕೋತ್ತರ ಪದವಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯವು 2025ನೇ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ವಿಶ್ವವಿದ್ಯಾಲಯದ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಇದೇ ಫೆಬ್ರುವರಿ 1ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

‘ಮೂರು ಭಾಷಾ ವಿಷಯಗಳು, ಜಾನಪದ ಮತ್ತು ಬುಡಕಟ್ಟು ಅಧ್ಯಯನ ಸೇರಿ ಮಾನವಿಕ ಶಾಸ್ತ್ರಗಳಲ್ಲಿ 12 ಕೋರ್ಸ್, ವಿಜ್ಞಾನ, ವಾಣಿಜ್ಯ, ಎಂಜಿನಿಯರಿಂಗ್, ಸಮಾಜ ಕಾರ್ಯ, ಪ್ರದರ್ಶನ ಕಲೆ, ಎಂ.ಇಡಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಸಲ್ಲಿಸಲಾದ ಅರ್ಜಿ ಮಾತ್ರ ಪರಿಗಣಿಸಲಾಗುತ್ತದೆ’ ಎಂದು ವಿ.ವಿ. ಅಧ್ಯಯನಾಂಗ ನಿರ್ದೇಶಕ ಪ್ರೊ. ಬಸವರಾಜ ಪಿ. ಡೋಣೂರ ಮಾಹಿತಿ ನೀಡಿದರು.

‘ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಆಧಾರದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಭಾಷಾ ಪ್ರಶ್ನೆ ಪತ್ರಿಕೆಗಳು ಹೊರತುಪಡಿಸಿ ಉಳಿದ ಎಲ್ಲ ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಇರಲಿವೆ’ ಎಂದು ತಿಳಿಸಿದರು.

ಕೋರ್ಸ್‌ಗಳು, ಪ್ರವೇಶ ಪರೀಕ್ಷೆ ಮತ್ತಿತರ ವಿವರಗಳಿಗಾಗಿ www.cuk.ac.in ಮತ್ತು https://nta.ac.in/, https://exams.nta.ac.in/CUET-PG/ ಜಾಲತಾಣಗಳಿಗೆ ಭೇಟಿ ನೀಡಬಹುದು.

ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿರ್ಧಾರ

‘ನಾಮಫಲಕ: ಕನ್ನಡ ಕಡೆಗಣಿಸಿದರೆ ಮಳಿಗೆಗಳ ಪರವಾನಗಿ ನವೀಕರಿಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಳಿಗೆಗಳು ನಾಮ ಫಲಕದಲ್ಲಿ ಶೇಕಡ 60ರಷ್ಟು ಕನ್ನಡವನ್ನು ಅಳವಡಿಸಿಕೊಳ್ಳದಿದ್ದರೆ ಅಂತಹ ಮಳಿಗೆಗಳ ಪರವಾನಗಿಯನ್ನು ನವೀಕರಣ ಮಾಡಬಾರದು’ ಎಂಬ ನಿರ್ಧಾರವನ್ನು ಬಿಬಿಎಂಪಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಡೆಸಿದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ನೇತೃತ್ವದಲ್ಲಿ ಶುಕ್ರವಾರ ಸಭೆ ನಡೆಯಿತು. ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಅಳವಡಿಸಿಕೊಳ್ಳದ ಮಳಿಗೆಗಳ ಪರವಾನಗಿಯನ್ನು ನವೀಕರಣ ಮಾಡದಂತೆ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಬಿಳಿಮಲೆ ಸೂಚಿಸಿದರು.

ಇದಕ್ಕೆ ಸ್ಪಂದಿಸಿದ ಆಯುಕ್ತರು, ‘ಇದೇ ಫೆಬ್ರುವರಿಯಲ್ಲಿನವೀಕರಣ ಪ್ರಕ್ರಿಯೆ ನಡೆಯಲಿದೆ. ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಅಳವಡಿಸಿಕೊಳ್ಳದಿರುವವರ ಪರವಾನಗಿಯನ್ನು ನವೀಕರಣ ಮಾಡಬಾರದು’ ಎಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಮೌಖಿಕ ಆದೇಶ ನೀಡಿದರು. ಪಾಲಿಕೆ ವ್ಯಾಪ್ತಿಯಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಂಟೂ ವಲಯಗಳಲ್ಲಿ ಕನ್ನಡ ಅನುಷ್ಠಾನ ಘಟಕ ಪ್ರಾರಂಭಿಸುವುದಕ್ಕೂ ನಿರ್ಧಾರ ಕೈಗೊಳ್ಳಲಾಯಿತು.



ಅಧಿಕಾರಿಗಳ ಜತೆಗೆ ಪುರುಷೋತ್ತಮ ಬಿಳಿಮಲೆ ಸಭೆ ನಡೆಸಿದರು

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪುರುಷೋತ್ತಮ ಬಿಳಿಮಲೆ, ‘ಸರ್ಕಾರದ ಆದೇಶದ ಅನುಸಾರ ಎಲ್ಲ ಮಳಿಗೆಗಳು ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಅಳವಡಿಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ನಾಮಫಲಕಗಳು ಕಾಣಿಸುತ್ತಿವೆ. ಇನ್ನಷ್ಟು ಮುತುವರ್ಜಿಯಿಂದ ಕನ್ನಡ ಅನುಷ್ಠಾನ ಮಾಡಬೇಕಿದೆ. ಪರವಾನಗಿ ನವೀಕರಣದ ವೇಳೆಯೇ ನಾಮಫಲಕ ಪರಿಶೀಲಿಸಿ, ಶೇ 60ರಷ್ಟು ಕನ್ನಡ ಅಳವಡಿಸಿಕೊಳ್ಳದ ಮಳಿಗೆಗಳ ಪರವಾನಗಿ ನವೀಕರಣ ಮಾಡದಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದರಿಂದ ಶೇ 100 ರಷ್ಟು ಕನ್ನಡ ಅನುಷ್ಠಾನ ಸಾಧ್ಯವಾಗಲಿದೆ’ ಎಂದರು.

‘ಆಡಳಿತದ ಎಲ್ಲ ಘಟಕಗಳಲ್ಲಿ ಕನ್ನಡ ಅನುಷ್ಠಾನ ಸಮಿತಿ ಇರಬೇಕು. ಅದು ಕನ್ನಡ ಅನುಷ್ಠಾನದ ಬಗ್ಗೆ ಗಮನಿಸಿ, ಕಾಲ ಕಾಲಕ್ಕೆ ಸಲಹೆ–ಸೂಚನೆಗಳನ್ನು ನೀಡಬೇಕು. ಕನ್ನಡದ ಉಲ್ಲಂಘನೆ ಆಗುತ್ತಿದ್ದರೆ ಪ್ರಾಧಿಕಾರದ ಗಮನಕ್ಕೆ ತಂದು, ಕನ್ನಡದ ಜಾಲವನ್ನು ಬೆಳೆಸಬೇಕು. ಬಿಬಿಎಂಪಿಯ ಎಂಟು ವಲಯಗಳಲ್ಲೂ ಕನ್ನಡ ಘಟಕ ಸ್ಥಾಪಿಸಲು ಆಯುಕ್ತರು ಒಪ್ಪಿಕೊಂಡಿದ್ದಾರೆ. ಮುಂದಿನ ಒಂದು ವರ್ಷದಲ್ಲಿ ಎಲ್ಲ ವಲಯಗಳಲ್ಲಿ ಕನ್ನಡ ಅನುಷ್ಠಾನ ಘಟಕಗಳು ಪ್ರಾರಂಭ ಆಗಲಿವೆ’ಎಂದು ಹೇಳಿದರು.

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್, ‘ನಾಮ-ಫಲಕಗಳಲ್ಲಿ ಶೇ 60 ರಷ್ಟು ಕನ್ನಡವಿರದಿದ್ದರೆ ಪರವಾನಗಿ ನವೀಕರಣ ಮಾಡುವುದಿಲ್ಲ. ಪರವಾನಗಿ ಹೊಂದಿರದ ಮಳಿಗೆಗಳ ನಾಮಫಲಕಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳ ಲಾಗುವುದು’ ಎಂದು ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ವಿ.ಪಿ. ನಿರಂಜನಾರಾಧ್ಯ, ಕಾರ್ಯದರ್ಶಿ ಸಂತೋಷ ಹಾನಗಲ್ಲ, ಬಿಬಿಎಂಪಿ ವಿಶೇಷ ಆಯುಕ್ತರಾದ ಮುನೀಷ್ ಮೌದ್ಗಿಲ್, ಅವಿನಾಶ್ ಮೆನನ್, ಹರಿಶ್ ಕುಮಾರ್, ವಿಕಾಸ್ ಕೆ.ಎಸ್. ಉಪಸ್ಥಿತರಿದ್ದರು.

ಕಿದ್ವಾಯಿ ಸಂಸ್ಥೆ: ಸಾವಿರ ರೋಬೊಟಿಕ್ ಶಸ್ತ್ರ ಚಿಕಿತ್ಸೆ

ಬೆಂಗಳೂರು: ಕ್ಯಾನ್ಸರ್ ಪೀಡಿತರ ಶಸ್ತ್ರಚಿಕಿತ್ಸೆಗೆ ರೋಬೊಟಿಕ್ ತಂತ್ರಜ್ಞಾನ ಅಳವಡಿಸಿಕೊಂಡಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಈ ತಂತ್ರಜ್ಞಾನದ ನೆರವಿನಿಂದ ಒಂದು ಸಾವಿರ ರೋಬೊಟಿಕ್ ಶಸ್ತ್ರಚಿಕಿತ್ಸೆಗಳನ್ನು ಪೂರ್ಣಗೊಳಿಸಿದೆ.

ಸಂಸ್ಥೆಯು ಒಂಬತ್ತು ವರ್ಷಗಳಲ್ಲಿ ಈ ಸಾಧನೆ ಮಾಡಿದೆ. ಡಾ. ವಿನ್ಸಿ ರೋಬೊಟಿಕ್ ತಂತ್ರಜ್ಞಾನ ಅಳವಡಿಸಿಕೊಂಡು, ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ಅಮೆರಿಕದ ಇನ್‌ಸ್ಟಿಟ್ಯೂಟ್ ಆಫ್ ಸರ್ಜಿಕಲ್ ರಿಸರ್ಚ್ ಸಂಸ್ಥೆಯು ಡಾ.ವಿನ್ಸಿ ರೋಬೊಟಿಕ್ ಯಂತ್ರವನ್ನು ಅಭಿವೃದ್ಧಿಪಡಿಸಿದೆ. ರಾಜ್ಯದಲ್ಲಿ ಸರ್ಕಾರಿ ವ್ಯವಸ್ಥೆಯಡಿ ಕಿದ್ವಾಯಿ ಸಂಸ್ಥೆಯಲ್ಲಿ ಮಾತ್ರ ಈ ರೋಬೊ ಕಾರ್ಯಾಚರಣೆ ಮಾಡುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ತಿಳಿಸಿದೆ.

‘ಸಂಸ್ಥೆಯು ಒಂದು ಸಾವಿರ ರೋಬೊಟಿಕ್ ಶಸ್ತ್ರಚಿಕಿತ್ಸೆ ಪೂರೈಸಿರುವುದು ಶ್ಲಾಘನೀಯ. ನೂತನ ವೈದ್ಯಕೀಯ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ರೋಗಿಗಳಿಗೆ ತ್ವರಿತವಾಗಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ.

ಶಿವಗಂಗೆ ಗ್ರಾ.ಪಂ: ಅಧ್ಯಕ್ಷರ ಆಯ್ಕೆ

ದಾಬಸ್ ಪೇಟೆ: ಸೋಂಪುರ ಹೋಬಳಿ ಶಿವಗಂಗೆ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಮಾಚನಹಳ್ಳಿಯ ಕೆ.ಸಂತೋಷ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ನಾಗೇಶ್ ಘೋಷಿಸಿದರು. ಕೆ.ಬಿ.ಪ್ರಭುದೇವ ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ಕೆ.ಸಂತೋಷ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು.

‘ಸಮರ್ಪಕ ಕಸ ವಿಲೇವಾರಿಗೆ ಒತ್ತು ಕೊಡಲಾಗುವುದು. ಧಾರ್ಮಿಕ ಹಾಗೂ ಪ್ರವಾಸಿ ಕೇಂದ್ರವಾಗಿರುವ ಶಿವಗಂಗೆಯನ್ನು ಸ್ವಚ್ಛವಾಗಿಸಲು ಪ್ರಯತ್ನ ಮಾಡಲಾಗುವುದು. ಪಂಚಾಯಿತಿಗೆ ಸೇರುವ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ’ ಎಂದು ಸಂತೋಷ್ ಹೇಳಿದರು. ಸದಸ್ಯರಾದ ಕೆ.ಬಿ. ಪ್ರಭುದೇವ, ಗಾಯತ್ರಮ್ಮ ಮರಿಯಪ್ಪ, ಚೇತನ ನಾಗೇಶ ನಾಯಕ, ಎಸ್.ಜಿ.ಗಂಗಾಧರ, ಪಿ.ಮನುಪ್ರಸಾದ, ಕೌಸರ್ ಖಾನಂ, ದಿನೇಶ ನಾಯಕ, ಬಿ.ಉಷಾ, ಎಂ.ಎಸ್.ರಮೇಶ್, ವಿ.ಉಮಾ, ಜಿ.ನಾರಾಯಣಸ್ವಾಮಿ, ಜಯಮ್ಮ ವಿ.ಶ್ರೀನಿವಾಸ, ಜಯಮ್ಮ, ಎಸ್.ಪ್ರೇಮಲತಾ, ಮಂಗಳಮ್ಮ ಉಪಸ್ಥಿತರಿದ್ದರು.

ಗುಂಡುತೋಪಿನಲ್ಲಿ ಗ್ರಾ.ಪಂ. ಕಟ್ಟಡ ನಿರ್ಮಾಣ: ಆರೋಪ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಸರ್ಕಾರಿ ಗುಂಡುತೋಪಿನಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ ಹಾಗೂ ಡಿಜಿಟಲ್ ಗ್ರಂಥಾಲಯವನ್ನು ನಿರ್ಮಾಣ ಮಾಡುತ್ತಿದ್ದಾರೆ’ ಎಂದು ಮಹದೇವಪುರ ಕ್ಷೇತ್ರದ ಜೆಡಿಎಸ್ ಉಪಾಧ್ಯಕ್ಷ ಎಂ.ಚಂದ್ರಶೇಖರ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸರ್ಕಾರಿ ಗುಂಡುತೋಪಿನಲ್ಲಿ ಉದ್ಯಾನ ಹೊರತುಪಡಿಸಿ ಉಳಿದ ಯಾವುದೇ ರೀತಿಯ ಕಟ್ಟಡ ಮತ್ತು ಕಾಮಗಾರಿಗಳನ್ನು ನಡೆಸಬಾರದು ಎಂದು ಹೈಕೋರ್ಟ್ ಆದೇಶ ಹೊರಡಿಸಿದೆ. ಆದರೆ, ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿ ಪಿಡಿಒ ಹಾಗೂ ಇತರೆ ಅಧಿಕಾರಿಗಳು ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿ, ಸರ್ವೆ ನಂಬರ್ 106ರಲ್ಲಿ 3 ಎಕರೆ 16 ಗುಂಟೆ ಜಮೀನಿನ ಪೈಕಿ 16 ಗುಂಟೆ ಜಮೀನಿನಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ, ಡಿಜಿಟಲ್ ಗ್ರಂಥಾಲಯ ನಿರ್ಮಿಸಲು ಮುಂದಾಗಿದ್ದಾರೆ’ ಎಂದು ದೂರಿದರು.



ದೊಡ್ಡಗುಬ್ಬಿಯಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ ಕಾಮಗಾರಿ

‘ಸ್ವಚ್ಛ ಉದ್ಯಾನಗಳ ಅಭಿವೃದ್ಧಿಗೆ ಆದ್ಯತೆ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ವಾಯುವಿಹಾರಿಗಳ ಅನುಕೂಲಕ್ಕೆ ಉದ್ಯಾನಗಳಲ್ಲಿ ಸ್ವಚ್ಛ, ಸುಂದರ, ಪರಿಶುದ್ಧ ವಾತಾವರಣ ನಿರ್ಮಿಸುವ ಉದ್ದೇಶದಿಂದ ಉದ್ಯಾನಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ’ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.


ಶೆಟ್ಟಿಹಳ್ಳಿ ವಾರ್ಡ್ ಮತ್ತು ದಾಸರಹಳ್ಳಿ ಉದ್ಯಾನದ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು. ಕ್ಷೇತ್ರದ ನಾಲ್ಕು ಉದ್ಯಾನಗಳ ಅಭಿವೃದ್ಧಿಗೆ ₹1.5 ಕೋಟಿ ವೆಚ್ಚ ಮಾಡಲಾಗುತ್ತಿದೆ. ಆಸನಗಳು, ನೀರಿನ ಸೌಲಭ್ಯ, ನಡಿಗೆ ಪಥ, ಗಿಡಗಳು, ರಕ್ಷಣೆ, ನಿರ್ವಹಣೆ, ಸ್ವಚ್ಛತೆ ಇನ್ನು ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಶೆಟ್ಟಿಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಶೆಟ್ಟಿಹಳ್ಳಿ ಬಿ. ಸುರೇಶ್, ಉಮಾದೇವಿ ನಾಗರಾಜು, ಬಿ.ಟಿ. ಶ್ರೀನಿವಾಸ್, ತೋಟಗಾರಿಕೆ ಸಹಾಯಕ ನಿರ್ದೇಶಕ ಹನುಮಂತ ನಾಯ್ಕ, ಇಲಾಖೆಯ ಶಿವಲಿಂಗೇಗೌಡ ಇದ್ದರು.

ವಿಭಜಕ ಪಠ್ಯ ಕೈಬಿಡಿ: ಅರುಣ್ ಶಹಾಪುರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ ಕನ್ನಡ ಪಠ್ಯಪುಸ್ತಕದಲ್ಲಿ ರಾಮಲಿಂಗಪ್ಪ ಟಿ.ಬೇಗೂರು ಅವರ ಬರಹವಿದ್ದು, ಅದು ವಿಭಜಕ ಮನಸ್ಥಿತಿಯಿಂದ ಕೂಡಿದೆ. ಅದನ್ನು ಕೂಡಲೇ ಪಠ್ಯದಿಂದ ಕೈಬಿಡಬೇಕು’ ಎಂದು ಬಿಜೆಪಿ ಮುಖಂಡ ಅರುಣ್ ಶಹಾಪುರ ಆಗ್ರಹಿಸಿದರು.



ಅರುಣ್ ಶಹಾಪುರ

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಮಲಿಂಗಪ್ಪ ಅವರ ಒಂದು ಬರಹವನ್ನು ಪ್ರಥಮ ಸೆಮಿಸ್ಟರ್‌ನ ಕನ್ನಡ ಪಠ್ಯ ಪುಸ್ತಕದಲ್ಲಿ ಸೇರಿಸಲಾಗಿದೆ. ಆ ಲೇಖನದುದ್ದಕ್ಕೂ ಅವರು ರಾಷ್ಟ್ರವಾದ, ಭಾರತಮಾತೆ, ಹಿಂದೂ ಧರ್ಮ ಮತ್ತು ಭಾಷಾವಾರು ಪ್ರಾಂತ್ಯಗಳನ್ನು ಪ್ರಶ್ನಿಸಿದ್ದಾರೆ. ಇದು ದೇಶದ್ರೋಹ’ ಎಂದರು.

‘ಇಂತಹ ವಿಭಜಕ ಬರಹವನ್ನು ಪಠ್ಯದಲ್ಲಿ ಸೇರಿಸುವಾಗ ತಜ್ಞರು ಏನು ಮಾಡುತ್ತಿದ್ದರು? ಈ ಬರಹದ ವಿರುದ್ಧ ಪೊಲೀಸರು ಈವರೆಗೆ ಏಕೆ ಪ್ರಕರಣ ದಾಖಲಿಸಿಲ್ಲ? ಸರ್ಕಾರ ಈಗಲಾದರೂ ಲೇಖಕರ ವಿರುದ್ಧ ಕ್ರಮ ತೆಗದುಕೊಳ್ಳಬೇಕು’ ಎಂದರು.

‘ಸರ್ಕಾರ ಕ್ರಮ ತೆಗೆದುಕೊಳ್ಳದೇ ಇದ್ದರೆ, ರಾಜ್ಯಪಾಲರು ಕ್ರಮಕ್ಕೆ ಮುಂದಾಗಬೇಕು. ವಿಶ್ವವಿದ್ಯಾಲಯಗಳ ಪಠ್ಯಕ್ರಮವನ್ನು ಪರಿಶೀಲಿಸುವ ಸಲುವಾಗಿ ಅವರು ಅಧಿಕಾರಿಗಳಿಂದ ವರದಿ ತರಿಸಿಕೊಳ್ಳಬೇಕು’ ಎಂದರು.

ಕಸಾಪ: ₹35 ಕೋಟಿ ಅನುದಾನಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು 2025-26ನೇ ಸಾಲಿನ ಬಜೆಟ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ವಾರ್ಷಿಕ ಅನುದಾನವಾಗಿ ₹35 ಕೋಟಿ ಮೀಸಲಿಡಬೇಕು ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಜೋಶಿ, ‘ಸ್ವಾತಂತ್ರ್ಯಾ ನಂತರ ಚುನಾಯಿತ ಸರ್ಕಾರಗಳು ಪರಿಷತ್ತಿನ ಅವಶ್ಯಕತೆಗಳಿಗೆ ಅನುಗುಣವಾಗಿ ಅನುದಾನ ನೀಡುತ್ತಾ ಬಂದಿವೆ. 2017-18ರಲ್ಲಿ ₹12 ಕೋಟಿ ಅನುದಾನ ನೀಡಿದ್ದು, ಪ್ರಸ್ತುತ ಸಂದರ್ಭಕ್ಕೆ ಬೆಲೆ ಏರಿಕೆಯನ್ನು ಪರಿಗಣಿಸಿ ಹೆಚ್ಚುವರಿ ಅನುದಾನ ನೀಡಬೇಕು’ ಎಂದು ಕೋರಿದ್ದಾರೆ.

‘ಪರಿಷತ್ತಿನ ವ್ಯಾಪ್ತಿ ಕೂಡ ವಿಸ್ತಾರವಾಗಿದ್ದು, ಜಿಲ್ಲಾ ಮಟ್ಟ ಮಾತ್ರವಲ್ಲದೆ ತಾಲ್ಲೂಕು, ಹೋಬಳಿ ಮಟ್ಟದಲ್ಲೂ ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿವೆ. ಪರಿಷತ್ತಿನ ನಿರ್ವಹಣೆ, ಪುಸ್ತಕ ಪ್ರಕಟಣೆ, ವಿಚಾರಸಂಕಿರಣ, ಕಾರ್ಯಾಗಾರಗಳು, ಸ್ಥಗಿತಗೊಂಡಿರುವ ನಿಘಂಟು ಯೋಜನೆ ಮುಂದುವರಿಕೆ ಸೇರಿ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ₹35 ಕೋಟಿ ಅನುದಾನದ ಅಗತ್ಯವಿದೆ. ಬಜೆಟ್‌ನಲ್ಲಿ ಈ ಮೊತ್ತವನ್ನು ಕಾಯ್ದಿರಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಶಾಸಕ ಹುಸೇನ್ ಭೂಮಿ ಕಬಳಿಸಿಲ್ಲ: ಗ್ರಾಮಸ್ಥರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ರಾಮನಗರ: ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರು ಜಿಲ್ಲೆಯ ಕನಕಪುರ ತಾಲ್ಲೂಕಿನ ಹೊಂಗಾಣಿದೊಡ್ಡಿ ಗ್ರಾಮದಲ್ಲಿ ಭೂ ಕಬಳಿಕೆ ಮಾಡಿದ್ದಾರೆ ಎಂಬ ಆರೋಪ ಸುಳ್ಳು. ಗ್ರಾಮದ ಸರ್ವೆ ನಂಬರ್ 265, 267 ಹಾಗೂ 272 ಅನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಕೊಂಡು ಗೇಣಿದಾರರನ್ನು ಒಕ್ಕಲೆಬ್ಬಿಸಲು ಸಂಚು ರೂಪಿಸಿದ್ದಾರೆ ಎಂಬ ಆರೋಪದಲ್ಲಿ ಹುರುಳಿಲ್ಲ ಎಂದು ಗ್ರಾಮಸ್ಥರು ಸ್ಪಷ್ಟಪಡಿಸಿದರು.

ಹುಸೇನ್ ವಿರುದ್ಧ ಭೂ ಕಬಳಿಕೆ ಆರೋಪದಡಿ ಗ್ರಾಮದ ಕೆಲವರು ಜಿಲ್ಲಾ ಲೋಕಾಯುಕ್ತಕ್ಕೆ ಮೂರು ದಿನಗಳ ಹಿಂದೆ ದೂರು ಕೊಟ್ಟಿದ್ದರು. ಅದರ ಬೆನ್ನಲ್ಲೇ ಗ್ರಾಮಸ್ಥರು ಲೋಕಾಯುಕ್ತ ಕಚೇರಿಗೆ ಶುಕ್ರವಾರ ಭೇಟಿ ನೀಡಿದರು. ‘ಶಾಸಕರ ವಿರುದ್ಧದ ಆರೋಪ ಸುಳ್ಳು’ ಎಂದು ಮನವಿ ಸಲ್ಲಿಸಿದರು.

ಮೂವತ್ತೈದರ ನಂತರ...




ರೂಪಾ ಕೆ.ಎಂ.

ಮೂವತ್ತೈದಾಗುತ್ತಿದ್ದಂತೆ ಮನೆ, ಮಕ್ಕಳು, ಆಫೀಸ್‌ಯೆಂದು ವಿವಾಹಿತ ಹೆಣ್ಣು ಮಕ್ಕಳ ಪ್ರಪಂಚ ಸೀಮಿತಗೊಳ್ಳುತ್ತ ಹೋಗುತ್ತದೆ. ಬೆಳಿಗ್ಗೆಯ ತಿಂಡಿಗೇನು, ಮಧ್ಯಾಹ್ನದ ಊಟಕ್ಕೇನು, ರಾತ್ರಿಯ ಅಡುಗೆಯೇನು, ಗಂಡ, ಮಕ್ಕಳು, ಕುಟುಂಬದ ಸದಸ್ಯರ ದೇಖರೇಖಿ, ಉದ್ಯೋಗಸ್ಥಳಾದರೆ ಆಫೀಸಿನ ಹೊಸ ಪ್ರಾಜೆಕ್ಟ್, ಡೆಡ್‌ಲೈನ್‌ಗಳ ಚೌಕಟ್ಟಿನಲ್ಲಿ ಬದುಕುವಾಗ ಏಕತಾನತೆ ಮೂಡಿದರೆ ಆಶ್ಚರ್ಯವಿಲ್ಲ. ಆಗಾಗ್ಗೆ ನೋಡುವ ಧಾರಾವಾಹಿಗಳು, ವೆಬ್‌ಸಿರೀಸ್‌ಗಳು, ಅವುಗಳಲ್ಲಿ ಬರುವ ಪಾತ್ರಗಳು ಹೀಗೆ ಬೇಸರದ ಚಕ್ರ ತಿರುಗತ್ತಲೇ ಸಾಗುತ್ತದೆ. ಇಂಥ ಸಂದರ್ಭದಲ್ಲಿ ಆಲೋಚನೆಗಿಷ್ಟು ಸ್ಪಷ್ಟತೆ ಹಾಕಿಕೊಳ್ಳುವುದು ಅಗತ್ಯ. ಸ್ವಪ್ರೇರಣೆ ನಿರಂತರವಾಗಿದ್ದರೆ, ಯಾವ ಘಟ್ಟವಾದರೂ ಸುಲಭವಾಗಿ ನಿಭಾಯಿಸಬಹುದು.

ಹಿತಾಸಕ್ತಿಗೆ ಆದ್ಯತೆ ಸಿಗಲಿ: ನಿಮ್ಮ ಬದುಕಿಗೆ ಯಾವುದು ಸದ್ಯಕ್ಕೆ ಅಗತ್ಯವೆಂಬುದರತ್ತ ಗಮನವಿರಲಿ. ಅದು ವೃತ್ತಿ ಬದುಕೇ ಆಗಿರಲಿ, ಪ್ರವೃತ್ತಿಯೇ ಇರಲಿ. ಮನೆ ಹಾಗೂ ಕುಟುಂಬಕ್ಕೆ ಸಮಯ ಕೊಡುವುದಾಗಲಿ, ಹವ್ಯಾಸಗಳಿರಲಿ, ಆರೋಗ್ಯದತ್ತ ಕಾಳಜಿ ಇರಬಹುದು ಹೀಗೆ ಯಾವುದೇ ಆಗಿರಲಿ; ಅದು ನಿಮ್ಮ ಹಿತಾಸಕ್ತಿಯನ್ನು ಆಧರಿಸಿರಲಿ.

ಹೊಸ ಗುರಿಯನ್ನು ಸೃಷ್ಟಿಸಿ: ಒಬ್ಬೊಬ್ಬರ ಬದುಕಿನಲ್ಲಿ ಒಂದೊಂದು ಗುರಿ ಇರುತ್ತದೆ. ಚಿಕ್ಕದೊ, ದೊಡ್ಡದೊ ಗುರಿಯೊಂದನ್ನು ನಿಶ್ಚಯಿಸಿಕೊಳ್ಳಿ. ಅದನ್ನು ಈಡೇರಿಸುವ ಸಲುವಾಗಿ ಸಣ್ಣ ಸಣ್ಣ ಹೆಜ್ಜೆಗಳನ್ನು ಇಡಲು ಆರಂಭಿಸಿ. ಮೂವತ್ತೈದಾಯಿತು ಇನ್ನು ಎಂಥ ಗುರಿ? ಎಂದು ಸುಮ್ಮನಾಗಬೇಡಿ. ನಿಮ್ಮ ಆಸಕ್ತಿ, ಹವ್ಯಾಸಗಳನ್ನು ಆಧರಿಸಿಯೇ ಸ್ಪಷ್ಟ ಗುರಿಯೊಂದನ್ನು ರೂಪಿಸಿ. ವೃತ್ತಿ ಇರಲಿ, ಪ್ರವೃತ್ತಿಯೇ ಇರಲಿ , ಸಣ್ಣ ಮಟ್ಟದ ಆದಾಯ ಪಡೆಯುವವರೇ ಆಗಿರಲಿ. ಹಣ ಗಳಿಕೆ ಮತ್ತು ಹೂಡಿಕೆಯತ್ತ ಗಮನವಿರಲಿ. ದುಬಾರಿ ಶಾಪಿಂಗ್ ಮಾಡುವಾಗ, ಸಿಕ್ಕಾಪಟ್ಟೆ ಖರೀದಿಸುವಾಗ, ಮಕ್ಕಳು ಹಾಗೂ ಕುಟುಂಬದ ಸದಸ್ಯರಿಗೆಂದು ಹಣ ಮೀಸಲಿಡುವಾಗ ನಿಮ್ಮ ಭವಿಷ್ಯದ ಬಗ್ಗೆ ಎರಡೆರಡು ಸಲ ಯೋಚಿಸಿ.

ಕಲಿಕೆ ನಿರಂತರ: ಕಲಿಯುವುದೇ ಬದುಕು. ಕಲಿಕೆಯೆಂಬುದು ಅನುದಿನದ ಇರುವಂಥದ್ದು. ಹಾಗಾಗಿ ಹೊಸ ಕೌಶಲವನ್ನು ಕಲಿಯಲು ಹಿಂಜರಿಯಬೇಡಿ. 'ಈ ವಯಸ್ಸಿಗೆ ಇದು ಬೇಕಾ?' ಎಂದು ನಕಾರಾತ್ಮಕವಾಗಿ ಯೋಚಿಸುವುದನ್ನು ಬಿಡಿ. ವೈಯಕ್ತಿಕ ಬೆಳವಣಿಗೆಗೆ ಅಗತ್ಯವಿರುವ ಯಾವ ಕೌಶಲವನ್ನಾದರೂ ಪಟ್ಟುಬಿಡದೆ ಕಲಿಯಿರಿ. ಮೊದಲಿಗೆ ನಿಮ್ಮ ಸಾಮರ್ಥ್ಯವೇನು ಎಂಬುದನ್ನು ಅರಿತುಕೊಳ್ಳಿ. ಅದಕ್ಕೆ ತಕ್ಕ ಹಾಗೇ ಇರುವ ಕೌಶಲ ಕಲಿಯಲು ಮರೆಯಬೇಡಿ. ವೃತ್ತಿಯಲ್ಲಿ 'ಇದ್ದಲ್ಲೇ ಉಳಿದುಬಿಟ್ಟಿದ್ದೇನೆ' ಅನಿಸಿದರೆ ಆದಷ್ಟು ಆರಾಮ ವಲಯದಿಂದ ಹೊರಬಂದು ಹೊಸತೇನಾದರೂ ಯೋಜನಾಬದ್ಧವಾಗಿಯೇ ಮಾಡಿದರೆ ಯಶಸ್ಸು ತಡವಾಗಿಯಾದರೂ ಸಿಕ್ಕೇ ಸಿಗುತ್ತದೆ.



> ಬದುಕು ಚಂದಗೊಳಿಸಲು, ಇನ್ನಷ್ಟು ಕ್ರಿಯಾಶೀಲರಾಗಲು, ಚೈತನ್ಯ ತುಂಬಿಕೊಳ್ಳಲು ಮೂವತ್ತೈದು ಎನ್ನುವುದು ಮೋಡಿಯ ಸಂಖ್ಯೆಯಷ್ಟೆ. ಎಲ್ಲ ಜಂಜಾಟಗಳ ನಡುವೆಯೂ ಬದುಕನ್ನು ಅದಮ್ಯವಾಗಿ ಪ್ರೀತಿಸಿಬಿಟ್ಟರೆ ಆಯಿತು. ಪ್ರೀತಿಯಿದ್ದರೆ ಪ್ರೇರಣೆಯೂ ತಾನಾಗಿಯೇ ಒದಗಿ ಬರುತ್ತದೆ ಅಲ್ಲವೇ?

ಸ್ವಕಾಳಜಿ: ಎಲ್ಲ ರೀತಿಯಲ್ಲಿಯೂ ಸ್ವಕಾಳಜಿ ಹೊಂದುವುದರ ಮೊತ್ತವೇ ಸ್ವಪ್ರೇರಣೆಯಾಗಿರುತ್ತದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಸಮಯವನ್ನು ಮೀಸಲಿಡಿ. ಮಾನಸಿಕ ಒತ್ತಡ, ತುಮುಲ, ಹಾರ್ಮೋನ್‌ಗಳ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಅದಕ್ಕೆ ಪೂರಕವಾಗಿ ಬಿರುಸು ನಡಿಗೆ, ಯೋಗ, ಪ್ರಾಣಾಯಾಮ, ಧ್ಯಾನದಂಥ ಕೌಶಲನ್ನು ಅವಳಡಿಸಿಕೊಳ್ಳಿ. ಪ್ರಕೃತಿಯ ಸಂಪರ್ಕದಲ್ಲಿದಷ್ಟು ಹೊತ್ತು ಮನಸ್ಸು ಪ್ರಶಾಂತತೆಯನ್ನು ಹೊಂದುತ್ತದೆ. ಬಿರುಬೇಸಿಗೆಯ ಸಂಜೆಯಲ್ಲಿ ಬೀಸುವ ತಂಗಾಳಿ, ಆಗಷ್ಟೆ ಬಿದ್ದ ಮಳೆಗೆ ಹರಡುವ ಮಣ್ಣಿನ ವಾಸನೆ, ಹೊಸ ಮಣ್ಣಿನೊಂದಿಗೆ ಬೆರೆತು, ಬೆಳೆದ ಗಿಡದಲ್ಲಿ ಗುಲಾಬಿಯೊಂದು ಬಿರಿಯುವ ರೀತಿಯನ್ನು ಗಮನಿಸಿ. ಗಾಜಿನ ಹೂಜಿಯಲ್ಲಿಟ್ಟ ಮನಿಪ್ಲ್ಯಾಂಟ್ ಚಿಗುರೊಡೆಯುತ್ತಿದ್ದರೆ, ಅಕ್ವೇರಿಯಂನಲ್ಲಿ ಮೀನುಗಳು ದೊಡ್ಡದಾಗುತ್ತಿದ್ದರೆ ಖುಷಿ ಪಡಿ. ಹೀಗೆ ಪ್ರಕೃತಿಯಲ್ಲಿರುವ ಸಣ್ಣ ಸಣ್ಣ ಸಂಗತಿಗಳು ನಿಮ್ಮೊಳಗೆ ಅಗಾಧ ಚೈತನ್ಯವನ್ನು ತುಂಬಬಲ್ಲವು.

ಬೆಂಬಲಿಸುವವರು ಬೆನ್ನಿಗಿರಲಿ: ಪ್ರೀತಿಸುವವರಷ್ಟೆ ಬೆಂಬಲಿಸುವವರನ್ನೂ ಬೆನ್ನಿಗಿಟ್ಟುಕೊಳ್ಳಿ. ಯಾವುದೇ ಲೆಕ್ಕಚಾರ ಹಾಕದೇ ಹಿಡಿ ಪ್ರೀತಿ ಕೊಟ್ಟವರನ್ನು, ವಿಶ್ವಾಸ ಇಟ್ಟವರನ್ನು ಎಂದಿಗೂ ಕಳೆದುಕೊಳ್ಳಬೇಡಿ. 'ಇಂಥದ್ದು ಮಾಡುತ್ತೇನೆ' ಎಂದಾಗ ಅದರ ಒಳಿತು ಕೆಡಕಿನ ಬಗ್ಗೆ ಸವಿಸ್ತಾರವಾಗಿ ಹೇಳುತ್ತಲೇ ಹುರಿದುಂಬಿಸುವವರ ನಡುವೆ ಇರಿ. ಇಂಥದ್ದೊಂದು ಸ್ನೇಹಿತರ ಬಳಗ ನಿಮಗೆ ಸಿಗಲಿಲ್ಲವೆಂದರೆ ಚಿಂತೆ ಮಾಡಬೇಡಿ. ನಿಮಗೆ ನೀವೆ ಸ್ನೇಹಿತರಾಗಿ. ಆಲೋಚನೆಗಳನ್ನೆಲ್ಲ ಪುಸ್ತಕದಲ್ಲಿ ಬರೆಯಲು ಪ್ರಯತ್ನಿಸಿ. ಆಗ ಆಲೋಚನೆಗಳಿಗೆ ಸ್ಪಷ್ಟತೆ ಸಿಗುತ್ತದೆ. ಸೋತು ಗೆದ್ದವರ ಕಥೆಗಳನ್ನು ಹೆಚ್ಚು ಓದಿ, ತಿಳಿಯಲು ಪ್ರಯತ್ನಿಸಿ. ಅದು ನಿಮಗೆ ದೊಡ್ಡ ಪ್ರೇರಣೆಯನ್ನು ಒದಗಿಸಬಲ್ಲದು.

ಕ್ರಿಯಾಶೀಲರಾಗಿ: ಗೃಹಿಣಿಯರೇ ಆಗಿರಲಿ, ಆಫೀಸ್ ಹಾಗೂ ಮನೆ ಎರಡನ್ನೂ ಸರಿದೂಗಿಸುವವರೇ ಆಗಿರಲಿ 'ರೂಟಿನ್' ಜತೆಗೆ ಕ್ರಿಯಾಶೀಲತೆಯನ್ನು ಅಳವಡಿಸಿಕೊಳ್ಳಿ. ಬದುಕಿನ ಬಂಡಿ ಮುನ್ನಡೆಯಲು ಶಿಸ್ತು ಅಗತ್ಯ. ಒಂದಾದ ಮೇಲೆ ಒಂದು ಕೆಲಸವನ್ನು ಯೋಜನಾಬದ್ಧವಾಗಿ ಮಾಡುವುದು ಕೂಡ ಅನಿವಾರ್ಯ. 'ನಿತ್ಯ ಅದದೇ ಕೆಲಸ ಮಾಡಬೇಕಾ?' ಎಂದು ಬೇಸರ ಪಟ್ಟುಕೊಳ್ಳದೇ, ಕೆಲಸವನ್ನು ಆದಷ್ಟು ಜಾಣ್ಮೆಯಿಂದ ಮುಗಿಸಿ. ರೂಟಿನ್ ಮುಗಿದ ಮೇಲೆ ನಿಮಗೆ ಖುಷಿ ಎನಿಸುವ ಕೆಲಸದಲ್ಲಿ ನಿರತರಾಗಿ. ಹಾಕಿಕೊಂಡ ಯೋಜನೆಗಳು ಸಣ್ಣಮಟ್ಟದಲ್ಲಿ ಫಲ ನೀಡಿದ್ದರೂ ಅದನ್ನು ಕಂಡು ಖುಷಿಪಡಿ. ನಿಮ್ಮೊಳಗೆ ಹುಟ್ಟುವ ಖುಷಿಯೇ ನಿಮ್ಮನ್ನು ಇನ್ನಷ್ಟು ದೂರ ಕರೆದುಕೊಂಡು ಹೋಗಲು ಪ್ರೇರಣೆಯಾಗುತ್ತದೆ.

ಬದುಕು ನೀಡುವ ಹಲವು ಅನುಭವಗಳಿಗೆ ಒಡ್ಡಿಕೊಂಡು ಬುದ್ಧಿ–ಭಾವ ಬಲಗೊಳ್ಳುವ ಹಂತ ತಲುಪುವುದೇ 30ರ ನಂತರ. 'ಅಯ್ಯೊಯ್ಯೊ ಈ ಬುದ್ಧಿ ಮೊದಲೇ ಇದ್ದಿದ್ದರೆ', 'ಈ ವ್ಯವಹಾರಿಕ ಜ್ಞಾನ' ಮೊದಲೇ ತಿಳಿದಿದ್ದರೆ' , 'ಸಂಬಂಧಗಳನ್ನು ಸರಿಯಾಗಿ ನಿರ್ವಹಿಸುವ ಕಲೆಯನ್ನು ಮೊದಲೇ ಕಲಿತಿದ್ದರೆ, ಹೀಗಾಗುತ್ತಿರಲಿಲ್ಲ' ಎಂದೆಲ್ಲ ಎಂದು ಕೊರಗುತ್ತಾ, ಪಾಪಪ್ರಜ್ಞೆ ಹೊಂದುವ ಬದಲು ಮನಸ್ಸನ್ನು ತಿಳಿಯಾಗಿ ಇಟ್ಟುಕೊಳ್ಳೋಣ. ಮನಸ್ಸು ತಿಳಿಯಾದಷ್ಟು ಬದುಕುವ ಛಲ ನೂರ್ಮಡಿಯಾಗುತ್ತದೆ. ❖

ಆರೋಗ್ಯಕರ ಎಳ್ಳಿನ ಖಾದ್ಯಗಳು

ತುಂಬಾ ಸುಲಭವಾಗಿ ಕಡಿಮೆ ಅವಧಿಯಲ್ಲಿ ಮಾಡಬಹುದಾದ ಆರೋಗ್ಯಕರ ಎಳ್ಳಿನ ರೆಸಿಪಿಗಳನ್ನು ನೀಡಿದ್ದಾರೆ ಶಕುಂತಲಾ ಜಾಲವಾದಿ

ರಸಾಸ್ವಾದ



ಎಳ್ಳಿನ ಚಿಕ್ಕಿ

ಬೇಕಾಗುವ ಸಾಮಗ್ರಿಗಳು: ಒಂದು ಲೋಟ ಎಳ್ಳು ಹಾಗೂ ಅಷ್ಟೇ ಅಳತೆಯ ಬೆಲ್ಲ, ಒಂದು ಸಣ್ಣ ಚಮಚ ತುಪ್ಪ.

ಮಾಡುವ ವಿಧಾನ: ಎಳ್ಳನ್ನು ಸ್ವಚ್ಛ ಮಾಡಿಕೊಂಡು ಒಂದು ಬಾಣಲೆಯಲ್ಲಿ ಚಟಪಟ ಎನ್ನುವಂತೆ ಹುರಿಯಬೇಕು. ಮತ್ತೊಂದು ಕಡೆ ಒಂದು ಬಾಣಲೆಯಲ್ಲಿ ಒಂದು ಸಣ್ಣ ಚಮಚ ತುಪ್ಪ ಹಾಕಿ ಬೆಲ್ಲ ಕರಗಿಸಬೇಕು. ಬೆಲ್ಲ ಕುದಿಯುವಾಗ ಅದಕ್ಕೆ ಚಿಟಿಕೆ ಅಡಿಗೆ ಸೋಡ ಹಾಕಬೇಕು. ಅಂದರೆ ಚಿಕ್ಕಿ ಸ್ವಲ್ಪ ಗರಿಗರಿಯಾಗುತ್ತವೆ. ಎಳೆ ಪಾಕ ಬಂದ ನಂತರ ಅದಕ್ಕೆ ಹುರಿದ ಎಳ್ಳನ್ನು ಹಾಕಿ ಕಲಸಿ ಮೊದಲೇ ತುಪ್ಪ ಸವರಿದ ತಟ್ಟೆಗೆ ಹಾಕಬೇಕು. ಬಿಸಿ ಇರುವಾಗಲೆ ಚಾಕುವಿನಿಂದ ಬೇಕಾದ ಆಕಾರಕ್ಕೆ ಕತ್ತರಿಸಿ ಬೇಕು. ಆರಿದ ನಂತರ ಚಿಕ್ಕಿ ತಯಾರು.



ಎಳ್ಳಿನ ಚಿತ್ರಾನ್ನ

ಬೇಕಾಗುವ ಸಾಮಗ್ರಿಗಳು: ಒಂದು ಸಣ್ಣ ಲೋಟ ಎಳ್ಳು, ಒಂದು ಸಣ್ಣ ಚಮಚ ಕಡಲೆಬೇಳೆ, ಉದ್ದಿನಬೇಳೆ, ಸ್ವಲ್ಪ ಹಸಿಶೇಂಗಾ, 3 ಒಣ ಮೆಣಸಿನಕಾಯಿ, ಸ್ವಲ್ಪ ಕರಿ ಮೆಣಸು, ಇಂಗು ಒಗ್ಗರಣೆಗೆ, ಕರಿಬೇವು, ಕೊತ್ತಂಬರಿ ಸೊಪ್ಪು ರುಚಿಗೆ ತಕ್ಕಷ್ಟು ಉಪ್ಪು ಉದುರುದರಾದ ಅನ್ನ.

ಮಾಡುವ ವಿಧಾನ: ಮೊದಲು ಎಳ್ಳನ್ನು ಚಟಪಟ ಎನುವಂತೆ ಹುರಿದ ಇಟ್ಟುಕೊಳ್ಳಬೇಕು. ಅನಂತರ ಚಿಕ್ಕ ಬಾಣಲೆಯಲ್ಲಿ ಕಡಲೆಬೇಳೆ ಒಂದು ಚಮಚ, ಉದ್ದಿನ ಬೇಳೆ ಒಂದು ಚಮಚ ಕರಿಮೆಣಸು ಹಾಗೂ ಒಂದೆರಡು ಒಣಮೆಣಸಿನ ಕಾಯಿ ಹಾಕಿ ಎಣ್ಣೆ ಹಾಕದೆ ಹುರಿಯಬೇಕು. ಎಲ್ಲವನ್ನೂ ಸೇರಿಸಿ ಮಿಕ್ಸಿಗೆ ಹಾಕಿ ಪುಡಿ ಮಾಡಿಕೊಳ್ಳಬೇಕು. ಆಮೇಲೆ ಒಂದು ಬಾಣಲೆಯಲ್ಲಿ ಎಣ್ಣೆ ಹಾಕಿ ಕಾದ ನಂತರ ಅದಕ್ಕೆ ಸಾಸಿವೆ, ಜೀರಿಗೆ ಹಾಕಿ ಸಿಡಿದ ನಂತರ ಅದಕ್ಕೆ ಸ್ವಲ್ಪ ಹಸಿ ಶೇಂಗಾ ಹಾಕಿ ಕೈಯಾಡಿಸಬೇಕು. ಮತ್ತೆ ಅದಕ್ಕೆ ಸ್ವಲ್ಪ ಕಡಲೆಬೇಳೆ, ಉದ್ದಿನಬೇಳೆ ಹಾಕಬೇಕು. ಅದಕ್ಕೆ ಕರಿಬೇವನ್ನು ಹಾಕಬೇಕು ಆನಂತರ ಮೊದಲೇ ಉದುರಾಗಿ ಮಾಡಿಟ್ಟುಕೊಂಡ ಅನ್ನಕ್ಕೆ ಒಗ್ಗರಣೆ ಮಾಡಿಟ್ಟುಕೊಂಡ ಮಸಾಲೆ ರುಚಿಗೆ ತಕ್ಕಷ್ಟು ಉಪ್ಪು ಹಾಗೂ ರುಚಿಗೆ ಸ್ವಲ್ಪ ಸಕ್ಕರೆ ಹಾಕಿ ಚೆನ್ನಾಗಿ ಕಲೆಸಬೇಕು. ಹುಳಿ ಬೇಕೆಂದರೆ ನಿಂಬೆಹಣ್ಣು ಹಿಂಡಬೇಕು. ಮೇಲೆ ಕೊತ್ತಂಬರಿ ಸೊಪ್ಪು ಹಾಕಿದರೆ ಎಳ್ಳಿನ ಚಿತ್ರಾನ್ನ ಸವಿಯಲು ಸಿದ್ದ.



ಎಳ್ಳು ಮತ್ತು ಅಗಸೆಯ ಉಂಡೆ

ಬೇಕಾಗುವ ಸಾಮಗ್ರಿಗಳು: ಎಳ್ಳು ಒಂದು ಲೋಟ, ಅಗಸೆ ಅರ್ಧ ಲೋಟ, ಶೇಂಗಾ ಅರ್ಧಲೋಟ, ಬೆಲ್ಲ ಒಂದೂವರೆ ಲೋಟ.

ಮಾಡುವ ವಿಧಾನ: ಎಳ್ಳು ಅಗಸೆ ಮತ್ತು ಶೇಂಗಾಗಳನ್ನು ಬೇರೆ ಬೇರೆಯಾಗಿ ಹುರಿದುಕೊಳ್ಳಬೇಕು. ತಣ್ಣಗಾದ ನಂತರ ಎಲ್ಲವನ್ನೂ ತರಿತರಿಯಾಗಿ ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಬೇಕು. ಪುಡಿಮಾಡಿದ ಒಂದೂವರೆ ಲೋಟ ಮೆತ್ತಗಿನ ಬೆಲ್ಲವನ್ನು ಸೇರಿಸಿ ಮತ್ತೊಮ್ಮೆ ಮಿಕ್ಸಿಯಲ್ಲಿ ಹಾಕಬೇಕು.

ನಂತರ ಒಂದು ಪಾತ್ರೆಗೆ ಹಾಕಿಕೊಂಡು ಬೇಕಾದ ಗಾತ್ರದ ಉಂಡೆಯನ್ನು ಕಟ್ಟಿದರೆ ಆರೋಗ್ಯಕರ ಎಳ್ಳು, ಅಗಸೆಯ ಉಂಡೆ ತಿನ್ನಲು ಸಿದ್ಧ. ಕೇವಲ ಅರ್ಧ ಗಂಟೆಯಲ್ಲಿ ರುಚಿಯಾದ ಆರೋಗ್ಯಕರ ಉಂಡೆ ಸವಿಯಲು ಸಿದ್ಧ.



ದಿಢೀರ್ ಹಸಿ ಹುಳಿ

ಬೇಕಾಗುವ ಸಾಮಗ್ರಿಗಳು: ಒಂದು ದೊಡ್ಡ ಚಮಚ ಎಳ್ಳು, ಸಣ್ಣ ನಿಂಬೆಗಾತ್ರದಷ್ಟು ಹುಣಸೆ ಹಣ್ಣು, ಸ್ವಲ್ಪ ಬೆಲ್ಲ ಕೊತ್ತಂಬರಿ ಸೊಪ್ಪು ಕರಿಬೇವು, ಜೀರಿಗೆ, ಇಂಗು ಸಾಸಿವೆ ಹಾಗೂ ಸ್ವಲ್ಪ ಎಣ್ಣೆ ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಹುರಿದ ಎಳ್ಳನ್ನು ಪುಡಿ ಮಾಡಿಕೊಂಡು ಒಂದು ಪಾತ್ರೆಯಲ್ಲಿ ಹುಣಸೆ ರಸವನ್ನು ಹಾಕಿಕೊಂಡು. ಅದಕ್ಕೆ ಎರಡು ಲೋಟ ನೀರು ಹಾಕಿಕೊಳ್ಳಬೇಕು. ಅದಕ್ಕೆ ಒಂದು ಸಣ್ಣ ಚಮಚ ಸಾರಿನ ಪುಡಿ ಹಾಗೂ ಸ್ವಲ್ಪ ಬೆಲ್ಲ ಸೇರಿಸಿಕೊಂಡು ರುಚಿಗೆ ತಕ್ಕಷ್ಟು ಉಪ್ಪು ಹಾಕಬೇಕು. ಇದಕ್ಕೆ ಎಣ್ಣೆ ಒಗ್ಗರಣೆಗೆ ಸಾಸಿವೆ ಜೀರಿಗೆ ಚಟಪಟ ಅಂದಾಗ ಕರಿಬೇವು ಹಾಕಿ ಒಂದು ಒಣಮೆಣಸಿನಕಾಯಿ ಮುರಿದು ಹಾಕಬೇಕು. ಎಲ್ಲವನ್ನೂ ಚೆನ್ನಾಗಿ ಕಲಸಿ ಮೇಲೆ ಕೊತ್ತಂಬರಿ ಸೊಪ್ಪು ಹಾಕಿದರೆ ಮುಗೀತು ಹಸಿ ಹುಳಿ ತಯಾರು.ಕುದಿಸುವ ಅವಶ್ಯಕತೆ ಇಲ್ಲ. ತುಂಬಾ ಸರಳವಾಗಿ ಮನೆಯಲ್ಲಿ ಇರುವ ಪದಾರ್ಥಗಳನ್ನು ಬಳಸಿಕೊಂಡು ಬೇಗನೆ ಮಾಡುವ ಸಾರಿದು.



ಎಳ್ಳಿನ ಸಜ್ಜೆ ರೊಟ್ಟಿ

ಬೇಕಾಗುವ ಸಾಮಗ್ರಿಗಳು: ಒಂದು ಲೋಟ ಸಜ್ಜೆ ಹಿಟ್ಟು, ಸ್ವಲ್ಪ ಇಂಗು, ಸ್ವಲ್ಪ ಅರಿಶಿನ ಪುಡಿ, ಸ್ವಲ್ಪ ಉಪ್ಪು ಒಂದು ಸಣ್ಣ ಲೋಟ ಹಸಿ ಎಳ್ಳು. ಕಲೆಸಲು ನೀರು.

ಮಾಡುವ ವಿಧಾನ: ಮೊದಲಿಗೆ ಜರಡಿ ಹಿಡಿದ ಸಜ್ಜೆ ಹಿಟ್ಟು ತೆಗೆದುಕೊಂಡು ಅದಕ್ಕೆ ಸ್ವಲ್ಪ ಅರಿಶಿನ ಪುಡಿ ಸ್ವಲ್ಪ ಇಂಗು, ಉಪ್ಪು ಹಾಕಿಕೊಂಡು ಚೆನ್ನಾಗಿ ಕಲೆಸಿಕೊಳ್ಳಬೇಕು. ಆಮೇಲೆ ಸ್ವಲ್ಪ ಬಿಸಿ ನೀರು ಹಾಕಿಕೊಂಡು ಕಲೆಸಬೇಕು.ಆಮೇಲೆ ಸ್ವಲ್ಪ ಸ್ವಲ್ಪ ನೀರು ಹಾಕಿಕೊಂಡು ಗಟ್ಟಿಯಾಗಿ ನಾದಿಕೊಳ್ಳಬೇಕು. ಸಣ್ಣ ಸಣ್ಣ ಉಂಡೆ ತರಹ ಮಾಡಿಕೊಂಡು ಕೈಯಲ್ಲಿ ಸ್ವಲ್ಪ ತಟ್ಟಿಕೊಂಡು ಮೇಲೆ ಬರುವಂತೆ ಎಳ್ಳನ್ನು ಅದಕ್ಕೆ ಹಚ್ಚಿ ಕೊಂಡು ರೊಟ್ಟಿಯನ್ನು ನಿಧಾನವಾಗಿ ತೆಳುವಾಗಿ ತಟ್ಟಿಕೊಂಡು ಸಣ್ಣ ಉರಿಯಲ್ಲಿ ಎರಡೂ ಬದಿಯಲ್ಲಿ ಖಡಕ್ ಆಗುವಂತೆ ಬೇಯಿಸಿಕೊಳ್ಳಬೇಕು. ಕೆಲವರು ಲಟ್ಟಣಿಗೆಯಿಂದ ಲಟ್ಟಿಸುತ್ತಾರೆ. ಅದನ್ನು ಗಾಳಿಯಲ್ಲಿ ಅಗಲವಾಗಿ ಹಾಕಿ ಆರಲು ಬಿಡಬೇಕು. ಬೆಣ್ಣೆ ಹಚ್ಚಿಕೊಂಡು ತಿಂದರೆ ಬಲು ರುಚಿಯಾಗಿರುತ್ತದೆ

ಎಳ್ಳಿನ ಉಂಡೆ/ಎಳ್ಳು ಚಿಗಳಿ

ಬೇಕಾಗುವ ಸಾಮಗ್ರಿಗಳು: ಕೇವಲ ಎರಡು ಸಾಮಗ್ರಿಗಳನ್ನು ಉಪಯೋಗಿಸಿ ಮಾಡುವ ಖಾದ್ಯ ಎಳ್ಳು ಮತ್ತು ಬೆಲ್ಲ.

ಮಾಡುವ ವಿಧಾನ: ಸ್ವಚ್ಛ ಮಾಡಿದ ಎಳ್ಳನ್ನು ತೆಗೆದುಕೊಂಡು ಚಟಪಟ ಸಿಡಿಯುವಂತೆ ಹುರಿಯಬೇಕು. ಒಂದು ಲೋಟ ಎಳ್ಳನ್ನು ತೆಗೆದುಕೊಂಡರೆ ಅಷ್ಟೇ ಅಳತೆ ಬೆಲ್ಲ ತೆಗೆದುಕೊಂಡು ಪುಡಿಮಾಡಿ ಇಟ್ಟುಕೊಳ್ಳಬೇಕು. ಎಳ್ಳು ಪೂರ್ಣ ತಣ್ಣಗಾದ ನಂತರ ಅದನ್ನು ತರಿ ತರಿಯಾಗಿ ಮಿಕ್ಸಿ ಮಾಡಬೇಕು. ನುಣ್ಣಗೆ ಮಾಡಬಾರದು ಆಮೇಲೆ ಪುಡಿ ಮಾಡಿದ ಎಳ್ಳು ಮತ್ತು ಬೆಲ್ಲವನ್ನು ಸೇರಿಸಿ ಒಂದೇ ಒಂದು ಸುತ್ತು ಮಿಕ್ಸಿ ಮಾಡಬೇಕು. ಆಮೇಲೆ ಒಂದು ಪಾತ್ರೆಗೆ ಹಾಕಿಕೊಂಡು ಬೇಕಾದ ಗಾತ್ರದಲ್ಲಿ ಉಂಡೆ ಕಟ್ಟಬೇಕು.

ಹೆರಿಗೆ ನಂತರದ ಖಿನ್ನತೆ ಯಾಕೆ?

ಡಾ. ಅಲೋಕ ಕುಲಕರ್ಣಿ

ಕಾಳಜಿ

ಹೆರಿಗೆಯ ನಂತರದ ಖಿನ್ನತೆಯು ಹೊಸ ತಾಯಂದಿರಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ಮಾನಸಿಕ ಸ್ಥಿತಿ. ಇದರಿಂದ ಅಂಥ ಮಹಿಳೆಯರ ಬದುಕಿನಲ್ಲಿ ಸಾಕಷ್ಟು ಸವಾಲುಗಳು ಉಂಟಾಗಬಹುದು.

ಪ್ರಸವ ನಂತರದ ಮೊದಲ ಒಂದು ವಾರದಿಂದ ಒಂದು ತಿಂಗಳಿನ ಒಳಗೆ ಈ ಖಿನ್ನತೆ ಪ್ರಾರಂಭವಾಗುತ್ತದೆ. ಕೆಲವರಿಗೆ ಒಂದು ವರ್ಷದ ಒಳಗೆ ಕಾಣಿಸಿಕೊಳ್ಳಬಹುದಾಗಿದೆ. ಇದು 'ಬೇಬಿ ಬ್ಲೂಸ್' ಎಂದು ಕರೆಯಲಾಗುವ ಸಣ್ಣ ಪ್ರಮಾಣದ ಖಿನ್ನತೆಗಿಂತಲೂ ಭಿನ್ನವಾಗಿರಬಹುದು. ಹೆಚ್ಚು ತೀವ್ರವಾಗಿರುತ್ತದೆ. ದೀರ್ಘಕಾಲದ ಪರಿಣಾಮಗಳಿರುತ್ತವೆ.

ಲಕ್ಷಣಗಳು: ಖಿನ್ನತೆ, ಆತಂಕ, ನಿರಾಸಕ್ತಿ, ವಿನಾಕಾರಣ ಅತಿಯಾದ ಅಳು, ಮಗುವಿನ ಆರೈಕೆಯಲ್ಲಿ ಆಸಕ್ತಿ ಕಳೆದುಕೊಳ್ಳುವುದು, ಕಷ್ಟಪಡುವುದು, ನಿದ್ರಾಹೀನತೆ ಅಥವಾ ಅತಿಯಾದ ನಿದ್ದೆ, ಆತ್ಮಹತ್ಯೆಯ ಆಲೋಚನೆಗಳೂ ಸುಳಿಯಬಹುದು.

ಕಾರಣಗಳು:

ಹಾರ್ಮೋನ್ ವ್ಯತ್ಯಯ: ಗರ್ಭಾವಸ್ಥೆಯ ಸಮಯದಲ್ಲಿ ಮತ್ತು ಮಗು ಹುಟ್ಟಿದ ನಂತರ ಹಾರ್ಮೋನ್ ಮಟ್ಟಗಳಲ್ಲಿ ದೊಡ್ಡ ಬದಲಾವಣೆಗಳಾಗಿ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರಬಹುದು.

ಸಾಮಾಜಿಕ ಮತ್ತು ಆರ್ಥಿಕ ಒತ್ತಡ: ಹೊಸ ತಾಯಂದಿರಿಗೆ ಸಾಮಾಜಿಕ ಬೆಂಬಲದ ಕೊರತೆ, ಆರ್ಥಿಕ ಸಮಸ್ಯೆಗಳು ಅಥವಾ ಕೆಲಸದ ಒತ್ತಡಗಳಿಂದಲೂ ಹೀಗಾಗಬಹುದು.

ಮಾನಸಿಕ ಆರೋಗ್ಯದ ಇತಿಹಾಸ: ಹೆರಿಗೆ ಮೊದಲು ಮಾನಸಿಕ ಆರೋಗ್ಯದ ಸಮಸ್ಯೆಗಳಿದ್ದವರು ಈ ಖಿನ್ನತೆಗೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಚಿಕಿತ್ಸೆ ಹೀಗಿರಲಿದೆ

ಹೆರಿಗೆಯ ನಂತರದ ಖಿನ್ನತೆ ಚಿಕಿತ್ಸೆಗೆ ಹಲವಾರು ವಿಧಾನಗಳು ಮತ್ತು ತಂತ್ರಗಳನ್ನು ಬಳಸಬಹುದು. ಮನಃಶಾಸ್ತ್ರೀಯ ಚಿಕಿತ್ಸೆಯು ಈ ಬಗೆಯ ಖಿನ್ನತೆಯ ನಿವಾರಣೆಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ.

ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ (CBT): ಈ ಥೆರಪಿಯು ವ್ಯಕ್ತಿಯ ಚಿಂತನೆಗಳು, ಭಾವನೆಗಳು, ಮತ್ತು ವರ್ತನೆಗಳ ನಡುವಿನ ಸಂಬಂಧವನ್ನು ಪರಿಶೀಲಿಸುತ್ತದೆ. ನಕಾರಾತ್ಮಕ ಚಿಂತನೆಗಳನ್ನು ಗುರುತಿಸಿ, ಸಕಾರಾತ್ಮಕ ಚಿಂತನೆಗಳನ್ನು ಪ್ರೋತ್ಸಾಹಿಸುತ್ತದೆ. ಉದಾಹರಣೆಗೆ, ತಾಯಂದಿರು ತಮ್ಮ ಮಕ್ಕಳ ಆರೈಕೆಯಲ್ಲಿ ಕೊರತೆ ಇದೆ ಎಂಬ ಭಾವನೆಯನ್ನು ಬದಲಿಸಿ,ಅವರ ಸಣ್ಣ ಸಣ್ಣ ಸಾಧನೆಗಳನ್ನು ಮನಗಾಣುವಂತೆ ಮಾಡುತ್ತದೆ.



ಇಂಟರ್ಪರ್ಸನಲ್ ಥೆರಪಿ (IPT): ಈ ಥೆರಪಿಯು ಸಂಬಂಧಗಳ ಮೇಲೆ ಕೇಂದ್ರೀಕರಿಸಿದೆ. ಮತ್ತು ತಾಯಂದಿರು ತಮ್ಮ ಸುತ್ತಮುತ್ತಲಿನ ಜನರೊಂದಿಗಿನ ಬಾಂಧವ್ಯವನ್ನು ಸುಧಾರಿಸುತ್ತದೆ. ವೈಯಕ್ತಿಕ ಸಂಬಂಧಗಳಲ್ಲಿನ ಸಮಸ್ಯೆಗಳು, ಜೀವನದಲ್ಲಿನ ಬದಲಾವಣೆಗಳು, ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿ ಸಹಾಯ ಮಾಡುತ್ತದೆ.

ಆಂಟಿಡೆಪ್ರೆಸೆಂಟ್ಸ್: ಕೆಲವು ಮಾತ್ರೆಗಳು ಮೂಡ್ ಸ್ಥಿರಗೊಳಿಸುವಲ್ಲಿ ಸಹಾಯ ಮಾಡುತ್ತವೆ. ಆದರೆ, ಗರ್ಭಿಣಿಯಾಗಿರುವಾಗ ಅಥವಾ ಮಗುವಿಗೆ ಹಾಲುಣಿಸುವಾಗ ಔಷಧಿಗಳ ಬಳಕೆ ಬಗ್ಗೆ ವೈದ್ಯರೊಂದಿಗೆ ಚರ್ಚಿಸಿಯೇ ಮುಂದುವರಿಯಬೇಕು. ಕೆಲವು ಔಷಧಿಗಳು ಮಗುವಿನ ಮೇಲೆ ಪರಿಣಾಮ ಬೀರಬಹುದು.

ಹಾರ್ಮೋನ್ ಥೆರಪಿ: ಕೆಲವು ಸಂದರ್ಭಗಳಲ್ಲಿ, ಹಾರ್ಮೋನ್ ಮಟ್ಟಗಳ ಬದಲಾವಣೆಗಳು ಖಿನ್ನತೆಗೆ ಕಾರಣವಾಗಬಹುದು. ಈ ಸಂದರ್ಭದಲ್ಲಿ, ಎಸ್ಟ್ರೋಜೆನ್ ಥೆರಪಿಯನ್ನು ಪರಿಗಣಿಸಬಹುದು, ಆದರೆ ಇವೆರಡೂ ಚಿಕಿತ್ಸೆಗಳು ವೈದ್ಯರ ನಿಗಾದಲ್ಲಿಯೇ ಆಗಬೇಕಿರುವುದು ಅತಿಮುಖ್ಯವಾಗಿದೆ.

ಗ್ರೂಪ್ ಥೆರಪಿ: ಇದರಲ್ಲಿ ಸಮಾನ ಸಮಸ್ಯೆಗಳನ್ನು ಹೊಂದಿರುವ ವ್ಯಕ್ತಿಗಳು ಸೇರಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಒಬ್ಬರಿಗೊಬ್ಬರು ಬೆಂಬಲ ನೀಡುತ್ತಾರೆ. ಇದು ಸಾಮಾಜಿಕ ಸಂಪರ್ಕವನ್ನು ಹೆಚ್ಚಿಸುವುದು ಮತ್ತು ಒಂಟಿತನದ ಭಾವನೆಯನ್ನು ಕಡಿಮೆ ಮಾಡುವುದರಲ್ಲಿ ಸಹಾಯ ಮಾಡುತ್ತದೆ.

ಕೌನ್ಸೆಲಿಂಗ್ ಸೇವೆಗಳು: ಮಾನಸಿಕ ಆರೋಗ್ಯ ಸಮಾಲೋಚಕರು ಅಥವಾ ಸಾಮಾಜಿಕ ಕಾರ್ಯಕರ್ತರು ಖಿನ್ನತೆಗೆ ಒಳಗಾದ ವ್ಯಕ್ತಿಗೆ ಬೆಂಬಲ ಒದಗಿಸುತ್ತಾರೆ. ಇದು ಜೀವನದ ಸವಾಲುಗಳನ್ನು ಎದುರಿಸುವಲ್ಲಿ ಮತ್ತು ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡುತ್ತವೆ.

ಹೊಸ ತಾಯಂದಿರು ತಮ್ಮ ಮತ್ತು ತಮ್ಮ ಮಕ್ಕಳ ಜೀವನವನ್ನು ಸಂತೋಷದಿಂದ ಮತ್ತು ಆರೋಗ್ಯದಿಂದ ಇರುವಂತೆ ನೋಡಿಕೊಳ್ಳಬೇಕು. ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದ ಮುಖ್ಯವಾದ ಸಂಗತಿಯೆಂದರೆ, ಸಹಾಯ ಕೇಳುವುದು ಮತ್ತು ಸ್ವೀಕರಿಸುವುದು ತಪ್ಪಲ್ಲ. ಇಂಥ ಸಂದರ್ಭಗಳಲ್ಲಿ ಕುಟುಂಬದ ಸದಸ್ಯರು ಹೊಸ ತಾಯಿಗೆ ಬೆಂಬಲ ನೀಡಿದರೆ ತಾಯ್ತನವನ್ನು ಸಂಭ್ರಮಿಸಬಹುದು.

ಲೇಖಕರು ಮಿದುಳು ಹಾಗೂ ನರರೋಗ ತಜ್ಞರು, ಮಾನಸ ಮನೋವೈದ್ಯಕೀಯ ಸಂಸ್ಥೆ, ಹುಬ್ಬಳ್ಳಿ.

ಗರ್ಭಕೋಶದಲ್ಲಿ ಪೊರೆ ಬಂದರೆ

ಸ್ಪಂದನ



ಡಾ. ವೀಣಾ ಎಸ್. ಭಟ್

● ನನಗೆ 42ವರ್ಷಗಳು. 78 ಕೆ.ಜಿ. ಇದ್ದೇನೆ. 160 ಸೆಂಟಿ ಮೀಟರ್ ಎತ್ತರವಿದ್ದೇನೆ. ಮುಟ್ಟು ಅನಿಯಮಿತವಾಗಿದ್ದು, ಪ್ರತಿ ಬಾರಿ ರಕ್ತಸ್ರಾವ 8ರಿಂದ 10 ದಿನಗಳವರೆಗೆ ಇರುತ್ತದೆ. ಸ್ಕ್ಯಾನಿಂಗ್ ಮಾಡಿಸಿದ್ದೇನೆ. ಗರ್ಭಕೋಶ 16.ಮಿ.ಮೀ ಪೊರೆ ಬೆಳೆದಿದೆ. ಜತೆಗೆ ಫ್ಯಾಟಿಲಿವರ್ ಇದೆ ಎಂದು ತಿಳಿಸಿದ್ದಾರೆ. ಈ ನೋವು ತಡೆಯಲು ಆಗುತ್ತಿಲ್ಲ. ಗರ್ಭಕೋಶ ತೆಗೆಸಿಬಿಡಲೇ?

ಸ್ಕ್ಯಾನಿಂಗ್ ವರದಿಯ ಪ್ರಕಾರ ಗರ್ಭಕೋಶದ ಒಳಪದರವು (ಎಂಡೋಮೆಟ್ರಿಯಂ) ಸಹಜಕ್ಕಿಂತ ಹೆಚ್ಚು ದಪ್ಪವಾಗಿ ಬೆಳೆದಿರುವುದು ಕಂಡುಬರುತ್ತದೆ.

ಸಹಜ ಋತುಚಕ್ರದಲ್ಲಿ ಗರ್ಭಕೋಶದ ಒಳಪದರ ಹಾರ್ಮೋನುಗಳ ಪ್ರಭಾವದಿಂದ 4ರಿಂದ 9 ಮಿ.ಮೀನಷ್ಟು ಬೆಳೆಯುತ್ತದೆ. ಋತುಸ್ರಾವದಲ್ಲಿ ಈ ಒಳಪದರವು ಛಿದ್ರ ಛಿದ್ರವಾಗಿ ಹೊರಬರುವುದೇ ಮುಟ್ಟಿನಸ್ರಾವ ಎನಿಸಿಕೊಳ್ಳುತ್ತದೆ.

ನಿಮಗೆ ಈ ಗರ್ಭಕೋಶದ ಒಳಪದರವು (ಎಂಡೋಮೆಟ್ರಿಯಂ) 16ಮಿ.ಮೀ ಬೆಳೆದಿರುವುದರಿಂದ ಅದು ಹೊರಹೋಗುವಾಗ ದೀರ್ಘಾವಧಿಯವರೆಗೆ ಅತಿರಕ್ತಸ್ರಾವ ಉಂಟಾಗುತ್ತದೆ. ಈ ಕಾರಣಕ್ಕಾಗಿ ನೀವು ಗರ್ಭಕೋಶ ತೆಗೆಸುವ ಅಗತ್ಯವಿಲ್ಲ. ಬದಲಾಗಿ ತೂಕವನ್ನ ಕಡಿಮೆಮಾಡಿಕೊಳ್ಳಬೇಕು. ನಿಮ್ಮ ತೂಕ ನಿಮ್ಮ ಎತ್ತರಕ್ಕೆ ತಕ್ಕ ಹಾಗೆ 60ಕೆಜಿ ಒಳಗಿರಬೇಕಾಗಿತ್ತು, ಆದರೆ ನಿಮ್ಮ ತೂಕ 18 ಕೆ.ಜಿ. ಯಷ್ಟು ಹೆಚ್ಚಿದೆ. ತೂಕ ಹೆಚ್ಚಾದಾಗ, ಶೇಖರಣೆ ಯಾಗುವ ಹೆಚ್ಚಿನ ಕೊಬ್ಬಿನಾಂಶವೇ ನಮ್ಮ ಶರೀರದಲ್ಲಿಯೇ ಹೆಣ್ತನದ ಹಾರ್ಮೋನಾದ ಈಸ್ಟ್ರೋಜನ್ ಆಗಿ ಪರಿವರ್ತನೆಯಾಗುತ್ತದೆ.

ಇದರಿಂದ ಅದಕ್ಕೆ ತಕ್ಕನಾದ ಪ್ರೊಜೆಸ್ಟ್ರಾನ್ ಹಾರ್ಮೋನ್ ಸ್ರವಿಸದೇ ಅಸಮತೋಲನ ಉಂಟಾಗುತ್ತದೆ. ಗರ್ಭಕೋಶದ ಒಳಪದರ ಬೆಳೆದು ಅತಿ ರಕ್ತಸ್ರಾವ ಉಂಟಾಗುತ್ತಿದೆ. ಜತೆಗೆ ಕೆಟ್ಟಕೊಲೆಸ್ಟ್ರಾಲ್‌ನಿಂದ ಫ್ಯಾಟಿಲಿವರ್ ಉಂಟಾಗಿದೆ. ಎಲ್ಲದ್ದಕ್ಕೂ ಅತಿ ತೂಕವೇ ಕಾರಣ. ತಜ್ಞ ವೈದ್ಯರನ್ನು ಕಂಡು ಗರ್ಭಕೋಶದ ಒಳಪದರದ ಬಯಾಪ್ಸಿ ಮಾಡಿಸಿಕೊಳ್ಳಿ. ಹೆಚ್ಚಿನ ಸಂದರ್ಭದಲ್ಲಿ ಇಂತಹ ಸಮಸ್ಯೆಗೆ ಗರ್ಭಕೋಶ ತೆಗೆಯುವ ಅಗತ್ಯ ಬರುವುದೇ ಇಲ್ಲ. ಕಡಿಮೆ ಕೊಬ್ಬು, ಹೆಚ್ಚು ಪ್ರೋಟಿನ್‌ಯುಕ್ತ ಆಹಾರ ಸೇವಿಸಿ. ಹಸಿರು ಸೊಪ್ಪು, ತರಕಾರಿಗಳನ್ನು ಸೇವಿಸಿ. ನಿಯಮಿತ ವ್ಯಾಯಾಮ ರೂಢಿಸಿಕೊಳ್ಳಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಇಕ್ಕಟ್ಟಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

ಸಿಗದ ಅನುದಾನ: ಸಂಶೋಧನೆಗೆ ಗರ

• ಸಂತೋಷ ಈ. ಚಿನಗುಡಿ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯಕ್ಕೆ (ವಿಟಿಯು) ವಾರ್ಷಿಕವಾಗಿ ಅಂದಾಜು ₹200 ಕೋಟಿ ನೋಂದಣಿ ಶುಲ್ಕ ಸಂಗ್ರಹವಾಗುತ್ತದೆ. ಇದರಲ್ಲಿ ವೇತನಕ್ಕಾಗಿಯೇ ₹198 ಕೋಟಿ ಹೋಗುತ್ತದೆ. ಇದರಿಂದ ಸಂಶೋಧನೆ, ಕೌಶಲ ಅಭಿವೃದ್ಧಿ ಹಾಗೂ ಅನ್ವೇಷಣಾ ಪ್ರಕ್ರಿಯೆಗೆ ಹಿನ್ನಡೆ ಉಂಟಾಗಿದೆ.

‘ವಿಟಿಯು ಸ್ಥಾಪನೆಗೊಂಡು 26 ವರ್ಷಗಳಾಗಿವೆ. ವಿಶ್ವವಿದ್ಯಾಲಯವು ತನ್ನ ಆರ್ಥಿಕ ಮೂಲ ತಾನೇ ಸೃಷ್ಟಿಸಿಕೊಳ್ಳಬೇಕು (ಸೆಲ್ಫ್ ಫೈನಾನ್ಸ್) ಎಂಬ ನಿಯಮ ಇಲ್ಲ. ಯುಜಿಸಿಯಲ್ಲೂ ನಿಯಮಗಳಿಲ್ಲ. ಆದರೆ, ಎಂಜಿನಿಯರಿಂಗ್‌ನಂಥ ವೃತ್ತಿಪರ ಕೋರ್ಸ್‌ಗಳಿಗೆ ಶುಲ್ಕ ಹೆಚ್ಚು ಬರುವುದೆಂದು ಸರ್ಕಾರ ಅನುದಾನ ನೀಡುತ್ತಿಲ್ಲ’ ಎಂದು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ ‘ಪ್ರಜಾವಾಣಿ’ಗೆ ತಿಳಿಸಿದರು.

ವಿಟಿಯು ರಾಜ್ಯದ ಏಕಮಾತ್ರ ಸರ್ಕಾರಿ ತಾಂತ್ರಿಕ ವಿಶ್ವವಿದ್ಯಾಲಯವಾಗಿದ್ದು, ಇದರ ವ್ಯಾಪ್ತಿಯಲ್ಲಿ 3 ಲಕ್ಷ ವಿದ್ಯಾರ್ಥಿಗಳು ಇದ್ದಾರೆ. ವೇತನ ಅನುದಾನಕ್ಕೆ ವಿಟಿಯು ಸರ್ಕಾರಕ್ಕೆ ಪ್ರತಿ ವರ್ಷ ಮನವಿ ಸಲ್ಲಿಸುತ್ತಿದ್ದರೂ ಸ್ಪಂದನೆ ಸಿಕ್ಕಿಲ್ಲ. ಪದವಿ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಬರುವ ನೋಂದಣಿ ಶುಲ್ಕ ಮಾತ್ರ ಇದಕ್ಕೆ ಜೀವ ಸೆಲೆಯಾಗಿದೆ



ವೇತನ ಅನುದಾನ ನೀಡಿದರೆ ವಿಶ್ವವಿದ್ಯಾಲಯದ ದೊಡ್ಡ ಕೊರತೆ ನೀಗುತ್ತದೆ. ವಾರ್ಷಿಕ ಅನುದಾನವಾಗಿ ₹100 ಕೋಟಿ ನೀಡಿದರೂ ಸಾಕಷ್ಟು ಬೆಳವಣಿಗೆ ಸಾಧ್ಯವಾಗಲಿದೆ

ಪ್ರೊ.ಎಸ್.ವಿದ್ಯಾಶಂಕರ
ಕುಲಪತಿ, ವಿಟಿಯು

ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಹಿನ್ನಡೆ

ಬೆಳಗಾವಿಯ ಜ್ಞಾನ ಸಂಗಮ ಮುಖ್ಯ ಕ್ಯಾಂಪಸ್ ಸೇರಿ ಮೈಸೂರು, ಕಲಬುರಗಿಯಲ್ಲಿನ ಸ್ನಾತಕೋತ್ತರ ಕೇಂದ್ರ, ದಾವಣಗೆರೆ (ಯುಬಿಡಿಟಿ) ಹಾಗೂ ಚಿಂತಾಮಣಿಯ ಘಟಕ ಕಾಲೇಜು, ದಾಂಡೇಲಿ ಹಾಗೂ ತಳಕಲ್‌ನಲ್ಲಿರುವ ಕೌಶಲ ಅಭಿವೃದ್ಧಿ ಕೇಂದ್ರಗಳು ವಿಟಿಯು ವ್ಯಾಪ್ತಿಗೆ ಬರುತ್ತವೆ.

ವಿಟಿಯು ಮುಖ್ಯ ಕ್ಯಾಂಪಸ್‌ನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವೇತನಕ್ಕೆ ವಾರ್ಷಿಕ ₹80 ಕೋಟಿ ಬೇಕು. ದಾವಣಗೆರೆಯ ಯುಬಿಡಿಟಿ ಕಾಲೇಜು ಸಿಬ್ಬಂದಿಗೆ ₹48 ಕೋಟಿ, ಸ್ನಾತಕೋತ್ತರ, ಕೌಶಲ ಕೇಂದ್ರಗಳ ಸಿಬ್ಬಂದಿ ಮತ್ತು 1,600 ಹೊರಗುತ್ತಿಗೆ ನೌಕರರೂ ಸೇರಿ ₹70 ಕೋಟಿ ವಾರ್ಷಿಕವಾಗಿ ಬೇಕು.

‘ತಾಂತ್ರಿಕ ಕ್ಷೇತ್ರಕ್ಕೆ ಹಿನ್ನಡೆಯಾದರೆ, ಅದರ ಪರಿಣಾಮ ಕೃಷಿ, ಕೈಗಾರಿಕೆ ಮತ್ತು ಸಾಮಾಜಿಕ ಅಭಿವೃದ್ಧಿ ಮೇಲೆ ಆಗುತ್ತದೆ. ಆಧುನಿಕ ಜಗತ್ತಿಗೆ ಸೂಕ್ತ ಮಾನವ ಸಂಪನ್ಮೂಲ ಸಿದ್ಧಗೊಳಿಸುವ ಸಾಮರ್ಥ್ಯ ವಿಟಿಯುಗೆ ಇದೆ. ವರ್ಷಕ್ಕೆ ಎರಡು ಘಟಿಕೋತ್ಸವ ಮಾಡುತ್ತೇವೆ. ಪರೀಕ್ಷೆ ಮುಗಿದ ಮೂರು ಗಂಟೆಯಲ್ಲಿ ಫಲಿತಾಂಶ ನೀಡುತ್ತೇವೆ. ಇಂಥ ಸುಧಾರಣಾ ಕ್ರಮಗಳಿಗೆ ಆರ್ಥಿಕ ಮುಗ್ಗಟ್ಟು ಕಾಡುತ್ತಿದೆ’ ಎಂದು ವಿದ್ಯಾಶಂಕರ ತಿಳಿಸಿದರು.

ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆ: ಕೇಂದ್ರ ಸರ್ಕಾರದ ಆದೇಶ

ಅರ್ಜಿ ಜತೆಗೆ ದಾಖಲೆ ಸಲ್ಲಿಕೆ ಕಡ್ಡಾಯ

ನವದೆಹಲಿ (ಪಿಟಿಐ): ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ವಯಸ್ಸು ದೃಢಪಡಿಸುವ ಮತ್ತು ಮೀಸಲಾತಿ ಸಂಬಂಧಿತ ದಾಖಲೆಗಳನ್ನು ಸಲ್ಲಿಸುವುದನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ.

ಆನ್‌ಲೈನ್ ಅರ್ಜಿ ನಮೂನೆಯೊಂದಿಗೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲು ವಿಫಲವಾದರೆ ಅಭ್ಯರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ ಎಂದು ಜನವರಿ 22ರಂದು ಹೊರಡಿಸಿರುವ ‘ನಾಗರಿಕ ಸೇವಾ ಪರೀಕ್ಷೆಗಳ ನಿಯಮ-2025’ರಲ್ಲಿ ತಿಳಿಸಲಾಗಿದೆ.

ಈ ಮೊದಲು, ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಾಗಿತ್ತು.

ಮಾಜಿ ಪ್ರೊಬೇಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರು ನಕಲಿ ದಾಖಲೆಗಳನ್ನು ನೀಡಿದ್ದ ಆರೋಪ ಈಚೆಗೆ ಕೇಳಿಬಂದಿತ್ತು. ಇದರ ಬೆನ್ನಲ್ಲೇ ನಿಯಮಗಳಲ್ಲಿ ಬದಲಾವಣೆ ತರಲಾಗಿದೆ.

ಕೇಂದ್ರ ಲೋಕಸೇವಾ ಆಯೋಗವು ಈ ಸಾಲಿನ ನಾಗರಿಕ ಸೇವಾ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ್ದು, ಪೂರ್ವಭಾವಿ ಪರೀಕ್ಷೆಯು ಮೇ 25ರಂದು ನಡೆಯಲಿದೆ. ಐಎಎಸ್, ಐಎಫ್‌ಎಸ್ ಮತ್ತು ಐಪಿಎಸ್ ಸೇರಿದಂತೆ ಒಟ್ಟು 979 ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಲಾಗಿದೆ.

ಅಭ್ಯರ್ಥಿಗಳು http://upsconline.gov.in ವೆಬ್‌ಸೈಟ್ ಮೂಲಕ ಫೆಬ್ರುವರಿ 11, 2025ರ ಸಂಜೆ 6ರ ಒಳಗಾಗಿ ಅರ್ಜಿ ಸಲ್ಲಿಸಬಹುದು.

ಸಂಕ್ಷಿಪ್ತ ಸುದ್ದಿ


ಮುಡಾ: ಲೋಕಾಯುಕ್ತ ವರದಿ ಸಲ್ಲಿಕೆ ಇಂದು

ಮೈಸೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು ಶನಿವಾರ (ಜ.25) ನ್ಯಾಯಾಲಯಕ್ಕೆ ವರದಿ ಸಲ್ಲಿಸಲಿದ್ದು, ಇದು ಈವರೆಗಿನ ತನಿಖಾ ಪ್ರಗತಿ ವರದಿಯಷ್ಟೇ ಆಗಿದೆ ಎಂದು ತಿಳಿದು ಬಂದಿದೆ.

ತನಿಖೆಯು ಪೂರ್ಣಗೊಳ್ಳದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ಕೋರಲು ಲೋಕಾಯುಕ್ತ ಪೊಲೀಸರು ಮುಂದಾಗಿದ್ದಾರೆ ಎನ್ನಲಾಗಿದೆ.

ವರದಿಯನ್ನು ಇದೇ 27ರ ಒಳಗೆ ಸಲ್ಲಿಸಲು ನ್ಯಾಯಾಲಯ ಗಡುವು ನೀಡಿತ್ತು. ಜ.26 ಭಾನುವಾರವಾಗಿದ್ದು, ತನಿಖಾ ಪ್ರಗತಿ ವರದಿಯನ್ನು ಒಂದು ದಿನ ಮುಂಚಿತವಾಗಿ ಲೋಕಾಯುಕ್ತ ಎಸ್‌ಪಿ ಉದೇಶ್ ಅವರು ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಅಥಣಿ: ಬಾಣಂತಿ ಸಾವು



ಮುತ್ತವ್ವ

ಅಥಣಿ (ಬೆಳಗಾವಿ): ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಸೇರಿಯನ್ ಮೂಲಕ ಹೆರಿಗೆ ಆಗಿದ್ದ ಮುತ್ತವ್ವ ಗೊಳಸಂಗಿ (21) ಶುಕ್ರವಾರ ಸಾವಿಗೀಡಾಗಿದ್ದಾರೆ. ‘ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ’ ಎಂದು ಮುತ್ತವ್ವ ಪತಿ ಸಂತೋಷ ಗೊಳಸಂಗಿ ಆರೋಪಿಸಿದ್ದಾರೆ.

‘ಗುರುವಾರ ಬೆಳಿಗ್ಗೆ ಮುತ್ತವ್ವಗೆ ಆಸ್ಪತ್ರೆಗೆ ದಾಖಲಿಸಿದ್ದೆ. 11 ಗಂಟೆಗೆ ಹೆರಿಗೆ ಮಾಡಿಸಲು ಶಸ್ತ್ರ ಚಿಕಿತ್ಸಾ ಕೊಠಡಿಗೆ ಒಯ್ದಿದ್ದಾರೆ. ಸಂಜೆ 4.30ಕ್ಕೆ ಹೆರಿಗೆಯಾಗಿದೆ ಎಂದು ಹೇಳುತ್ತಾರೆ. ಹೆರಿಗೆ ನಂತರ ಮುತ್ತವ್ವ ಸಾಕಷ್ಟು ನೋವು ಅನುಭವಿಸುತ್ತಿದ್ದಳು. ವೈದ್ಯರು ಹಾಗೂ ನರ್ಸ್ ಗಮನಕ್ಕೆ ತಂದರೂ ಅವರು ನಿರ್ಲಕ್ಷ್ಯ ತೋರಿದ್ದಾರೆ’ ಎಂದು ಸಂತೋಷ ಗೊಳಸಂಗಿ ದೂರಿದ್ದಾರೆ.

‘ಇದು ಯಾವ ಕಾರಣಕ್ಕೆ ಆಗಿದೆ ಎನ್ನುವುದು ಮರಣೋತ್ತರ ಪರೀಕ್ಷಾ ವರದಿ ಬಂದ ಮೇಲೆ ಗೊತ್ತಾಗಲಿದೆ’ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಬಸನಗೌಡ ಕಾಗೆ ಹೇಳಿದರು.

ತೀರ್ಥಂಕರರ ಮೂರ್ತಿಗೆ ಮಹಾಮಸ್ತಕಾಭಿಷೇಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಸಮೀಪದ ವರೂರಿನ ನವಗ್ರಹ ತೀರ್ಥಕ್ಷೇತ್ರದಲ್ಲಿ ಆಯೋಜಿಸಿರುವ ಪಂಚಕಲ್ಯಾಣಕ ಪ್ರತಿಷ್ಠಾ ಮಹೋತ್ಸವದ ಪ್ರಯುಕ್ತ ಶುಕ್ರವಾರ ಪಾರ್ಶ್ವನಾಥರ 61 ಅಡಿ ಎತ್ತರದ ಬೃಹತ್ ಪ್ರತಿಮೆಯೊಂದಿಗೆ ಒಂಬತ್ತು ತೀರ್ಥಂಕರರ ಮೂರ್ತಿಗಳಿಗೆ ಮಹಾಮಸ್ತಕಾಭಿಷೇಕ ಜರುಗಿತು.

ಜಲ, ಎಳನೀರು, ಕ್ಷೀರ, ಗಂಧ ಸೇರಿ ವಿವಿಧ ಅಭಿಷೇಕಗಳು ಜೈನಮುನಿಗಳ ನೇತೃತ್ವದಲ್ಲಿ ನಡೆದವು. ಮಂತ್ರಘೋಷದ ಜೊತೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮೆರುಗು ನೀಡಿತು. ಉರಿಬಿಸಿಲನ್ನೂ ಲೆಕ್ಕಿಸದೆ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು, ಮಹಾಮಸ್ತಕಾಭಿಷೇಕ ಕಣ್ತುಂಬಿಕೊಂಡರು.

ಇದಕ್ಕೂ ಮೊದಲು ವೇದಿಕೆ ಮೇಲೆ ಪಾರ್ಶ್ವನಾಥರ ಮೂರ್ತಿಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮಹಾಮಸ್ತಕಾಭಿಷೇಕ ನೆರವೇರಿಸಿದರು. ‘ವಿಶ್ವಶಾಂತಿಗೆ ಜೈನ ಧರ್ಮದ ತತ್ವ ಪಾಲಿಸಬೇಕಿದೆ. ತೀರ್ಥಂಕರರ ತತ್ವ ಸಾರ್ವಕಾಲಿಕ’ ಎಂದರು. ಕುಂತುಸಾಗರ ಮಹಾರಾಜರು, ಗುಣಧರನಂದಿ ಮಹಾರಾಜರು, ಸುರೇಂದ್ರ ಕುಮಾರ್ ಸೇರಿ ಹಲವು ಆಚಾರ್ಯರು ಪಾಲ್ಗೊಂಡಿದ್ದರು.

ನಟ ದರ್ಶನ್, ಇತರರಿಗೆ ಜಾಮೀನು ರದ್ದುಪಡಿಸಲು 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಚಿತ್ರನಟ ದರ್ಶನ್‌ಗೆ ಕರ್ನಾಟಕ ಹೈಕೋರ್ಟ್ ನೀಡಿರುವ ಜಾಮೀನು ರದ್ದುಪಡಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು.

ಆದರೆ, ನಟ ದರ್ಶನ್, ಪವಿತ್ರಾ ಗೌಡ ಮತ್ತು ಇತರೆ ಆರೋಪಿಗಳಿಗೆ ಜಾಮೀನು ನೀಡಿರುವ ಹೈಕೋರ್ಟ್ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಸಲ್ಲಿಸಿರುವ ಮೇಲ್ಮನವಿಯನ್ನು ವಿಚಾರಣೆಗೆ ಪರಿಶೀಲಿಸಲು ನ್ಯಾಯಪೀಠವು ಸಮ್ಮತಿಸಿತು.



ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠವು, ಸರ್ಕಾರದ ಅರ್ಜಿ ಪುರಸ್ಕರಿಸಿ ನಟ ದರ್ಶನ್ ಮತ್ತು ಇತರ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿತು.

ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ ಅವರು, 'ಈ ಪ್ರಕರಣ ದಲ್ಲಿ ರೇಣುಕಸ್ವಾಮಿ ಅವರಿಗೆ ನೀಡಲಾದ ಕಿರುಕುಳ, ಹಿಂಸೆಯನ್ನು ಪರಿಗಣಿಸಬೇಕು. ಹಾಡಹಗಲೇ ಆತನನ್ನು ಕರೆತಂದು ಹಿಂಸಿಸಲಾಗಿತ್ತು' ಎಂಬ ಅಂಶವನ್ನು ಪೀಠದ ಗಮನಕ್ಕೆ ತಂದರು.

ಜಾಮೀನು ರದ್ದುಪಡಿಸಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿದೆ. ಹೀಗಾಗಿ, ಈ ಹಂತದಲ್ಲಿ ಜಾಮೀನಿಗೆ ತಡೆಯಾಜ್ಞೆ ನೀಡಲಾಗದು ಎಂದು ಪೀಠವು ಈ ಹಂತದಲ್ಲಿ ಸ್ಪಷ್ಟಪಡಿಸಿತು.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್, ಪವಿತ್ರಾ ಗೌಡ ಒಳಗೊಂಡು ಎಲ್ಲ 17 ಆರೋಪಿಗಳಿಗೂ ಜಾಮೀನು ದೊರೆತಿದ್ದು, ಇದರ ಆಧಾರದಲ್ಲಿ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ರಾಜ್ಯದ ಒಳ್ಳೆಯ ಹೆಸರು ಸರ್ವನಾಶ: ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಟೀಕೆ

ವಿಪಕ್ಷ ಅಸ್ಥಿರಗೊಳಿಸಲು 'ಕೈ' ಯತ್ನ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್‌ನವರು ಉತ್ತಮವಾಗಿ ಸರ್ಕಾರ ನಡೆಸಿ, ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಬದಲಿಗೆ ವಿರೋಧಪಕ್ಷಗಳನ್ನು ಅಸ್ಥಿರ-ಗೊಳಿಸುವ ಯತ್ನದಲ್ಲಿದ್ದಾರೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿ, 'ಒಳ್ಳೆಯ ಕೆಲಸಗಳನ್ನು ಮಾಡಲೆಂದು ಜನ ಆಶೀರ್ವದಿಸಿದರೆ, ಇವರು ಮಾಡುತ್ತಿರುವುದೇನು? ಆಡಳಿತದ ವಿಷಯದಲ್ಲಿ ರಾಜ್ಯಕ್ಕೆ ಇದ್ದ ಒಳ್ಳೆಯ ಹೆಸರನ್ನು ಸರ್ವನಾಶ ಮಾಡಲು ಹೊರಟಿದ್ದಾರೆ' ಎಂದು ಆರೋಪಿಸಿದರು.

'ಬಾಣಂತಿಯರು ಸಾಯುತ್ತಿದ್ದರೂ, ಕಳಪೆ ಔಷಧಿ ಪೂರೈಕೆಯಾಗುತ್ತಿದ್ದರೂ ಸರ್ಕಾರದಲ್ಲಿ ಕುರ್ಚಿಗಾಗಿ ಚರ್ಚೆ ಯಾಗುತ್ತಿದೆ. ಎಷ್ಟು ದಿನ ಅಧಿಕಾರ ದಲ್ಲಿರುತ್ತೀರೆಂಬುದಕ್ಕಿಂತ, ಜನರಿಗೆ ಏನು ಮಾಡಿದಿರೆಂಬುದು ಮುಖ್ಯ.



ಇತರ ರಾಜ್ಯದವರು ದಾವೂಸ್‌ಗೆ ಹೋಗಿ ಬಂಡವಾಳ ತರುತ್ತಿದ್ದಾರೆ. ಇಲ್ಲಿನ ಸರ್ಕಾರ ಏನು ಮಾಡುತ್ತಿದೆ?
ಎಚ್‌.ಡಿ. ಕುಮಾರಸ್ವಾಮಿ
ಕೇಂದ್ರ ಸಚಿವ

ಮುಂದೆಯೂ ನೀವೇ ಅಧಿಕಾರಕ್ಕೆ ಬನ್ನಿ. ಆದರೆ, ಜನರ ಸಾಲದ ಹೊರೆಯನ್ನು ತಗ್ಗಿಸಿ. ಬಡವರನ್ನು ಆರ್ಥಿಕವಾಗಿ ಬೆಳೆಸುತ್ತೇವೆ ಎನ್ನುತ್ತೀರಲ್ಲಾ, ಇದೇನಾ ಅದು' ಎಂದು ಕೇಳಿದರು.

'ಬಿ.ಶ್ರೀರಾಮುಲು ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಹೋಗುತ್ತಾರೆನ್ನುವುದು ಊಹೆಯಷ್ಟೆ. ಜನಾರ್ದನ ರೆಡ್ಡಿ–ಶ್ರೀರಾಮುಲು ಒಂದು ಕಾಲದಲ್ಲಿ ಆತ್ಮೀಯ ಸ್ನೇಹಿತರು; ಅಣ್ಣ-ತಮ್ಮನಂತೆ ಚೆನ್ನಾಗಿದ್ದವರು. ಅವರ ಜಗಳವನ್ನು ಬಿಜೆಪಿಯ ನಾಯಕರೇ ಬಿಡಿಸಬೇಕು' ಎಂದು ಪ್ರತಿಕ್ರಿಯಿಸಿದರು.

'ನನ್ನ ಮೇಲೆ ಕ್ರಮ ಕೈಗೊಳ್ಳಲು ದಮ್ ಬೇಕು' ಎಂಬ ಶಾಸಕ ಜಿ.ಟಿ. ದೇವೇಗೌಡ ಹೇಳಿಕೆಗೆ ಪ್ರತಿಕ್ರಿಯಿಸಿ, 'ಅವರು ದೊಡ್ಡವರಿದ್ದಾರೆ. ಪಕ್ಷದಲ್ಲಿ ತೀರ್ಮಾನಿಸಿ, ನಮ್ಮ ಶಕ್ತಿ ಏನೆಂಬುದನ್ನು ತೋರಿಸುತ್ತೇವೆ' ಎಂದರು.

ಅಧ್ಯಕ್ಷ ಹುದ್ದೆ ವರಿಷ್ಠರ ನಿರ್ಧಾರ: ನಿರಾಣಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯಲ್ಲಿ ಮುಂದುವರೆಸುವ ಅಥವಾ ಮುಂದುವರೆಸದೇ ಇರುವ ನಿರ್ಧಾರ ವರಿಷ್ಠರಿಗೆ ಬಿಟ್ಟಿದ್ದಾಗಿದೆ. ಆ ಹುದ್ದೆಯ ಬಗ್ಗೆ ಪಕ್ಷದ ಎಲ್ಲ ಶಾಸಕರಿಗೂ ಆಸೆ ಇದೆ' ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನಮ್ಮ ಪಕ್ಷದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಜಿಲ್ಲಾ ಅಧ್ಯಕ್ಷರಿಂದ ರಾಷ್ಟ್ರೀಯ ಅಧ್ಯಕ್ಷರವರೆಗೂ ಚುನಾವಣೆ ನಡೆಯುತ್ತದೆ. ಈಗ ಸಂಘಟನಾ ಪರ್ವ ನಡೆಯುತ್ತಿದ್ದು, ಎಲ್ಲವೂ ಬದಲಾಗಲಿದೆ. ವಿಜಯೇಂದ್ರ ಅವರನ್ನು ಮಧ್ಯಂತರದಲ್ಲಿ ರಾಜ್ಯ ಘಟಕದ ಅಧ್ಯಕ್ಷನಾಗಿ ಆಯ್ಕೆ ಮಾಡಲಾಗಿತ್ತು. ಅವರ ಕಾರ್ಯಕ್ಷಮತೆಯನ್ನು ನೋಡಿ ವರಿಷ್ಠರು ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದರು.

ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯ ಬಗ್ಗೆ ನಿಮಗೂ ಆಸೆ ಇದೆಯೇ ಎಂಬ ಪ್ರಶ್ನೆಗೆ, 'ನಾವು ಈ ಹಿಂದೆ 100ಕ್ಕೂ ಹೆಚ್ಚು ಶಾಸಕರಿದ್ದೆವು. ಈಗ 60ಕ್ಕೂ ಹೆಚ್ಚು ಮಂದಿ ಇದ್ದೇವೆ. ಎಲ್ಲರಿಗೂ ಆ ಹುದ್ದೆಯ ಬಗ್ಗೆ ಆಸೆ ಇರುತ್ತದೆ. ಅದರಲ್ಲಿ ತಪ್ಪಿಲ್ಲ. ಆದರೆ ನಮ್ಮ ಆಸೆಗಿಂತ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ, ಅಮಿತ್ ಶಾ ಮತ್ತು ನರೇಂದ್ರ ಮೋದಿ ಅವರ ನಿರ್ಧಾರವೇ ಅಂತಿಮ' ಎಂದು ಉತ್ತರಿಸಿದರು.

'ಪಕ್ಷದಲ್ಲಿನ ಅಸಮಾಧಾನ ಢಾಳಾಗಿ ಕಾಣುತ್ತಿದೆ. ಆದರೆ ಈ ಎಲ್ಲವನ್ನೂ ಗಮನಿಸಿರುವ ವರಿಷ್ಠರು ಕೆಲವರೊಂದಿಗೆ ಫೋನ್ ಮೂಲಕ ಮಾತನಾಡಿದ್ದಾರೆ. ಕೆಲವರನ್ನು ಕರೆಸಿಕೊಂಡು ಮಾಹಿತಿ ಪಡೆದಿದ್ದಾರೆ. ಇನ್ನು 8-10 ದಿನಗಳಲ್ಲಿ ಎಲ್ಲವೂ ಸರಿಯಾಗಲಿದೆ. ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ಎಲ್ಲರೂ ಒಟ್ಟಾಗಿ ಹೋರಾಟ ನಡೆಸಲಿದ್ದೇವೆ' ಎಂದರು.

'ಅರಣ್ಯದಲ್ಲಿ ಚಿತ್ರೀಕರಣ ಅನುಮತಿ ಕಡ್ಡಾಯ'

ಬೆಂಗಳೂರು: ಅರಣ್ಯ ವ್ಯಾಪ್ತಿಯಲ್ಲಿ ಸಿನಿಮಾ, ಧಾರಾವಾಹಿ ಹಾಗೂ ಸಾಕ್ಷ್ಯ-ಚಿತ್ರಗಳ ಚಿತ್ರೀಕರಣಕ್ಕೆ ಸರ್ಕಾರದ ಅನುಮತಿ ಕಡ್ಡಾಯಗೊಳಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಈ ಕುರಿತು ಆದೇಶ ಹೊರಡಿಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸಚಿವರು ಸೂಚಿಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾ-ರಿಗಳು ನಿಗದಿತ ಶುಲ್ಕ ಕಟ್ಟಿಸಿಕೊಂಡು ಚಿತ್ರೀಕರಣಕ್ಕೆ ಅನುಮತಿ ನೀಡುತ್ತಿದ್ದಾರೆ. ಸ್ಥಳೀಯ ಮಟ್ಟದಲ್ಲೂ ಅಧಿಕಾರಿಗಳು ಅನುಮತಿ ನೀಡುತ್ತಿರುವುದರಿಂದ ಅರಣ್ಯ ಪ್ರದೇಶದ ಗೌಪ್ಯ ಮಾಹಿತಿ ಹೊರ ಜಗತ್ತಿಗೆ ಲಭಿಸುವ ಸಂಭವ ಇರುತ್ತದೆ. ಇದು ಪರಿಸರ ಹಾಗೂ ಜೀವ ವೈವಿಧ್ಯಕ್ಕೂ ಧಕ್ಕೆ ತರುತ್ತದೆ ಎಂದು ಅವರು ಟಿಪ್ಪಣಿಯಲ್ಲಿ ಪ್ರತಿಪಾದಿಸಿದ್ದಾರೆ.

ಮಾದಿಗ ಗುಂಪಿಗೆ ತ್ರಿಮತಸ್ಥ ಜಾತಿಗಳ ಸೇರಿಸದಿರಲು ಆಯೋಗಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿಮತಸ್ಥ ಚರ್ಮಕಾರ ವ್ಯಾಪ್ತಿಯಲ್ಲಿ ಬರುವ 18 ಜಾತಿಗಳನ್ನು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗವು ಮಾದಿಗ ಗುಂಪಿನಲ್ಲಿ ಸೇರಿಸಿರುವುದು ಅವೈಜ್ಞಾನಿಕವಾಗಿದೆ ಎಂದು ತ್ರಿಮತಸ್ಥ ಶ್ರೀಗುರು ರವಿದಾಸ ಪರಿಷತ್ ತಿಳಿಸಿದೆ.

ಪರಿಷತ್‌ನ ಪ್ರಧಾನ ಸಂಚಾಲಕ ಬಿ. ಗುರುರಾಜ್ ನೇತೃತ್ವದ ನಿಯೋಗವು, ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗಕ್ಕೆ ಈ ಕುರಿತು ಮನವಿ ಸಲ್ಲಿಸಿದೆ. 'ಸದಾಶಿವ ಆಯೋಗದ ವರದಿ ಹಾಗೂ ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಂಪುಟ ಉಪ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ತ್ರಿಮತಸ್ಥ ಚರ್ಮಕಾರ ವ್ಯಾಪ್ತಿಯಲ್ಲಿರುವ ಜಾತಿಗಳನ್ನು ಮಾದಿಗ ಗುಂಪಿಗೆ ಸೇರಿಸಿದರೆ ಈ ಸಮುದಾಯಗಳಿಗೆ ಅನ್ಯಾಯವಾಗು-ತ್ತದೆ' ಎಂದು ಪರಿಷತ್ ಆಕ್ಷೇಪಿಸಿದೆ.

ಮುಖ್ಯಾಂಶಗಳು
- ಡೋಹರ ಜಾತಿಯನ್ನು ತ್ರಿಮತಸ್ಥ ಚರ್ಮಕಾರರ ಗುಂಪಿಗೆ ಮತ್ತೆ ಸೇರಿಸಿ
- ತ್ರಿಮಸ್ಥ ಚರ್ಮಕಾರರು ಮಾದಿಗರೂ ಅಲ್ಲ, ಎಡಗೈಯೂ ಅಲ್ಲ: ಆರೋಪ

ತ್ರಿಮತಸ್ಥ ಚರ್ಮಕಾರ ವ್ಯಾಪ್ತಿಯಲ್ಲಿ ಬರುವ ಚಮಾರ್, ಚಾಂಬರ್, ಚಮಾಡಿಯ, ಘೋರ್, ಡೋಹರ, ಹರಳಯ್ಯ, ಮಚಿಗಾರ್, ಮೋಚಿಗಾರ್, ಮೋಚಿ, ಮುಚ್ಚಿಗ, ತೆಲುಗುಮೋಚಿ, ಕಾಮಾಟಿ ಮೋಚಿ, ರೋಹಿದಾಸ್, ಕಕ್ಕಯ್ಯ, ಕಂಕಯ್ಯ, ಸಮಗಾರ, ಚಮಗಾರ್, ಸಮಗಾರ್ ಜಾತಿಗಳನ್ನು ಸದಾಶಿವ ಆಯೋಗವು ಬಲಾಢ್ಯ ಮಾದಿಗ ಗುಂಪಿಗೆ ಸೇರಿಸಿರುವುದು ಅವೈಜ್ಞಾನಿಕ ಎಂದು ದೂರಿದೆ.

ತ್ರಿಮಸ್ಥ ಚರ್ಮಕಾರರು ಮಾದಿಗರೂ ಅಲ್ಲ, ಎಡಗೈಯೂ ಅಲ್ಲ. ಮಾದಿಗ ಸಂಬಂಧಿತ ಜಾತಿಗಳೂ ಅಲ್ಲ. ಆದರೆ, ತ್ರಿಮತಸ್ಥರ ಪಾಲಿನ ಉನ್ನತ ಉದ್ಯೋಗ, ಶಿಕ್ಷಣ ಹಾಗೂ ರಾಜಕೀಯ ಅವಕಾಶಗಳನ್ನು ತಪ್ಪಿಸಿ, ಮಾದಿಗ ಸಮುದಾಯದವರೇ ಪಡೆದುಕೊಂಡಿ-ದ್ದಾರೆ ಎಂದು ಆರೋಪಿಸಿದೆ.

'ಮಾಧುಸ್ವಾಮಿ ನೇತೃತ್ವದ ಸಂಪುಟ ಉಪ ಸಮಿತಿಯು ಡೋಹರ ಜಾತಿಯನ್ನು ತ್ರಿಮತಸ್ಥ ಚರ್ಮಕಾರರಿಂದ ಬೇರ್ಪಡಿಸಿ ಅಲೆಮಾರಿ ಪರಿಶಿಷ್ಟ ಜಾತಿ ಗುಂಪಿಗೆ ಸೇರಿಸಿ ಅನ್ಯಾಯ ಮಾಡಿದೆ. ಡೋಹರ ಜಾತಿಯನ್ನು ಮರಳಿ ತ್ರಿಮತಸ್ಥ ಚರ್ಮಕಾರರ ಗುಂಪಿಗೆ ಸೇರಿಸಬೇಕು' ಎಂದು ಆಗ್ರಹಿಸಿದೆ.

'ಶ್ರೀರಾಮುಲುಗೆ ಹಿಂದೆ ಆಹ್ವಾನ ನೀಡಿದ್ದೆ'

ಒಂದನೇ ಪುಟದಿಂದ...

ಶ್ರೀರಾಮುಲು ಈಗ ಕಾಂಗ್ರೆಸ್‌ಗೆ ಬರಲು ಒಪ್ಪಿದರೆ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಇದರ ಬಗ್ಗೆ ನಾನೇಕೆ ಸುಮ್ಮನೆ ಯೋಚನೆ ಮಾಡಲಿ' ಎಂದರು. ಶ್ರೀರಾಮುಲು ಅವರು ಪಕ್ಷಕ್ಕೆ ಬಂದರೆ ಸ್ವಾಗತ ಎಂದು ಕೆಲವು ಸಚಿವರು ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ, 'ನನ್ನ ಮುಂದೆ ಈ ವಿಚಾರ ಪ್ರಸ್ತಾಪವಾಗಲಿ. ಆಗ ಚರ್ಚೆ ಮಾಡೋಣ' ಎಂದು ಶಿವಕುಮಾರ್ ಪ್ರತಿಕ್ರಿಯಿಸಿದರು.



ಶ್ರೀರಾಮುಲು ನಮ್ಮ ಸಮಾಜದ ಪ್ರಶ್ನಾತೀತ ನಾಯಕ. ಅವರಿಗೆ ನೋವಾಗಿದೆ. ಹಿರಿಯ ನಾಯಕರಿಗೆ ಯಾರೋ ತಪ್ಪು ಸಂದೇಶ ನೀಡಿದ್ದರಿಂದ ಹಾಗಾಗಿದೆ. ಅವರು ಬಿಜೆಪಿ ತೊರೆಯುವುದಿಲ್ಲ
ರಾಜುಗೌಡ, ಬಿಜೆಪಿ ನಾಯಕ

'ಕೈ' ನಾಯಕರ ಪ್ರೀತಿಗೆ ಋಣಿ

ಒಂದನೇ ಪುಟದಿಂದ...

'ದೂರವಾಣಿ ಕರೆ ಮಾಡಿದ ಜೆ.ಪಿ ನಡ್ಡಾ ಅವರಿಗೆ ಈ ಬೆಳವಣಿಗೆಗೆ ಕಾರಣವನ್ನು ಹೇಳಿ, ರಾಧಾಮೋಹನ್ ದಾಸ್ ವಿಷಯವನ್ನೂ ತಿಳಿಸಿದ್ದೇನೆ. ಎಲ್ಲವನ್ನೂ ಕೇಳಿಸಿಕೊಂಡ ಅವರು, 'ನಿಮ್ಮ ಪರ ನಾವಿದ್ದೇವೆ. ಯೋಚಿಸಬೇಡಿ. ದೆಹಲಿಗೆ ಯಾವಾಗ ಬೇಕಾದರೂ ಬನ್ನಿ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಅವರಿಗೂ ವಿಷಯ ತಿಳಿಸಿದ್ದೇವೆ ಎಂದರು. ದೆಹಲಿಗೆ ಬಂದು ಭೇಟಿಯಾಗುವುದಾಗಿ ತಿಳಿಸಿದ್ದೇನೆ' ಎಂದರು.

ಮುಂದಿನ ದಿನಗಳಲ್ಲಿ ದೆಹಲಿಗೆ ಹೋಗುತ್ತೇನೆ. ನನ್ನ ಬೇಡಿಕೆ ಇಷ್ಟೇ. ನನ್ನ ಕೆಲಸಕ್ಕೆ ಕೂಲಿ ಕೊಡಿ. ಸ್ವಾಭಿಮಾನಕ್ಕೆ ಧಕ್ಕೆ ತರುವ ಕೆಲಸ ಬೇಡ. ಅದನ್ನೇ ಎಲ್ಲರಿಗೂ ಹೇಳಿದ್ದೇನೆ
ಬಿ.ಶ್ರೀರಾಮುಲು, ಮಾಜಿ ಸಚಿವ

'ನೀವು ಪಕ್ಷಕ್ಕೆ ದುಡಿದವರು. ನಿಮಗೆ ನೋವಾಗಿದೆ ಎಂಬುದು ನಮಗೆ ಗೊತ್ತು. ರಾಧಾ ಮೋಹನ್ ದಾಸ್ ಅವರು ತಮ್ಮ ಮಾತು ಹಿಂಪಡೆಯುವುದಾಗಿ ಹೇಳಿದ್ದಾರೆ. ಯಾವುದೇ ಆತುರದ ನಿರ್ಧಾರ ತೆಗೆದುಕೊಳ್ಳಬೇಡಿ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಲಹೆ ನೀಡಿದ್ದಾರೆ' ಎಂದರು.

'ಸ್ವಾಭಿಮಾನಕ್ಕೆ ಧಕ್ಕೆಯಾದಾಗ ನನ್ನದೇ ಪಕ್ಷ ಕಟ್ಟಿದ್ದೆ. ಪ್ರಧಾನಿ ನರೇಂದ್ರ ಮೋದಿಯವರಿಗಾಗಿ ಅದನ್ನು ಬಿಜೆಪಿಯಲ್ಲಿ ವಿಲೀನ ಮಾಡಿದ್ದೇನೆ. ನನ್ನ ರಾಜಕೀಯ ಜೀವನದ ಒಂದು ಅಧ್ಯಾಯ ಮುಗಿದಿದೆ. ಸದ್ಯ ಇಲ್ಲಿದ್ದೇನೆ. ಇಲ್ಲೇ ಇರುತ್ತೇನೆ' ಎಂದರು.

'2018ರ ಚುನಾವಣೆ ವೇಳೆ ಶ್ರೀರಾಮುಲು ಉಪ ಮುಖ್ಯಮಂತ್ರಿ ಆಗಬೇಕಿತ್ತು ಎಂಬ ಮಾತಿತ್ತು. ನಂತರದ ದಿನಗಳಲ್ಲಿ ಅದಕ್ಕಿಂತಲೂ ಹೆಚ್ಚಿನ ಗೌರವ ಸಿಕ್ಕಿದೆ. ಅದನ್ನು ಕಳೆದುಕೊಳ್ಳುವುದಿಲ್ಲ. ಯಾವುದೇ ಆಹ್ವಾನ ಬಂದರೂ ಎಲ್ಲರೊಂದಿಗೆ ಚರ್ಚಿಸುತ್ತೇನೆ. ಸದ್ಯ ಯಾವುದೇ ನಿರ್ಧಾರ ಇಲ್ಲ. ಕಾರ್ಯಕರ್ತನಾಗಿರುತ್ತೇನೆ' ಎಂದರು.

ವಕ್ಫ್ ಜೆಪಿಸಿ ಸಭೆ: ಸಂಸದರ ಗದ್ದಲ

ಒಂದನೇ ಪುಟದಿಂದ...

ಗದ್ದಲ: ಸಭೆ ಆರಂಭವಾದಾಗ, ಸಮಿತಿಯಲ್ಲಿರುವ ವಿರೋಧ ಪಕ್ಷಗಳ ಸದಸ್ಯರು ಅಧ್ಯಕ್ಷ ಪಾಲ್ ಅವರ ಕಾರ್ಯವೈಖರಿಯನ್ನು ಟೀಕಿಸಿದರು.

'ಜಗದಂಬಿಕಾ ಪಾಲ್ ಅವರು ಕೇಂದ್ರ ಸರ್ಕಾರದ ಆಣತಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಮಿತಿಯ ಕಲಾಪಗಳನ್ನು ಪ್ರಹಸನದ ಮಟ್ಟಕ್ಕೆ ಇಳಿಸಿದ್ದು, ಪ್ರತಿಪಕ್ಷಗಳ ಸದಸ್ಯರನ್ನು ಕಡೆಗಣಿಸುತ್ತಿದ್ದಾರೆ. ತಮ್ಮ ಮನಸ್ಸಿಗೆ ಬಂದಂತೆ ಸಭೆಯ ಕಾರ್ಯಸೂಚಿಯನ್ನು ಬದಲಿಸುತ್ತಾರೆ' ಎಂದು ವಿಪಕ್ಷಗಳ ಸದಸ್ಯರು ಆರೋಪಿಸಿದರು.

ಈ ಆರೋಪಗಳನ್ನು ತಳ್ಳಿ ಹಾಕಿದ ಪಾಲ್, ಸಭೆಗೆ ಅಡ್ಡಿಪಡಿಸುವ ಉದ್ದೇಶದಿಂದ ವಿರೋಧ ಪಕ್ಷಗಳ ಸದಸ್ಯರು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದರು. ಸಭೆಯನ್ನು ಕೆಲ ಕಾಲ ಮುಂದೂಡಿದರು.

ಸಭೆ ಮತ್ತೆ ಆರಂಭವಾದಾಗ, ಪಾಲ್ ಹೇಳಿಕೆ ಖಂಡಿಸಿ ವಿಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದರು.

'ಟಿಎಂಸಿ ನಾಯಕ ಕಲ್ಯಾಣ ಬ್ಯಾನರ್ಜಿ ನನ್ನ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಟೀಕಿಸಿದ ಪಾಲ್, 'ನಾನು ಕಲಾಪವನ್ನು ಹಳಿಗೆ ತರಲು ಪ್ರಯತ್ನಿಸಿದೆ. ಎರಡು ಬಾರಿ ಮುಂದೂಡಿದೆ. ಆದರೆ, ನನ್ನ ಪ್ರಯತ್ನಗಳೆಲ್ಲಾ ವ್ಯರ್ಥವಾದವು' ಎಂದರು.

ಆಗ, ಬಿಜೆಪಿ ಸದಸ್ಯ ನಿಶಿಕಾಂತ್ ದುಬೆ ಅವರು, ಗದ್ದಲ ಎಬ್ಬಿಸುತ್ತಿರುವ ವಿಪಕ್ಷಗಳ ಸದಸ್ಯರನ್ನು ದಿನದ ಮಟ್ಟಿಗೆ ಅಮಾನತುಗೊಳಿಸಬೇಕು ಎಂಬ ನಿರ್ಣಯ ಮಂಡಿಸಿದಾಗ, ಸಮಿತಿ ಅದಕ್ಕೆ ಅನುಮೋದನೆ ನೀಡಿತು.

ಪಾಲ್ ದೂರು: ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಗದಂಬಿಕಾ ಪಾಲ್, 'ಸಭೆಯಲ್ಲಿ ಅನಗತ್ಯವಾಗಿ ಗದ್ದಲ ಉಂಟು ಮಾಡಿದ ಕಲ್ಯಾಣ ಬ್ಯಾನರ್ಜಿ ವರ್ತನೆಯಿಂದ ನನಗೆ ನೋವಾಗಿದೆ' ಎಂದರು.

'ಕಲ್ಯಾಣ ಬ್ಯಾನರ್ಜಿ ಇಂದು ಎಲ್ಲ ಮಿತಿಗಳನ್ನು ಮೀರಿದ್ದು, ಸಭೆಯ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ' ಎಂದರು.

ಪಾಲ್ ಹೇಳಿಕೆಗೆ ಪ್ರತಿಕ್ರಿಯಿಸಿದ ಕಲ್ಯಾಣ ಬ್ಯಾನರ್ಜಿ, 'ಪಾಲ್ ಅವರು ವಿಪಕ್ಷಗಳ ಸಂಸದರನ್ನು ತಮ್ಮ ಮನೆಗೆಲಸದವರಂತೆ ನೋಡುತ್ತಾರೆ' ಎಂದರು.

ಜ.29ಕ್ಕೆ ಅನುಮೋದನೆ ಸಾಧ್ಯತೆ: ಸಮಿತಿಯು ಜ.29ರಂದು ಈ ವಿಚಾರ ಕುರಿತ ವರದಿಗೆ ಅನುಮೋದನೆ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

12 ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: 12 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ವರ್ಗಾವಣೆ ಆದವರು: ಎನ್. ಶಿವಶಂಕರ್-ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ. ಮಹಾಂತೇಶ ಬೀಳಗಿ-ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಖನಿಜ ನಿಗಮ. ಟಿ.ಕೆ.ಸ್ವರೂಪ-ನಿರ್ದೇಶಕ (ಇ-ಆಡಳಿತ), ಆರ್‌ಡಿಪಿಆರ್.

ಕುಮಾರ- ಹೆಚ್ಚುವರಿ ಪ್ರಭಾರ, ಸಿಇಒ, ಜಿಲ್ಲಾ ಪಂಚಾಯತಿ, ಮಂಡ್ಯ. ಜಯವಿಭವಸ್ವಾಮಿ-ಆಯುಕ್ತ, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ. ಕೆ.ಎನ್.ಅನುರಾಧ- ಹೆಚ್ಚುವರಿ ಪ್ರಭಾರ, ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಶೇಖ್ ತನ್ವೀರ್ ಆಸಿಫ್-ಆಯುಕ್ತ, ಮೈಸೂರು ನಗರ ಪಾಲಿಕೆ. ದಿಗ್ವಿಜಯ್ ಬೋಡ್ಕೆ-ನಿರ್ದೇಶಕ (ಐ.ಟಿ), ಕೆಎಸ್‌ಆರ್‌ಟಿಸಿ. ಭುವನೇಶ್ ದೇವಿದಾಸ್ ಪಾಟೀಲ-ಸಿಇಒ, ಜಿಲ್ಲಾ ಪಂಚಾಯತಿ, ಧಾರವಾಡ. ಅನ್ಮೋಲ್ ಜೈನ್-ಸಿಇಒ, ಜಿಲ್ಲಾ ಪಂಚಾಯತಿ, ರಾಮನಗರ. ಅವಿನಾಶ್ ಸಂಜೀವನ್ ಶಿಂಧೆ-ಆಯುಕ್ತ, ಕಲಬುರಗಿ ನಗರ ಪಾಲಿಕೆ. ಜುಬಿನ್ ಮೊಹಪಾತ್ರ-ಆಯುಕ್ತ, ರಾಯಚೂರು ನಗರ ಪಾಲಿಕೆ.

ಕೆಐಎಎಲ್‌ಗೆ ಎಸಿಐ ಮಾನ್ಯತೆ

ದೇವನಹಳ್ಳಿ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಂಡಳಿ (ಎಸಿಐ) ನೀಡುವ ಪ್ರಯಾಣಿಕರಿಗೆ ಒದಗಿಸುವ ಸೌಲಭ್ಯಗಳ ಉನ್ನೀಕರಣದ ಮಾನ್ಯತೆಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪಾತ್ರವಾಗಿದೆ. ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಇದೆಲ್ಲವನ್ನು ಪರಿಗಣಿಸಿ ಮಾನ್ಯತೆ ನೀಡಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ: ವಿದ್ಯಾರ್ಥಿಗಳ ಕೊರತೆ

ಕೆಲ ಕೋರ್ಸ್ ತಾತ್ಕಾಲಿಕ ಸ್ಥಗಿತ

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯ ಕೆಲ ಕೋರ್ಸ್‌ಗಳನ್ನು ವಿದ್ಯಾರ್ಥಿಗಳ ಕೊರತೆ ಕಾರಣಕ್ಕೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ವಿದ್ಯುನ್ಮಾನ ಮಾಧ್ಯಮ (ಎಲೆಕ್ಟ್ರಾನಿಕ್ ಮೀಡಿಯಾ) ಕೋರ್ಸ್ ಅನ್ನು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಕೋರ್ಸ್ ಜತೆ ವಿಲೀನಗೊಳಿಸಲಾಗಿದೆ.

2024-25ನೇ ಶೈಕ್ಷಣಿಕ ವರ್ಷದಲ್ಲಿ 'ವಿದೇಶಿ ಭಾಷೆಗಳು' (ಫ್ರೆಂಚ್, ಜರ್ಮನ್, ರಷ್ಯನ್), ಮರಾಠಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ದಾಖಲಾಗಿಲ್ಲ. ಕೆಲ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಒಂದಂಕಿ ದಾಟಿಲ್ಲ. ಸಂಸ್ಕೃತ, ಅನ್ವಯಿಕ ತಳಿವಿಜ್ಞಾನ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಸಾರ್ವಜನಿಕ ಆಡಳಿತ ಸೇರಿ ಕೆಲ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕುಸಿದಿದೆ.

ಹಲವು ಕೋರ್ಸ್‌ಗಳ ಒಟ್ಟು ಸೀಟುಗಳಲ್ಲಿ ಅರ್ಧದಷ್ಟು ಖಾಲಿ ಇವೆ. ಕಲಾ ವಿಭಾಗದ (10 ಕೋರ್ಸ್) ಒಟ್ಟು 508 ಸೀಟುಗಳಿಗೆ ಸುಮಾರು 250, ವಿಜ್ಞಾನ ವಿಭಾಗದ (16 ಕೋರ್ಸ್) ಒಟ್ಟು 889 ಸೀಟುಗಳಿಗೆ 650, ಸಮಾಜವಿಜ್ಞಾನ ವಿಭಾಗದ (12 ಕೋರ್ಸ್) ಒಟ್ಟು 686 ಸೀಟುಗಳಿಗೆ 450 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಆದರೆ, ವ್ಯವಹಾರ ನಿರ್ವಹಣೆ (ಎಂಬಿಎ), ಕಾನೂನು (ಎಲ್‌ಎಲ್‌ಎಂ), ಎಂ.ಪಿ.ಇಡಿ, ಎಂ.ಕಾಂ ಕೋರ್ಸ್‌ಗಳ ಸೀಟುಗಳು ಭರ್ತಿಯಾಗಿವೆ.



ಕರ್ನಾಟಕ ವಿಶ್ವವಿದ್ಯಾಲಯ

ಕೋರ್ಸ್‌ಗಳು ಹಾಗೂ ವಿದ್ಯಾರ್ಥಿಗಳ ಸಂಖ್ಯೆ (2024-25)

ಕೋರ್ಸ್	ಲಭ್ಯ ಸೀಟು	ಪ್ರಥಮ ವರ್ಷಕ್ಕೆ ದಾಖಲಾದವರು	ದ್ವಿತೀಯ ವರ್ಷಕ್ಕೆ ದಾಖಲಾದವರು
ವಿದೇಶಿ ಭಾಷೆಗಳು	11	0	0
ಮರಾಠಿ	16	0	3
ಸಂಸ್ಕೃತ	20	4	1
ಉರ್ದು	26	10	15
ಅನ್ವಯಿಕ ತಳಿವಿಜ್ಞಾನ	37	10	4
ದೃಶ್ಯಕಲೆ	37	11	13
ಭಾಷಾವಿಜ್ಞಾನ	30	11	13
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ	55	11	20
ಸಾರ್ವಜನಿಕ ಆಡಳಿತ	41	14	3

'ಕೆಲವು ಕೋರ್ಸ್‌ಗಳಿಗೆ ದಾಖಲಾಗಲು ವಿದ್ಯಾರ್ಥಿಗಳು ಆಸಕ್ತಿ ತೋರುತ್ತಿಲ್ಲ. ಇನ್ನು ಕೆಲವು ಕೋರ್ಸ್‌ಗೆ ಶುಲ್ಕ ಜಾಸ್ತಿ ಇದೆ. ಹೀಗಾಗಿ ದಾಖಲಾಗಿಲ್ಲ. ಹೆಚ್ಚುವರಿ ಶುಲ್ಕ ಕೋಟಾದ ಸೀಟುಗಳು ಬಹುತೇಕ ಖಾಲಿ ಉಳಿಯುತ್ತವೆ' ಎಂದು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಮೃತ ಮಹೋತ್ಸವದ ವರ್ಷಾಚರಣೆಯಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಸಂಕಷ್ಟ, ಕಾಯಂ ಬೋಧಕರ ಕೊರತೆ ಮೊದಲಾದ ಸಮಸ್ಯೆಗಳು ಕಾಡುತ್ತಿವೆ. ಹಲವು ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಕೊರತೆಯೂ ಇದೆ' ಎಂದರು.

ಮುಖ್ಯಾಂಶಗಳು
- ಕಾಯಂ ಬೋಧಕರ ಕೊರತೆ
- ಆರ್ಥಿಕ ಸಂಕಷ್ಟ, ಸೌಲಭ್ಯ ಕೊರತೆ
- ಅಮೃತ ಮಹೋತ್ಸವದ ವರ್ಷಾಚರಣೆ ವೇಳೆ ಹಿನ್ನಡೆ

'ಪಿ.ಜಿ ಅಧ್ಯಯನಕ್ಕೆ ನಿರಾಸಕ್ತಿ'

'ಪದವಿ ಕಾಲೇಜುಗಳಲ್ಲೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಆರಂಭ ವಾಗಿವೆ. ಹಾವೇರಿ, ಗದಗ ಸೇರಿ ಅಕ್ಕಪಕ್ಕದ ಜಿಲ್ಲೆಗಳಲ್ಲೂ ವಿಶ್ವವಿದ್ಯಾ-ಲಯಗಳು ಸ್ಥಾಪನೆ ಆಗಿವೆ.



ಎ.ಚನ್ನಪ್ಪ

ಅದಕ್ಕೆ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಧಾರವಾಡಕ್ಕೆ ಬರುವವರ ಸಂಖ್ಯೆ ಇಳಿದಿದೆ. ಹೆಚ್ಚಿನ ಪ್ರೋತ್ಸಾಹ, ಉದ್ಯೋಗಾವಕಾಶ ಇಲ್ಲ ಎಂಬ ಕಾರಣಕ್ಕೆ ಕಲಾ ವಿಭಾಗದ ಕೆಲ ಕೋರ್ಸ್‌ಗಳಿಗೆ ದಾಖಲಾಗಲು ವಿದ್ಯಾರ್ಥಿಗಳು ಆಸಕ್ತಿ ತೋರಲ್ಲ. ವ್ಯವಹಾರ ನಿರ್ವಹಣೆ, ವಾಣಿಜ್ಯ, ವಿಜ್ಞಾನ ಕೋರ್ಸ್‌ಗಳಿಗೆ ದಾಖಲಾತಿ ಚೆನ್ನಾಗಿದೆ' ಎಂದು ಕ.ವಿ.ವಿ. (ಆಡಳಿತ) ಕುಲಸಚಿವ ಎ.ಚನ್ನಪ್ಪ ತಿಳಿಸಿದರು.



❦ ಸುಭಾಷಿತ ❦

ನಮ್ಮ ದೇಶಕ್ಕೆ ಶಾಪ ಎಂದರೆ ಸೋಮಾರಿತನ.
-ಸರ್ ಎಂ.ವಿಶ್ವೇಶ್ವರಯ್ಯ

ಜಲಗಾಂವ್ ರೈಲು ದುರಂತ ಹಲವು ಪ್ರಶ್ನೆ ಮತ್ತು ಪಾಠ

ಹೆಚ್ಚಿನ ಸಂಖ್ಯೆಯ ಅಪಘಾತಗಳಿಗೆ ತಪ್ಪುಗ್ರಹಿಕೆಗಳು ಇಲ್ಲವೇ ಪರಿಸ್ಥಿತಿಯನ್ನು ಸರಿಯಾಗಿ ಅಂದಾಜಿಸುವಲ್ಲಿ ಆಗುವ ವೈಫಲ್ಯಗಳೇ ಕಾರಣ. ಯಾವುದಾದರೂ ಘಟನೆ ನಡೆದಾಗ ತಕ್ಷಣವೇ ಸ್ಪಂದಿಸಲು ಬೇಕಾದಷ್ಟು ಸಾಮರ್ಥ್ಯ ಹಾಗೂ ಅವಕಾಶದ ಕೊರತೆ ಕೂಡ ಹಲವು ಅಪಘಾತಗಳಿಗೆ ಕಾರಣ ಆಗುವುದಿದೆ. ಕೆಲವೊಂದು ಅಪಘಾತಗಳಿಗೆ ಮಾತ್ರ ಮೇಲಿನ ಎಲ್ಲ ಸಂಗತಿಗಳು ಒಟ್ಟಾಗಿ ಕಾರಣ ಆಗುವುದುಂಟು. ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಸಂಭವಿಸಿದ ರೈಲು ದುರಂತ ಕೂಡ ಅಂತಹದ್ದೇ ಒಂದು ಅಪಘಾತ ಪ್ರಕರಣ. ಲಖನೌದಿಂದ ಮುಂಬೈಗೆ ಹೊರಟಿದ್ದ ಪುಷ್ಪಕ್ ಎಕ್ಸ್‌ಪ್ರೆಸ್‌ನ ಬೋಗಿಯೊಂದರಲ್ಲಿ ಬೆಂಕಿ ಹೊತ್ತಿಕೊಂಡಿದೆ ಎಂಬ ವದಂತಿ ಹಬ್ಬಿದ್ದರಿಂದ ಹಲವು ಪ್ರಯಾಣಿಕರು ಚೈನು ಎಳೆದು, ರೈಲು ನಿಲ್ಲುವಂತೆ ಮಾಡಿ, ಜಿಗಿದು ಓಡತೊಡಗಿದಾಗ ಈ ದುರಂತ ಸಂಭವಿಸಿತು. ಪಕ್ಕದ ಹಳಿಗಳ ಮೇಲೆ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನ ಅಡಿಗೆ ಸಿಲುಕಿ 13 ಜನ ಜೀವ ಕಳೆದುಕೊಳ್ಳಬೇಕಾಯಿತು. ಚಹಾ ಮಾರುವ ವ್ಯಕ್ತಿ ವದಂತಿ ಹಬ್ಬಿಸಿದ್ದೇ ಈ ದುರ್ಘಟನೆಗೆ ಕಾರಣವಾಯಿತು ಎಂದು ಹೇಳಲಾಗುತ್ತಿದೆ. ಘಟನೆ ನಡೆದ ಸ್ಥಳದಲ್ಲಿ ರೈಲು ಮಾರ್ಗ ತಿರುವಿನಿಂದ ಕೂಡಿದ್ದರಿಂದ ಪ್ರಯಾಣಿಕರು ಹಳಿಗಳ ಮೇಲೆ ಓಡುತ್ತಿರುವುದು ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನ ಚಾಲಕರಿಗೆ ಬೇಗ ಗೊತ್ತಾಗಿಲ್ಲ. ಬಳಿಕ ರೈಲಿನ ವೇಗವನ್ನು ತಗ್ಗಿಸಿದರೂ ದುರಂತವನ್ನು ತಪ್ಪಿಸಲು ಸಾಧ್ಯವಾಗಿಲ್ಲ. ವದಂತಿ, ಗೊಂದಲ ಹಾಗೂ ಕೈಮೀರಿದ ಸನ್ನಿವೇಶ– ಹೀಗೆ ಎಲ್ಲವೂ ಈ ಅಪಘಾತಕ್ಕೆ ಕಾರಣವಾಗಿವೆ.



ಅಪಘಾತಗಳು ಸುರಕ್ಷತೆಯ ಕುರಿತು ಎತ್ತುವ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕಂಡುಕೊಂಡು, ವ್ಯವಸ್ಥೆಯನ್ನು ಬಲಪಡಿಸಲು ರೈಲ್ವೆ ಇಲಾಖೆ ಮುಂದಾಗಬೇಕು

ಬೆಂಕಿ ಹೊತ್ತಿಕೊಂಡ ವದಂತಿಯು ಕಾರಣವಿಲ್ಲದೆ ಹಬ್ಬಿತೋ ಅಥವಾ ರೈಲಿನಲ್ಲಿ ಕಿಡಿ ಹಾಗೂ ಹೊಗೆ ಕಾಣಿಸಿಕೊಂಡಿದ್ದರಿಂದ ಎದ್ದಿತೋ ಎಂಬುದು ಸ್ಪಷ್ಟವಾಗಿಲ್ಲ. ಅಚ್ಚುಗಳು ಬಿಸಿಯಾಗಿದ್ದರಿಂದಲೋ ಬ್ರೇಕ್ ವ್ಯವಸ್ಥೆಯಲ್ಲಿನ ದೋಷದಿಂದಾಗಿ ಗಾಲಿ ಮತ್ತು ಹಳಿಗಳ ನಡುವೆ ಘರ್ಷಣೆ ಏರ್ಪಟ್ಟಿದ್ದರಿಂದಲೋ ಕಿಡಿ ಕಾಣಿಸಿಕೊಂಡಿರಬಹುದು ಎಂದೂ ಹೇಳಲಾಗುತ್ತಿದೆ. ಒಂದುವೇಳೆ, ಈ ಸಂಗತಿಯೇನಾದರೂ ನಿಜವಾಗಿದ್ದಲ್ಲಿ ರೈಲಿನ ಎಲ್ಲ ಸಾಧನ–ಸಲಕರಣೆಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವಲ್ಲಿ ರೈಲ್ವೆ ಇಲಾಖೆಯ ನಿರ್ವಹಣಾ ವಿಭಾಗವು ಸೋತಿದೆ ಎಂದರ್ಥ. ಆಗ, ಈ ವಿಭಾಗವನ್ನೇ ಉತ್ತರದಾಯಿಯನ್ನಾಗಿ ಮಾಡಬೇಕಾಗುತ್ತದೆ. ರೈಲಿನಲ್ಲಿ ಯಾವುದೇ ಕಿಡಿ ಇಲ್ಲವೇ ಹೊಗೆ ಕಾಣಿಸಿಕೊಂಡಿರಲಿಲ್ಲ ಎಂದು ಇಲಾಖೆಯು ಹೇಳಿದೆ. ಆದರೆ, ಇಲಾಖೆಯ ಈ ಹೇಳಿಕೆಯೇ ಅಂತಿಮವಲ್ಲ. ಕಾರ್ಯಾಚರಣೆ ಹಾಗೂ ಸುರಕ್ಷತಾ ವ್ಯವಸ್ಥೆಯಲ್ಲಿ ಏನಾದರೂ ಲೋಪಗಳಾಗಿವೆಯೇ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಯುತ್ತಿದೆ. ಸುಳ್ಳು ವದಂತಿಯೇ ದುರ್ಘಟನೆಗೆ ಕಾರಣ ಎಂಬುದಾಗಿ ಮಹಾರಾಷ್ಟ್ರ ಸರ್ಕಾರವೂ ಹೇಳಿದೆ. ಯಾವುದಾದರೂ ಪಿತೂರಿ ಈ ಘಟನೆಯ ಹಿಂದಿದೆಯೇ ಎಂಬುದನ್ನು ಪತ್ತೆ ಮಾಡುವುದಕ್ಕಾಗಿ ಜಲಗಾಂವ್ ಜಿಲ್ಲಾಡಳಿತವು ತನಿಖೆಗೆ ಆದೇಶಿಸಿದೆ. ರೈಲ್ವೆ ಇಲಾಖೆಯಲ್ಲಿನ ಸುರಕ್ಷತಾ ವ್ಯವಸ್ಥೆಯ ವೈಫಲ್ಯವೇ ಘಟನೆಗೆ ಕಾರಣ ಎಂದು ವಿರೋಧಪಕ್ಷಗಳು ದೂರಿವೆ.

ಭಿನ್ನ ಆಯಾಮಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಡೆದಿರುವ ತನಿಖೆಗಳಿಂದ ದುರಂತಕ್ಕೆ ನಿಖರ ಕಾರಣವೇನು ಎಂಬುದು ಗೊತ್ತಾಗಲಿದೆ. ಆದರೆ, ಪ್ರತಿ ದುರ್ಘಟನೆಯಿಂದಲೂ ಕಲಿಯಬೇಕಾದ ಪಾಠಗಳಿರುತ್ತವೆ. ದುರಂತವು ಮಾನವ ದೋಷ, ಯಾಂತ್ರಿಕ ವೈಫಲ್ಯ, ನೈಸರ್ಗಿಕ ಪ್ರಕೋಪ ಅಥವಾ ಪ್ರಯಾಣಿಕರಿಂದ ಹಬ್ಬುವ ವದಂತಿ ಯಾವುದರಿಂದಲೇ ಆಗಿರಲಿ, ಅಪಘಾತ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕಾಗಿರುವುದು ರೈಲ್ವೆ ಇಲಾಖೆಯ ಜವಾಬ್ದಾರಿ. ರೈಲು ಬೋಗಿಗಳಲ್ಲಿ ಹಬ್ಬುವ ವದಂತಿಗಳನ್ನು ಇಲಾಖೆಯು ಹೇಗೆ ನಿಭಾಯಿಸಲಿದೆ ಎಂಬ ಪ್ರಶ್ನೆಯನ್ನು ಜಲಗಾಂವ್ ದುರಂತ ಈಗ ಮುನ್ನೆಲೆಗೆ ತಂದಿದೆ. ಪ್ರತಿ ಬೋಗಿಯಲ್ಲೂ ಪ್ರಯಾಣಿಕರಿಗೆ ಸರಿಯಾದ ಮಾಹಿತಿ ತಲುಪಿಸುವಂತಹ ಸಂವಹನ ವ್ಯವಸ್ಥೆಯೊಂದು ಬೇಕಾಗಿರುವುದು ಇಂದಿನ ತುರ್ತು. ಆ ದಿಸೆಯಲ್ಲಿ, ಸರ್ಕಾರ ಏನು ಯೋಜನೆ ರೂಪಿಸಲಿದೆ ಎಂಬುದನ್ನು ಕಾದುನೋಡಬೇಕು. ವದಂತಿಗಳು ಹಬ್ಬಿದಾಗ ಗಾಬರಿ ಬಿದ್ದು ಸುರಕ್ಷಿತ ತಾಣಗಳತ್ತ ಓಡುವುದು ಜನ ತೋರುವ ಸಾಮಾನ್ಯ ಪ್ರತಿಕ್ರಿಯೆ. ದುರ್ಘಟನೆಗೆ ಸಂಬಂಧಿಸಿದಂತೆ ಅವರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಪ್ರತಿ ಅಪಘಾತ ಸಂಭವಿಸಿದಾಗಲೂ ಅದು ಸುರಕ್ಷತೆಯ ಕುರಿತು ಪ್ರಶ್ನೆಗಳನ್ನು ಎತ್ತುತ್ತದೆ ಮತ್ತು ಅಂತಹ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕಂಡುಕೊಂಡು ವ್ಯವಸ್ಥೆಯನ್ನು ಬಲಪಡಿಸುವ ಕೆಲಸವನ್ನು ಮಾಡುವುದು ರೈಲ್ವೆ ಇಲಾಖೆಯ ಕರ್ತವ್ಯವಾಗಿದೆ.

ದಿನದ ಟ್ವೀಟ್

ಚಾಲನೆಯಲ್ಲಿ ಇರಲಿ ಎಚ್ಚರ



ಒಳ್ಳೆಯ ಕ್ರಮ. ಆದರೆ ಆಂಬುಲೆನ್ಸ್ ಚಾಲಕ ಒಂದು ಕೈಯಲ್ಲಿ ಚಾಲನೆ ಮಾಡುತ್ತಾ ಇನ್ನೊಂದು ಕೈಯಲ್ಲಿ ಮೊಬೈಲ್‌ನಲ್ಲಿ ದೃಶ್ಯವನ್ನು ದಾಖಲಿಸುತ್ತಾ ಸಾಗಿದ್ದರಿಂದ, ವಾಹನದ ಒಳಗಿದ್ದವರು ಮತ್ತು ಹೊರಗಿದ್ದವರೆಲ್ಲರ ಜೀವವನ್ನೂ ಪಣಕ್ಕೆ ಒಡ್ಡಿದಂತಾಯಿತು. 'ಇಂತಹದ್ದಕ್ಕೆ ಅವಕಾಶ ನೀಡಬಾರದು ಮತ್ತು ಕ್ರಮ ಕೈಗೊಳ್ಳಬೇಕು. ಆಂಬುಲೆನ್ಸ್‌ಗಳಲ್ಲಿ ಡ್ಯಾಶ್‌ಕ್ಯಾಮ್ ಅಳವಡಿಕೆಯನ್ನು ಕಡ್ಡಾಯಗೊಳಿಸಬೇಕು ಮತ್ತು ಅದು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಬೇರೆ ದಿನಗಳಲ್ಲಿ ಆಂಬುಲೆನ್ಸ್ ಚಾಲಕರ ಅಡ್ಡಾದಿಡ್ಡಿ ಚಾಲನೆಯು ದಾಖಲಾಗುವಂತೆ ಆಗುತ್ತದೆ.

(ಬೆಂಗಳೂರಿನಲ್ಲಿ ಆಂಬುಲೆನ್ಸ್ ಸಂಚಾರಕ್ಕೆ ಅಡ್ಡಿಪಡಿಸಿದ ಆಟೊ ಚಾಲಕನನ್ನು ಬಂಧಿಸಿ ದಂಡ ವಸೂಲಿ ಮಾಡಿರುವುದಕ್ಕೆ ಪ್ರತಿಕ್ರಿಯೆ)

ದೀಪಕ್ ಕೆ.ಎಂ.

ಕಿಡಿನುಡಿ

ನಾವೆಲ್ಲರೂ ಒಂದಾಗಿದ್ದೇವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿರುತ್ತಾರೆ. ಯಾರಿಗೋಸ್ಕರ? ಅಧಿಕಾರಕ್ಕೆ ಮಾತ್ರವೇ ಒಂದಾಗುತ್ತಿದ್ದಾರೆ. ಜನರಿಗಾಗಿ ಏನು ಮಾಡುತ್ತಿದ್ದಾರೆ? ಏನು ಕೊಟ್ಟಿದ್ದಾರೆ?



ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ
ಮಂಗಳವಾರ, 25-1-2000

● ಆರೋಗ್ಯಕ್ಕೆ ಮಾರಕ: 75 ಔಷಧಿಗಳ ಮಾರಾಟಕ್ಕೆ ರಾಜ್ಯದಲ್ಲಿ ನಿಷೇಧ

ಬೆಂಗಳೂರು, ಜ. 24– ಸಾರ್ವಜನಿಕ ಆರೋಗ್ಯಕ್ಕೆ ಮಾರಕವಾದ, ನಾಗಪುರದಲ್ಲಿ ನಡೆದ ಚಿಕಿತ್ಸಾ ಶಿಬಿರದಲ್ಲಿ ಬಳಸಲಾದ 16 ಔಷಧಿಗಳನ್ನು ಸೇರಿದಂತೆ ಒಟ್ಟು 75ಕ್ಕೂ ಹೆಚ್ಚು ಔಷಧಿಗಳು ಸಾರ್ವಜನಿಕರ ಆರೋಗ್ಯಕ್ಕೆ ಮಾರಕವಾಗಿ ಇರುವುದರಿಂದ ಅವು ರಾಜ್ಯದಲ್ಲಿ ಮಾರಾಟವಾಗದಂತೆ ಔಷಧ ನಿಯಂತ್ರಣ ಇಲಾಖೆಯು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ನಿಷೇಧಿಸಲಾಗಿರುವ ಔಷಧಗಳ ಪೈಕಿ ಅನೇಕ ಔಷಧಗಳನ್ನು ಪ್ರಮುಖ ಕಂಪನಿಗಳು ತಯಾರಿಸುತ್ತಿದ್ದು ಸರ್ಕಾರ ಯಾವುದೇ ಲಾಬಿಗೂ ಮಣಿಯದೆ ಅವುಗಳ ಉತ್ಪಾದನೆ ಮತ್ತು ಮಾರಾಟವನ್ನು ತಡೆಗಟ್ಟಲು ರಾಜ್ಯದ ಔಷಧ ನಿಯಂತ್ರಣ ಇಲಾಖೆ ಮಾರಾಟ ಮಳಿಗೆಗಳ ಮೇಲೆ ನಿಗಾ ಇಟ್ಟು ತಪಾಸಣೆ ಕಾರ್ಯವನ್ನು ಬಿಗಿಗೊಳಿಸಿದೆ. ಈ ನಿಷೇಧಿತ ಔಷಧಗಳ ಬಗ್ಗೆ ವಿಶೇಷ ಗಮನ ಹರಿಸುವಂತೆ ತಪಾಸಣಾಧಿಕಾರಿಗಳಿಗೆ ತಿಳಿಸಲಾಗಿದೆ.

ಜನವರಿ ಮೊದಲ ವಾರದಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿ ನಡೆದ ಚಿಕಿತ್ಸಾ ಶಿಬಿರದಲ್ಲಿ ಕೆಲವು ಔಷಧಗಳನ್ನು ಬಳಸಿದ ನಂತರ ಇಪ್ಪತ್ತು ಮಂದಿ ಅಮಾಯಕರು ಮೃತಪಟ್ಟ ದುರ್ಘಟನೆ ಕಂಡುಬಂದಿತ್ತು. ಆ ಶಿಬಿರದಲ್ಲಿ ಬಳಸಲಾಗಿದ್ದ 16 ಔಷಧಗಳನ್ನು ಗುರುತಿಸಿ, ಅವನ್ನು ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಮಾರಾಟ ಮಾಡದಂತೆ ರಾಜ್ಯದ ಔಷಧ ನಿಯಂತ್ರಕರು ಎಚ್ಚರಿಕೆ ನೀಡಿ, ಎಲ್ಲ ಬಗೆಯ ನಿರ್ಬಂಧಗಳನ್ನು ಹೇರಿದ್ದಾರೆ.

50 ವರ್ಷಗಳ ಹಿಂದೆ
ಶನಿವಾರ, 25-1-1975

● ಮುಂಬೈ ಸ್ಟೇಡಿಯಂನಲ್ಲಿ ಭಾರಿ ಗಲಭೆ- ಬೆಂಕಿ: ಟೀ ನಂತರ ಆಟ ರದ್ದು

ಮುಂಬೈ, ಜ. 24– ಪ್ರೇಕ್ಷಕರು ಮತ್ತು ಪೊಲೀಸರ ನಡುವೆ ತೀವ್ರ ಘರ್ಷಣೆಗಳಾಗಿ ಮುಂಬೈ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನದ ಆಟವನ್ನು ಇಂದು ಟೀ ವಿರಾಮಕ್ಕೆ ಕೈಬಿಡಲಾಯಿತು.

ಭಾರತ– ವೆಸ್ಟ್ ಇಂಡೀಸ್ ನಡುವೆ 5ನೇ ಕ್ರಿಕೆಟ್ ಟೆಸ್ಟ್ ಪಂದ್ಯ ನಡೆಯುತ್ತಿರುವ ವಾಂಖೆಡೆ ಸ್ಟೇಡಿಯಂನಲ್ಲಿ ಹಲವೆಡೆ ಬೆಂಕಿ ಹೊತ್ತಿಸಲಾಯಿತು. ರೊಚ್ಚಿಗೆದ್ದ ಕ್ರೀಡಾ ಅಭಿಮಾನಿಗಳು ಕಲ್ಲು, ಚಪ್ಪಲಿ, ಬಾಟಲಿಗಳನ್ನು ತೂರಿದರು. ಪ್ರೇಕ್ಷಕರು ಎಸೆದ ವಸ್ತುಗಳನ್ನೇ ಮತ್ತೆ ವಾಪಸು ಎಸೆದು ಪೊಲೀಸರು ಗಲಭೆಕೋರರನ್ನು ಚದುರಿಸಲು ಯತ್ನಿಸಿದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

● ಚಳವಳಿ ನಡೆಸದೆ ಸಮಸ್ಯೆಗೆ ಪರಿಹಾರ ಸೂಚಿಸಿ: ಜೆಪಿ

ಪುಣೆ, ಜ. 24– 'ಚಳವಳಿ ನಡೆಸಲು ಹೋಗಬೇಡಿ, ಸಮಾಜದ ನರಳಾಟಕ್ಕೆ ಕಾರಣ ಕಂಡುಹಿಡಿದು, ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿ. ಅಧಿಕಾರಾರೂಢ ಪಕ್ಷಗಳೊಡನೆ ನೇರ ಹೋರಾಟದ ಅಗತ್ಯವಿಲ್ಲ. ಹಾಗೆ ಮಾಡುವುದರಿಂದ ನೀವು ಬಂಧಿತರಾದರೆ ಅಥವಾ ಇನ್ನೇನಾದರೂ ಉಂಟಾದರೆ ಕೆಲಸಕ್ಕೆ ತೊಂದರೆಯಾಗುವುದು' ಎಂದು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರು ಇಲ್ಲಿ ಕರೆ ನೀಡಿದರು.

'ಪ್ರಜಾಪ್ರಭುತ್ವಕ್ಕಾಗಿ ಪೌರರು' ಸಂಸ್ಥೆಯ ಮಹಾಧಿವೇಶನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಗಾಯಾಳುಗಳಿಗೆ ನೆರವಾಗುವ ದಿಸೆಯಲ್ಲಿ ಸಾರ್ವಜನಿಕರಲ್ಲಿ ಮೂಡಿಸಬೇಕಿದೆ ಜಾಗೃತಿ

ರಸ್ತೆ ಅಪಘಾತ: ಚಾಚೋಣ ಸಹಾಯಹಸ್ತ



ವಿಶ್ಲೇಷಣೆ

ಎಂ.ಎ.ಸಲೀಂ

ಭಾರತದಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ಪ್ರತಿವರ್ಷ ಸುಮಾರು ಒಂದೂವರೆ ಲಕ್ಷ ಜನ ಮೃತಪಡುತ್ತಾರೆ ಮತ್ತು ಐದು ಲಕ್ಷ ಜನ ಗಾಯಗೊಳ್ಳುತ್ತಾರೆ. ಜಾಗತಿಕ ಮಟ್ಟದಲ್ಲಿ ರಸ್ತೆ ಅಪಘಾತದಲ್ಲಾಗುವ ಸಾವುಗಳಲ್ಲಿ ಶೇಕಡ 12ರಷ್ಟು ಭಾರತದಲ್ಲಿಯೇ ಸಂಭವಿಸುತ್ತವೆ.

ನಿರ್ಲಕ್ಷ್ಯದಿಂದ ಕೂಡಿದ ವಾಹನ ಚಲಾವಣೆ, ವಾಹನಗಳಲ್ಲಿನ ತಾಂತ್ರಿಕ ದೋಷ ಮತ್ತು ಕೆಟ್ಟ ಸ್ಥಿತಿಯಲ್ಲಿರುವ ಹೆದ್ದಾರಿಗಳು– ಇವು ರಸ್ತೆ ಅಪಘಾತ ಸಂಭವಿಸಲು ಇರುವ ಪ್ರಮುಖ ಕಾರಣಗಳು. ಅಪಘಾತ ಸಂಭವಿಸಿದ ತಕ್ಷಣವೇ ಸೂಕ್ತ ಚಿಕಿತ್ಸೆ ದೊರಕದೇ ಗಾಯಾಳುಗಳು ಮೃತಪಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಘಟನಾ ಸ್ಥಳದಲ್ಲಿ ಇರುವ ಸಾರ್ವಜನಿಕರು ಗಾಯಾಳುಗಳ ಸಹಾಯಕ್ಕೆ ಮುಂದಾಗದೆ ಇರುವುದೇ ಸಾವಿನ ಸಂಖ್ಯೆ ಏರಿಕೆಯಾಗಲು ಇರುವ ಮುಖ್ಯ ಕಾರಣ.

'ನಮಗೆ ಯಾಕೆ ಬೇಕು, ಸುಮ್ಮನೆ ಹಿಂಸೆ', 'ಕೋರ್ಟ್ ಓಡಾಟ ನಮಗೆ ಬೇಡ' ಎನ್ನುವ ಭಯದ ಕಾರಣದಿಂದ ಜನರು ಗಾಯಾಳುಗಳಿಗೆ ಸಹಾಯವನ್ನೇ ಮಾಡುವುದಿಲ್ಲ. ಗಾಯಾಳುಗಳಿಗೆ 'ಗೋಲ್ಡನ್ ಅವರ್'ನಲ್ಲಿ (ಅಪಘಾತ ಸಂಭವಿಸಿದ ಮೊದಲ ಒಂದು ತಾಸು) ಅಗತ್ಯವಾಗಿ ಆಗಬೇಕಾದ ಪ್ರಥಮ ಚಿಕಿತ್ಸೆ, ಸಹಕಾರ ಸಿಗುವುದೇ ಇಲ್ಲ. ಇದರಿಂದ ಗಾಯಾಳುಗಳು ಒಂದೋ ಮೃತಪಡುತ್ತಾರೆ ಇಲ್ಲವೇ ಶಾಶ್ವತವಾಗಿ ಅಂಗವಿಕಲರಾಗುತ್ತಾರೆ.

ಗಾಯಾಳುಗಳಿಗೆ ಸಾರ್ವಜನಿಕರು ಯಾಕಾಗಿ ಸಹಾಯ ಮಾಡುವುದಿಲ್ಲ ಎನ್ನುವ ಕುರಿತು 'ಸೇವ್‌ಲೈಫ್ ಫೌಂಡೇಷನ್' ಮತ್ತು 'ಟಿಎನ್‌ಎಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಸಂಸ್ಥೆಗಳು ರಾಷ್ಟ್ರ ಮಟ್ಟದಲ್ಲಿ ಅಧ್ಯಯನವೊಂದನ್ನು ನಡೆಸಿವೆ. 'ಭಾರತದಲ್ಲಿ ಅಪಘಾತ ಸಂಭವಿಸಿದಾಗ ಸಮೀಪ ಇರುವ ಜನ ಆರೈಕೆ ನೀಡುವುದಕ್ಕೆ ಇರುವ ಅಡೆತಡೆಗಳು' ಎಂಬ ಹೆಸರಿನಲ್ಲಿ ವರದಿಯೊಂದನ್ನು ಬಿಡುಗಡೆ ಮಾಡಿವೆ.

ಈ ವರದಿಯ ಪ್ರಕಾರ, ಗಾಯಾಳುಗಳಿಗೆ ಸಹಾಯ ಮಾಡಲು ಶೇ 74ರಷ್ಟು ಜನ ಇಚ್ಛಿಸುವುದಿಲ್ಲ. ಕೋರ್ಟು, ಕೇಸು ಎಂದು ಅಲೆಯಬೇಕು, ಪೊಲೀಸರು ತನಿಖೆ ಸಲುವಾಗಿ ಅವರನ್ನು ಪದೇಪದೇ ಕರೆಯುತ್ತಾರೆ, ನ್ಯಾಯಾಲಯಕ್ಕೆ ಪದೇಪದೇ ಹಾಜರಾಗಬೇಕು ಎನ್ನುವ ಕಾರಣಕ್ಕೆ ಶೇಕಡ 88ರಷ್ಟು ಜನ ಗಾಯಾಳುಗಳಿಗೆ ಸಹಾಯ ಮಾಡುವುದಿಲ್ಲ. ಆಸ್ಪತ್ರೆಗೆ ದಾಖಲಿಸಿದ ನಂತರ ಬಹಳ ಹೊತ್ತು ಅಲ್ಲೇ ಇರಬೇಕಾಗುತ್ತದೆ, ಆಸ್ಪತ್ರೆ ದಾಖಲಾತಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಶೇ 77ರಷ್ಟು ಮಂದಿ ಗಾಯಾಳುಗಳಿಗೆ ಸಹಾಯ ಮಾಡುವುದಿಲ್ಲ.

ಸಾಮಾಜಿಕ ಜಾಲತಾಣಗಳಲ್ಲಿ ರಸ್ತೆ ಅಪಘಾತದ ಹಲವು ವಿಡಿಯೊಗಳು ಹರಿದಾಡುತ್ತವೆ. ಅಪಘಾತದಲ್ಲಿ ಗಾಯಗೊಂಡವರು ಸಹಾಯಕ್ಕಾಗಿ ಬೇಡುತ್ತಿರುವ ದೃಶ್ಯಗಳೂ ವಿಡಿಯೊಗಳಲ್ಲಿ ಇರುತ್ತವೆ. ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಯಾರೂ ಸಹಾಯ ಮಾಡುವುದಿಲ್ಲ. ಕೆಲವರು ವಿಡಿಯೊ ಮಾಡಿಕೊಂಡು ನಿಂತಿರುತ್ತಾರೆ. ಪೊಲೀಸರಿಗೆ ಅಥವಾ ಆಂಬುಲೆನ್ಸ್‌ಗಾದರೂ ಕರೆ ಮಾಡಬೇಕು ಎಂದು ಯಾವ ದಾರಿಹೋಕರಿಗೂ ಅನ್ನಿಸುವುದಿಲ್ಲ. ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲು ಯಾರೂ ಮುಂದಾಗುವುದಿಲ್ಲ.

ಸಮಾಜದಲ್ಲಿ 'ಗುಡ್ ಸಮರಿಟನ್' (ಪರೋಪಕಾರಿ) ಸಂಸ್ಕೃತಿ ಬೆಳೆಸುವುದೇ ಇದಕ್ಕಿರುವ ಪರಿಹಾರ. ಬೈಬಲ್‌ನಲ್ಲಿ ಹೇಳಿರುವ ನೀತಿಕತೆಗಳಲ್ಲಿ 'ಗುಡ್ ಸಮರಿಟನ್' ಎನ್ನುವ ಪರಿಕಲ್ಪನೆಯು ತನ್ನ ಮೂಲವನ್ನು ಹೊಂದಿದೆ.

ಕತೆ ಹೀಗಿದೆ: 'ವ್ಯಕ್ತಿಯೊಬ್ಬರು ಜೆರುಸಲೇಂನಿಂದ ಜೆರಿಕೊ ನಗರಕ್ಕೆ ಹೊರಟಿದ್ದರು. ಮಾರ್ಗಮಧ್ಯೆ ದರೋಡೆಕೋರರು ಆ ವ್ಯಕ್ತಿಯನ್ನು ತೀವ್ರವಾಗಿ ಥಳಿಸಿದರು. ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯ ಪಕ್ಕದಲ್ಲಿಯೇ ಇಬ್ಬರು ನಡೆದುಕೊಂಡು ಹೋದರು. ಆದರೆ, ಅವರು ಸಹಾಯ ಮಾಡಲಿಲ್ಲ. ಒಬ್ಬ ಸಮರಿಟನ್ (ಸಮರಿಯಾ ನಗರದವನು) ಗಾಯಗೊಂಡ ವ್ಯಕ್ತಿಗೆ ಸಹಾಯ ಮಾಡಿದ. ಗಾಯಗಳಿಗೆ ಔಷಧ ಹಚ್ಚಿ ಉಪಚರಿಸಿದ. ಆಶ್ರಯವನ್ನೂ ನೀಡಿದ.

ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರನ್ನು ತಕ್ಷಣವೇ ಉಪಚರಿಸುವ ಸಂಸ್ಕೃತಿಯನ್ನು ಜನರಲ್ಲಿ ಬೆಳೆಸಬೇಕಿದೆ. ಇದಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. 'ಗುಡ್ ಸಮರಿಟನ್' ಆಗುವಂತೆ ಜನರನ್ನು ಪ್ರೋತ್ಸಾಹಿಸಬೇಕಿದೆ. ಜಾಗೃತಿ ಮೂಡಿಸಿದರೆ ಸಾಲದು, ಗಾಯಾಳುಗಳಿಗೆ ಸಹಾಯ ನೀಡಲು ಉತ್ತೇಜಿಸುವಂಥ ವಾತಾವರಣವನ್ನೂ ನಿರ್ಮಿಸಬೇಕು.

'ಗುಡ್ ಸಮರಿಟನ್' ಆಗಿ ಗಾಯಾಳುಗಳಿಗೆ ಸಹಾಯ ಮಾಡುವ ವ್ಯಕ್ತಿಯನ್ನು ಕಾನೂನು ಕ್ರಮಗಳಿಂದ ರಕ್ಷಿಸುವಂಥ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಮಾರ್ಗಸೂಚಿಯಲ್ಲಿ ಹೇಳಿರುವ ಅಂಶಗಳು ಇಂತಿವೆ:

ರಸ್ತೆ ಅಪಘಾತ ನಡೆದಾಗ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ ವ್ಯಕ್ತಿಯನ್ನು ಹೆಚ್ಚು ಹೊತ್ತು ಆಸ್ಪತ್ರೆಯಲ್ಲಿ ಇರುವಂತೆ ಮಾಡಬಾರದು. ವ್ಯಕ್ತಿಯಿಂದ ಆತನ ವಿಳಾಸ ಪಡೆದುಕೊಂಡು ತಕ್ಷಣವೇ ಕಳುಹಿಸಿಕೊಡಬೇಕು ಮತ್ತು ಪೊಲೀಸರು ಅಲ್ಲಿ ಆತನ ತನಿಖೆ ನಡೆಸುವಂತಿಲ್ಲ. ಗಾಯಾಳುಗಳನ್ನು ಉಪಚರಿಸಿದ ವ್ಯಕ್ತಿಗೆ ಸೂಕ್ತ ಬಹುಮಾನ ನೀಡಬೇಕು. ಆ ವ್ಯಕ್ತಿಯನ್ನು ಯಾವ ಸಿವಿಲ್ ಅಥವಾ ಕ್ರಿಮಿನಲ್ ಅಪರಾಧ ಪ್ರಕರಣಗಳಲ್ಲೂ ಹೆಸರಿಸಬಾರದು. ಅಪಘಾತ ನಡೆದ ಕುರಿತು ಪೊಲೀಸರಿಗೆ ಯಾರಾದರೂ ಕರೆ ಮಾಡಿ ಮಾಹಿತಿ ನೀಡುತ್ತಾರೆ ಎಂದಾದರೆ, ಅಂಥವರು ತಮ್ಮ ಹೆಸರು ಸೇರಿದಂತೆ ಖಾಸಗಿ ಮಾಹಿತಿಯನ್ನು ಪೊಲೀಸರಿಗೆ ನೀಡಬೇಕಾಗಿಲ್ಲ. ಮಾಹಿತಿ ನೀಡುವುದು ಸಂಪೂರ್ಣ ಐಚ್ಛಿಕವಾಗಿರಲಿದೆ. ಜೊತೆಗೆ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸುವಾಗ ತುಂಬಬೇಕಾದ ಅರ್ಜಿಯಲ್ಲಿಯೂ (ಮೆಡಿಕೊ ಲೀಗಲ್ ಕೇಸ್) ವ್ಯಕ್ತಿಯು ತನ್ನ ವೈಯಕ್ತಿಕ ಮಾಹಿತಿಯನ್ನು ನಮೂದಿಸಬೇಕಾಗಿಲ್ಲ.

ಒಂದು ವೇಳೆ, ಗಾಯಾಳುಗಳಿಗೆ ಸಹಾಯ ಮಾಡಿದ ವ್ಯಕ್ತಿಯು 'ಅಪಘಾತ ನಡೆದ ವೇಳೆ ಸ್ಥಳದಲ್ಲಿ ನಾನೂ ಇದ್ದೆ, ಅಪಘಾತಕ್ಕೆ ನಾನೇ ಸಾಕ್ಷಿ' ಎಂದು ಹೇಳಿಕೊಂಡರೆ ಆತನನ್ನು ಪೊಲೀಸರು ಒಂದೇ ಬಾರಿ ತನಿಖೆಗೆ ಒಳಪಡಿಸಬೇಕೇ ವಿನಾ ಪದೇಪದೇ ಕರೆಯುವಂತಿಲ್ಲ. 'ಗುಡ್ ಸಮರಿಟನ್' ಅನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಬಗ್ಗೆ ರಾಜ್ಯ ಸರ್ಕಾರಗಳು ನಿಯಮ ರೂಪಿಸಿಕೊಳ್ಳಬೇಕು.

'ಗುಡ್ ಸಮರಿಟನ್' ಪ್ರವೃತ್ತಿಯನ್ನು ಪ್ರೋತ್ಸಾಹಿಸುವ ಮತ್ತು ರಸ್ತೆ ಅಪಘಾತದ ಗಾಯಾಳುಗಳಿಗೆ ತಕ್ಷಣವೇ ಚಿಕಿತ್ಸೆ ಒದಗಿಸುವ ನಿಮಿತ್ತ ಕರ್ನಾಟಕ ಸರ್ಕಾರವು 'ಮುಖ್ಯಮಂತ್ರಿ ಸಾಂತ್ವನ–ಹರೀಶ್ ಯೋಜನೆ'ಯನ್ನು ಜಾರಿ ಮಾಡಿದೆ. 'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್' ಎಂಬ ಸ್ವಾಯತ್ತ ಸಂಸ್ಥೆ ಈ ಯೋಜನೆಯನ್ನು ನಿರ್ವಹಿಸುತ್ತದೆ. ಈ ಸಂಸ್ಥೆಯು ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುತ್ತದೆ.

ನೆಲಮಂಗಲದ ಸಮೀಪ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ಹರೀಶ್ ಎಂಬುವರ ನೆನಪಿನಲ್ಲಿ ಈ ಯೋಜನೆಗೆ ಹೆಸರಿಡಲಾಗಿದೆ. ಅಪಘಾತದಲ್ಲಿ ಗಾಯಗೊಂಡವರಿಗೆ ಅಪಘಾತ ಸಂಭವಿಸಿದ 48 ಗಂಟೆಗಳ ಒಳಗಾಗಿ ಈ ಯೋಜನೆ ಅಡಿಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ ಮತ್ತು ₹25 ಸಾವಿರದವರೆಗಿನ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ.


ರಸ್ತೆ ಅಪಘಾತದಲ್ಲಿ ಗಾಯಗೊಳ್ಳುವವರಿಗೆ ಸಹಾಯ ಮಾಡುವುದಕ್ಕೆ ಸಾರ್ವಜನಿಕರು ಮುಂದೆ ಬರುವಂತೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ಕ್ರಮಗಳನ್ನು ಕೈಗೊಂಡಿವೆ. ಆದರೂ ಈ ಕ್ರಮಗಳು ಸಾಲುತ್ತಿಲ್ಲ. ನಾವು ಇನ್ನಷ್ಟು ಮುಂದೆ ಸಾಗಬೇಕಾಗಿದೆ.

ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ನಾಗರಿಕ ವೇದಿಕೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸರ್ಕಾರಿ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ವಿಷಯದಲ್ಲಿ ಕೈಜೋಡಿಸಬೇಕಿದೆ. ಪ್ರತಿಯೊಬ್ಬರೂ 'ಗುಡ್ ಸಮರಿಟನ್' ಆಗುವಂಥ ವಾತಾವರಣವನ್ನು ಸೃಷ್ಟಿಸಬೇಕಿದೆ. ಅತ್ಯಮೂಲ್ಯ ಜೀವಗಳನ್ನು ರಕ್ಷಿಸಲು ಇದು ಜರೂರಾಗಿ ಆಗಬೇಕಿರುವ ಕೆಲಸವಾಗಿದೆ.

ಲೇಖಕ: ಪೊಲೀಸ್ ಮಹಾನಿರ್ದೇಶಕ
ಸಿ.ಐ.ಡಿ. ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು



ಚುರುಮುರಿ



ಗ್ರಹ ಗ್ರಹಚಾರ!

● ತುರುವೇಕೆರೆ ಪ್ರಸಾದ್

ಎಂಎಲ್‌ಎ ಗುಡ್ಡಪ್ಪನೋರು ತಲೆ ಮೇಲೆ ಕೈ ಹೊತ್ಕಂಡು ಪರಮಾಪ್ತ ಪಂಚರಂಗಿ ಜೊತೆ ತ್ವಾಟದ ಮನೇಲಿ ಎಣ್ಣೆ ಹೊಡೀತಾ ಕೂತಿದ್ರು.

'ಅಣ್ಣ, ಯಾಕೋ ಶಾನೆ ತಲೆ ಕೆಡಿಸ್ಕಂಡಿರೋ ಅಂಗದೆ' ಎಂದ ಪಂಚರಂಗಿ.

'ಮತ್ತಿನ್ನೇನ್ಲಾ? ರಾಜಕೀಯ ಪೂರಾ ಹದಗೆಟ್ಟು ಓಗದೆ' ಅಂದ್ರು ಗುಡ್ಡಪ್ಪನೋರು.

'ಸುಮ್ಕಿರಣ್ಣ ನೀನು, ಅದು ಯಾವಾಗ ನೆಟ್ಟಗಿತ್ತು ಈಗ ಹದಗೆಡೋಕೆ?'

'ಅಂಗಲ್ಲ ಕಣಲೇ, ಎಲ್ಲ ಪಕ್ಷದಾಗೂ ಕಾಳ್ಗಿಚ್ಚು, ಸುನಾಮಿ, ಚಂಡಮಾರುತ ಬೀಸ್ತಾ ಅದೆ. ಎಲ್ಲಿಂದ ಎಲ್ಲಿಗೋದ್ರೂ ಬಾಣ್ಲೆಯಿಂದ ಬೆಂಕಿಗೆ ಬಿದ್ದಂಗಾಗದೆ. ಮುಂದೆ ಎಂಗ್ಲಾ?'

'ಊ ಕಣಣ್ಣ, ಕೋರ್ ಕಮಿಟಿಗೂ ಕ್ಯಾರೇ ಅನ್ತಿಲ್ಲ. ಸರ್ಜರಿವಾಲಾರ ಕತ್ತರಿ, ರಾಧಣ್ಣನ ದಬ್ಬಳ ಎರಡೂ ಮೊಂಡಾಗವೆ. ಎಲ್ರಿಗೂ ಪಟ್ಟ ಬೇಕು, ಎಲ್ರಿಗೂ ಅಧಿಕಾರ ಬೇಕು'.

'ಅದು ಸಹಜ ಅಲ್ವೇನ್ಲಾ? ಕೋಟಿ ಕೋಟಿ ಚೆಲ್ಲಿ ಗೆದ್ದು ಬಂದ ಮೇಲೆ ಬಾಚ್ಕಬೇಡ ಅಂದ್ರೆ ಎಂಗ್ಲಾ? ಜನ ಆರ್ಸಿದ್ಮೇಲೆ, ನೀನು ಯೋಗ್ಯತೆ ಇಲ್ಲ ಅಂದ್ರೆ ಹಲ್ ಉದುರುಸ್ತಾರೆ ಮಗನೆ'.

'ಈ ಡಿನ್ನರ್ ಮೀಟಿಂಗುಗಳಿಂದಲೇ ಇಷ್ಟೆಲ್ಲಾ ಅವಾಂತರ ಆಗ್ತಿರ್ಬಹುದು ಅಂತೀರ?'

'ಅದೆಂಗ್ಲಾ ಸಾಧ್ಯ? ಹಿಂದೆ ದುಂಡು ಮೇಜಿನ ಪರಿಷತ್ತು ಅಂತ ಒಯ್ತಿರ್ಲಿಲ್ವಾ? ಈಗ ಅದು ಗುಂಡು ಮೇಜಿನ ಪರಿಷತ್ತು ಆಗದೆ. ಅದು ರಾಜಕೀಯದ ಮೇಜುವಾನಿ ಕಣ್ಲಾ?'

'ನಂಗೇನೂ ಹೊಳೀತಿಲ್ಲ, ನೀನೇ ಯೋಳಣ್ಣ'.

'ಎಲ್ಲಾ ನಮ್ ಗ್ರಾಚಾರ ಕಣ್ಲಾ. ಸೂರ್ಯ, ಚಂದ್ರ, ಭೂಮಿ ಈ ಮೂರೂ ನೇರವಾಗ್ ಬಂದು ಗ್ರಹಣ ಆದ್ರೇ ನಾವು ಅಲ್ಲಾಡೋಯ್ತೀವಿ. ಇನ್ನು ಏಳು ಗ್ರಹ ಲೈನಾಗಿ ಬಂದ್ರೆ ಹುಡುಗಾಟನೇನ್ಲಾ? ಬುಧ, ಶುಕ್ರ, ಶನಿ, ಗುರು ಇಂಗೆ 7 ಗ್ರಹ ನೇರ ಬಂದು ಕುಂತವಂತೆ. ಅದಕ್ಕೇ ರಾಜಕೀಯದಲ್ಲಿ ಈ ಪಾಟಿ ಅಲ್ಲೋಲ ಕಲ್ಲೋಲ ಆಯ್ತಿರೋದು'.

'ಅಂಗಾರೆ ಇನ್ನೆರಡು ಗ್ರಹ ಏನ್ ಮಾಡ್ತಾವೆ?'

'ರಾಹು ಕೇತು ಅಂತ ನಮ್ ಜ್ಯೋತಿಷಿಗಳು ಅವನ್ನ ಜನರ ಹೆಗಲ ಮೇಲೆ ಕೂರ್‍ಸ್ತಾರೆ ಕಣ್ಲಾ' ಎಂದು ನಕ್ಕರು ಗುಡ್ಡಪ್ಪನೋರು.

ಪಂಚರಂಗಿ ತಲೆ ಚಚ್ಚಿಕೊಂಡ.

ಸಂಗತ

ಉನ್ನತ ಶಿಕ್ಷಣ: ಬೇಕಾಗಿರುವುದೇನು?

ರಾಜ್ಯದಲ್ಲಿ ವಿಶ್ವವಿದ್ಯಾಲಯ ಅಥವಾ ಕಾಲೇಜುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವುದರಿಂದ ಮಾತ್ರವೇ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚುವುದಿಲ್ಲ

● ಗಾನಶ್ರುತಿ ಎಂ.ಕೆ.

ರಾಜ್ಯದಲ್ಲಿ ಬಜೆಟ್ ಸಿದ್ಧಪಡಿಸುವ ಕೆಲಸ ನಡೆಯುತ್ತಿದೆ. ಬೇರೆ ಬೇರೆ ವಲಯಗಳ ಜನರ ನಿರೀಕ್ಷೆಗಳು ಬೇರೆ ಬೇರೆ ಇರುತ್ತವೆ. ಈ ಬಾರಿಯ ಬಜೆಟ್‌ನಿಂದ ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರವು ಏನನ್ನು ನಿರೀಕ್ಷಿಸಬಹುದು?

ಕೆಲ ವರ್ಷಗಳಿಂದ ರಾಜ್ಯದ ಬಜೆಟ್‌ಗಳು ಪ್ರಮುಖವಾಗಿ ಹೊಸ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಒತ್ತು ನೀಡಿವೆ. ಸಿದ್ದರಾಮಯ್ಯ ನೇತೃತ್ವದ ಈ ಹಿಂದಿನ ಅವಧಿಯ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ರಾಯಚೂರು ಜಿಲ್ಲೆಯಲ್ಲಿ ಹಾಗೂ ಬೀದರ್ ಜಿಲ್ಲೆಯಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಪ್ರಸ್ತಾಪ ಮಾಡಿತ್ತು. ನಂತರ ಆಡಳಿತದ ಚುಕ್ಕಾಣಿ ಬಿಜೆಪಿ ಕೈಗೆ ಬಂದಿತು. ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ಬಜೆಟ್‌ನಲ್ಲಿ ಏಳು ಹೊಸ ವಿಶ್ವವಿದ್ಯಾಲಯಗಳನ್ನು (ಬೀದರ್, ಚಾಮರಾಜನಗರ, ಕೊಡಗು, ಹಾಸನ, ಕೊಪ್ಪಳ, ಬಾಗಲಕೋಟೆ ಹಾಗೂ ಹಾವೇರಿ) ಸ್ಥಾಪಿಸುವುದಾಗಿ ಘೋಷಿಸಲಾಗಿತ್ತು. ಈಗ ಕರ್ನಾಟಕವು ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರದ ನಂತರ, ಅತಿಹೆಚ್ಚು ಕಾಲೇಜುಗಳನ್ನು ಹೊಂದಿರುವ ದೇಶದ ಮೂರನೇ ರಾಜ್ಯವಾಗಿದೆ. ಹಾಗಾಗಿ, ಅನೇಕ ಹಿಂದುಳಿದ, ಗ್ರಾಮೀಣ ಬಡಜನರ ಮೊದಲ ತಲೆಮಾರಿನ ಯುವಜನ, ಉನ್ನತ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಲು ಅನುಕೂಲವಾಗಿದೆ.

ಆದರೆ ಬರೀ ವಿಶ್ವವಿದ್ಯಾಲಯ ಅಥವಾ ಕಾಲೇಜುಗಳ ಸ್ಥಾಪನೆಯಿಂದ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚುತ್ತದೆಯೇ? ಇದಕ್ಕೆ ಅನುಗುಣವಾಗಿ ಸಿಬ್ಬಂದಿ ವರ್ಗವೂ ಬೇಕಲ್ಲವೇ? ರಾಜ್ಯದ ಹಲವಾರು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಬಹಳಷ್ಟು ವರ್ಷಗಳಿಂದ ಕಾಯಂ ಉಪನ್ಯಾಸಕರಿಲ್ಲದೆ, ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಲಾಗಿದೆ. ಈ ಸಮಸ್ಯೆಯನ್ನು ತಕ್ಕಮಟ್ಟಿಗೆ ನೀಗಿಸಲು, ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1,298 ಸಹಾಯಕ ಪ್ರಾಧ್ಯಾಪಕರನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಿಸಿತು. ನಂತರ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಈ ಸಂಬಂಧದ ನೇಮಕಾತಿ ಪ್ರಕ್ರಿಯೆ ಇತ್ತೀಚೆಗೆ ಪೂರ್ಣಗೊಂಡಿದೆ. ಸರ್ಕಾರದ ಈ ನಡೆ ಶ್ಲಾಘನೀಯ. ಆದರೆ ರಾಜ್ಯದ ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ಕಾಯಂ ಉಪನ್ಯಾಸಕರೇ ಇಲ್ಲದಿರುವುದರಿಂದ, ನೇಮಕಾತಿ ಪ್ರಕ್ರಿಯೆಯ ಬಗ್ಗೆ ಈ ಬಾರಿಯ ಬಜೆಟ್ ಗಮನಹರಿಸುವುದು ಸೂಕ್ತ ಎನಿಸುತ್ತದೆ.

ಎರಡನೆಯದಾಗಿ, ಉನ್ನತ ಶಿಕ್ಷಣ ಸಂಸ್ಥೆಗಳು ಎಷ್ಟರಮಟ್ಟಿಗೆ ಮೂಲ ಸೌಕರ್ಯಗಳನ್ನು ಹೊಂದಿವೆ ಎಂಬುದು ಮುಖ್ಯವಾಗುತ್ತದೆ. ಸ್ವಂತ ಕಟ್ಟಡ, ತರಗತಿ ಕೊಠಡಿಗಳು, ಆಟದ ಮೈದಾನ, ಶೌಚಾಲಯ, ಗ್ರಂಥಾಲಯ, ಕಂಪ್ಯೂಟರ್ ಕೇಂದ್ರ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಳ ಕೊರತೆ ಇದೆ. ಹಿರಿಮೆ- ಗರಿಮೆ ಯೋಜನೆಯಿದ್ದರೂ ನಮ್ಮ ಗ್ರಾಮೀಣ ಪ್ರದೇಶಗಳ ಕಾಲೇಜುಗಳು ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಅನೇಕ ಕಾಲೇಜುಗಳು ಮೂಲ ಸೌಕರ್ಯ ಕೊರತೆಯಿಂದ ಬಳಲುತ್ತಿವೆ.

ಈ ಹಿಂದಿನ ಸರ್ಕಾರವು ಆನ್‌ಲೈನ್ ಕಲಿಕೆಯನ್ನು ಪ್ರೋತ್ಸಾಹಿಸಲು ಉಚಿತ ಲ್ಯಾಪ್‌ಟಾಪ್‌ಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ವಿತರಿಸಿತ್ತು. ಬಿ.ಎಸ್.ಯಡಿಯೂರಪ್ಪ ಅವರ ಅಧಿಕಾರ ಅವಧಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಡಿಜಿಟಲೀಕರಣಕ್ಕೆ ಒತ್ತು ನೀಡಲಾಗಿತ್ತು. ಅಂದರೆ ಸ್ಮಾರ್ಟ್ ತರಗತಿಗಳು, ಕಲಿಕಾ ನಿರ್ವಹಣಾ ವ್ಯವಸ್ಥೆಯು (ಎಲ್‌ಎಂಎಸ್) ಕೋವಿಡ್ ಸಮಯದಲ್ಲಿ ಬಹಳಷ್ಟು ಮಹತ್ವ ಪಡೆಯಿತು. ಶಿಕ್ಷಣದ ಡಿಜಿಟಲೀಕರಣ ರಾಜ್ಯದ ಹೆಮ್ಮೆ ಎನಿಸಿದರೂ ಇದಕ್ಕೆ ಭಾಷಾ ಕಲಿಕೆಯೂ ಬಹಳ ಮುಖ್ಯವಾಗಿರುತ್ತದೆ. ಇನ್ನು ನಮ್ಮ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆ ಕಬ್ಬಿಣದ ಕಡಲೆಯಂತೆ ಆಗಿರುತ್ತದೆ. ವಿದ್ಯಾರ್ಥಿಗಳು ಈ ಸವಾಲನ್ನು ಎದುರಿಸಲು ಅನುವಾಗುವಂತೆ ಈ ಭಾಗಗಳಲ್ಲಿ ಸ್ವಯಂಸೇವಾ ಸಂಸ್ಥೆಗಳು ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಕೈಜೋಡಿಸುವಂತೆ ಮಾಡಬಹುದು.

ಉನ್ನತ ಶಿಕ್ಷಣದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಯು ನಿರ್ಣಾಯಕ ಅಂಶವಾಗಿದ್ದರೂ ಈ ಕ್ಷೇತ್ರಕ್ಕೆ ಬಜೆಟ್ ಹೆಚ್ಚು ಒತ್ತು ನೀಡುತ್ತಿಲ್ಲ. ಸಂಶೋಧನೆ ಯಾವುದೇ ವಲಯದ ಪ್ರಗತಿಗೆ ಬೆನ್ನೆಲುಬಾಗಿರುತ್ತದೆ. ಬಜೆಟ್‌ನಲ್ಲಿ ಸಂಶೋಧನೆಯ ಕಡೆಗೂ ಸರ್ಕಾರ ಹೆಚ್ಚಿನ ಒಲವು ತೋರಿಸಬೇಕಾಗಿದೆ. 2024- 25ರ ಮುಂಗಡ ಪತ್ರದಲ್ಲಿ ₹ 10 ಕೋಟಿ ಘೋಷಿಸಲಾಗಿದೆ ಯಾದರೂ ಈ ಸಲ ಅನುದಾನವನ್ನು ಹೆಚ್ಚಿಸುವ ನಿರೀಕ್ಷೆ ಹೊಂದಲಾಗಿದೆ.



ಕಲ್ಯಾಣ ಕರ್ನಾಟಕ ಭಾಗದ ಉನ್ನತ ಶಿಕ್ಷಣಕ್ಕೆ ಸರ್ಕಾರವು ಈ ಸಲದ ಬಜೆಟ್‌ನಲ್ಲಿ ಹೆಚ್ಚಿನ ಒಲವು ತೋರಿದರೆ ಇನ್ನಷ್ಟು ಕ್ಷೇತ್ರಾಭಿವೃದ್ಧಿ ಆಗಬಹುದು. ಹಿಂದಿನ ಸಾಲಿನಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿನ ಹಾಸ್ಟೆಲ್ ಸ್ಥಾಪಿಸಲು ಮುಖ್ಯಮಂತ್ರಿಯವರು ₹ 116 ಕೋಟಿ ಘೋಷಿಸಿದ್ದರು. ಅದೇ ರೀತಿ ಕಲ್ಯಾಣ ಕರ್ನಾಟಕದ ಕಾಲೇಜುಗಳಿಗೂ ಹಾಸ್ಟೆಲ್ ವ್ಯವಸ್ಥೆಯನ್ನು ಕಲ್ಪಿಸಿದರೆ ಈ ಪ್ರದೇಶದ ಅಭಿವೃದ್ಧಿ ಆಗುವುದರ ಜೊತೆಗೆ ಗ್ರಾಮೀಣ ಭಾಗದ ಹೆಣ್ಣುಮಕ್ಕಳ ಶಿಕ್ಷಣಕ್ಕೂ ಅನುಕೂಲವಾಗುತ್ತದೆ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ಅರ್ಥಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲಸೂರು, ಬೀದರ್ ಜಿಲ್ಲೆ

ವಾಚಕರ ವಾಣಿ

ಮಾಹಿತಿ ಹಕ್ಕು: ಮೂಲ ಉದ್ದೇಶ ಎತ್ತಿಹಿಡಿಯಬೇಕಿದೆ

ಮಾಹಿತಿ ಹಕ್ಕು ಅಧಿನಿಯಮದಡಿ, ಸಾರ್ವಜನಿಕ ಹಿತಾಸಕ್ತಿ ಇಲ್ಲದೇ ಇದ್ದರೂ ವೈಯಕ್ತಿಕ ಹಿತಾಸಕ್ತಿಗಾಗಿ ಅರ್ಜಿಗಳನ್ನು ಸಲ್ಲಿಸುತ್ತಾ, ಮಾಹಿತಿ ಆಯೋಗದ ಅಮೂಲ್ಯ ಸಮಯ ವ್ಯರ್ಥವಾಗುವಂತೆ ಮಾಡುವ ಪರಿಪಾಟ ರಾಜ್ಯದಲ್ಲಿ ಇತ್ತೀಚೆಗೆ ಹೆಚ್ಚುತ್ತಿದೆ. ಮಾಹಿತಿ ಕೋರಿ ಸಲ್ಲಿಕೆಯಾಗುವ ಅರ್ಜಿಯ ಶುಲ್ಕ ಬರೀ ₹ 10 ಇರುವುದು ಸಹ ಈ ಕಾಯ್ದೆಯ ದುರ್ಬಳಕೆಗೆ ಒಂದು ಪ್ರಮುಖ ಕಾರಣವಾಗಿರಬಹುದು. ಆದ್ದರಿಂದ ಆಯೋಗವು ಅರ್ಜಿ ಶುಲ್ಕವನ್ನು ಕನಿಷ್ಠ ₹ 100ಕ್ಕೆ ಹೆಚ್ಚಿಸಿ, ಕನಿಷ್ಠ 10 ಪುಟಗಳ ಮಾಹಿತಿಯನ್ನು ಉಚಿತವಾಗಿ ಒದಗಿಸಲು ಆದೇಶಿಸಬೇಕು. ಇದರಿಂದ ಕಾಯ್ದೆಯ ದುರ್ಬಳಕೆಯನ್ನು ಸ್ವಲ್ಪಮಟ್ಟಿಗೆ ತಡೆಯಬಹುದು. 10 ಪುಟಗಳ ಮಾಹಿತಿಯನ್ನು ಉಚಿತವಾಗಿ ಒದಗಿಸುವ ಉದ್ದೇಶವೆಂದರೆ, ಕೆಲ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮೂರ್ನಾಲ್ಕು ಪುಟಗಳ ಮಾಹಿತಿ ಇದ್ದರೂ ಅದಕ್ಕೆ ತಗಲುವ ವೆಚ್ಚ ₹ 6-8 ಅನ್ನು ಪಾವತಿಸಿ ಎಂದು ಹಿಂಬರಹವನ್ನು ₹ 40ರ ಅಂಚೆ ಮೂಲಕ ಕಳುಹಿಸುತ್ತಾರೆ!

ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಕೂಡ ಸಾರ್ವಜನಿಕ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟು ಅರ್ಜಿಗಳನ್ನು ಪರಿಶೀಲಿಸಿ, ನಿಗದಿತ ಅವಧಿಯೊಳಗೆ ಮಾಹಿತಿ ಒದಗಿಸಿ ಕಾಯ್ದೆಯ ಮೂಲ ಉದ್ದೇಶವನ್ನು ಎತ್ತಿಹಿಡಿಯಬೇಕಿದೆ.

ನಯನ ಮಧು, ನಾರನಹಳ್ಳಿ, ದೊಡ್ಡಬಳ್ಳಾಪುರ

ಜನಸ್ನೇಹಿ ಮಾಧ್ಯಮ: ದುಃಸ್ಥಿತಿಗೆ ತಂದದ್ದು ದುರ್ದೈವ

ಶಿಕ್ಷಣ, ಮನರಂಜನೆ ಮತ್ತು ಸಾರ್ವಜನಿಕ ಸಂವಹನ ವಾಹಿನಿಗಳಾಗಿ ದೇಶದಲ್ಲಿ ಆಕಾಶವಾಣಿ ಹಾಗೂ ದೂರದರ್ಶನ ಹಲವು ಮಿತಿಗಳ ನಡುವೆಯೂ ಒಳ್ಳೆಯ ಕೆಲಸ ಮಾಡುತ್ತಾ ಬಂದಿವೆ. ಆದರೆ ಅವುಗಳನ್ನು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲಾಗದಂತಹ ಸ್ಥಿತಿಗೆ ತಂದಿರುವುದು ಅತ್ಯಂತ ನೋವಿನ ಸಂಗತಿ. ದಶಕಗಳಿಂದ ಖಾಲಿ ಇರುವ ಹುದ್ದೆಗಳನ್ನು ತುಂಬದಿರುವುದೂ ಅದರ ಭಾಗವಾಗಿದೆ. ಅದಕ್ಕೆ ಕೇಂದ್ರ ಸಚಿವರು ಕೊಟ್ಟಿರುವ ಕಾರಣವಾದರೂ ತಮ್ಮ ಕೈಯಲ್ಲಿನ ಕೆಸರನ್ನು ತಾವೇ ಮುಖಕ್ಕೆ ಮೆತ್ತಿಕೊಂಡಂತೆ ಇದೆ.

ಈ ಸಂಬಂಧ ಬಸವರಾಜ ಸಾದರ ಅವರು ಲೇಖನದಲ್ಲಿ (ಪ್ರ.ವಾ., ಜ. 22) ವಿವರಿಸಿರುವ ಮಾಹಿತಿ ಪೂರಕವಾಗಿದೆ. ಇಂತಹ ಧೋರಣೆಯನ್ನು ಹೊಂದಿರುವ ಸರ್ಕಾರದಿಂದ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ?

ಜಿ.ಎನ್.ಮಲ್ಲಿಕಾರ್ಜುನಪ್ಪ, ಚಿತ್ರದುರ್ಗ

ನಕಲಿ ಔಷಧ: ತ್ವರಿತ ಕ್ರಮ ಜರುಗಿಸಿ

ಕೆಲವು ಪ್ರತಿಷ್ಠಿತ ಔಷಧ ಕಂಪನಿಗಳ ಹೆಸರು ಬಳಸಿಕೊಂಡು ನಕಲಿ ಔಷಧಗಳನ್ನು ತಯಾರಿಸುವ, ಮಾರಾಟ ಮಾಡುವ ಸುದ್ದಿಯನ್ನು (ಪ್ರ.ವಾ., ಜ. 22) ಓದಿ ದಿಗ್ಭ್ರಮೆಯಾಯಿತು. ಜೀವಸಂಜೀವಿನಿಯಾದ ಅಸಲಿ ಔಷಧಗಳ ರೂಪದಲ್ಲಿ ನಕಲಿ ಔಷಧಗಳು ಜನರ ಕೈಸೇರಿ ಅವರ ಪ್ರಾಣದ ಜೊತೆ ಆಟವಾಡುತ್ತಿರುವುದು ಶೋಚನೀಯ.

ಕಾಯಿಲೆಪೀಡಿತರು ತಮ್ಮ ಕಾಯಿಲೆ ಗುಣವಾಗುವುದೆಂದು ಭಾವಿಸಿ ಔಷಧ ಮತ್ತು ವೈದ್ಯರ ಮೇಲೆ ನಂಬಿಕೆ ಇಟ್ಟು, ನಕಲಿ ಔಷಧಗಳನ್ನು ಸೇವಿಸಿ ಆರೋಗ್ಯವಂಚಿತರಾಗುತ್ತಿದ್ದಾರೆ. ಅಂತಹ ನಕಲಿ ಔಷಧಗಳನ್ನು ತಯಾರಿಸುವ ಕಂಪನಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು, ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ನಕಲಿ ಔಷಧಗಳನ್ನು ವಶಪಡಿಸಿಕೊಳ್ಳುವುದು ಮತ್ತು ಈ ದಿಸೆಯಲ್ಲಿ ಗ್ರಾಹಕರನ್ನು ಜಾಗೃತಗೊಳಿಸುವ ಕಾರ್ಯಗಳು ಔಷಧ ನಿಯಂತ್ರಣ ಇಲಾಖೆಯಿಂದ ತ್ವರಿತವಾಗಿ ಆಗಬೇಕಾಗಿದೆ.

ಎಲ್.ಚಿನ್ನಪ್ಪ, ಬೆಂಗಳೂರು

ರಾಜ್ಯಕ್ಕೆ ರೈಲು ಸೌಲಭ್ಯ: ಹಳಿ ತಪ್ಪದಿರಲಿ

ಬಜೆಟ್ ಮಂಡನೆ ದಿನ ಹತ್ತಿರವಾಗುತ್ತಿದ್ದಂತೆ ಕರ್ನಾಟಕದಲ್ಲಿ ರೈಲು ಸೌಲಭ್ಯ ನಿರೀಕ್ಷೆಯಷ್ಟು ಇಲ್ಲ ಎನ್ನುವ ಮಾತು ಕೇಳಿಬರುವುದು, ಬಳಿಕ ಅಷ್ಟೇ ವೇಗದಲ್ಲಿ ಅದು ಮರೆತುಹೋಗುವುದು ತೀರಾ ಮಾಮೂಲು. ಇತರ ರಾಜ್ಯಗಳಲ್ಲಿ ಇರುವಷ್ಟು ರೈಲು ಸೌಲಭ್ಯ ನಮ್ಮಲ್ಲಿ ಇಲ್ಲದಿರುವುದು ಎಷ್ಟು ಸತ್ಯವೋ ಇದಕ್ಕೆ ರಾಜ್ಯ ಸರ್ಕಾರ ಮತ್ತು ನಮ್ಮ ಜನಪ್ರತಿನಿಧಿಗಳು ಕಾರಣ ಎನ್ನುವುದೂ ಅಷ್ಟೇ ಸತ್ಯ. ಕರ್ನಾಟಕಕ್ಕೆ ಹೊಸ ರೈಲು ಯೋಜನೆಗಳು ಮಂಜೂರಾಗುವುದೇ ದುಸ್ತರ, ಹಾಗೆಯೇ ಮಂಜೂರಾದ ಯೋಜನೆಗಳ ಬಗ್ಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ನಿಗಾ ವಹಿಸದೆ, ಪರಿಸರ ಹಾಗೂ ಭೂಸ್ವಾಧೀನದ ಹೆಸರಿನಲ್ಲಿ ಹಳಿ ತಪ್ಪುತ್ತಿರುವುದು ತೀರಾ ಸಾಮಾನ್ಯ.

ಹಿಂದೆ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಅಡಿಗಲ್ಲು ಹಾಕಿದ್ದ ಹುಬ್ಬಳ್ಳಿ- ಅಂಕೋಲಾ ರೈಲು ಯೋಜನೆಯು ಪರಿಸರ ಸಂಬಂಧಿ ಕಾರಣದಿಂದ ಹಳಿ ಏರಲಿಲ್ಲ. ಪ್ರಲ್ಹಾದ ಜೋಶಿ ಮತ್ತು ಅನಂತಕುಮಾರ ಹೆಗಡೆ ಅವರು ಹಲವು ಬಾರಿ ಸಂಸದರಾದರೂ ಈ ಯೋಜನೆಗೆ ತಾರ್ಕಿಕ ಅಂತ್ಯ ಕಾಣಿಸಲು ಸಾಧ್ಯವಾಗಲಿಲ್ಲ. 2010ರಲ್ಲಿ ಮಂಜೂರಾದ ತುಮಕೂರು- ದಾವಣಗೆರೆ ಮತ್ತು ಸುರೇಶ್ ಅಂಗಡಿ ಅವರು ರೈಲ್ವೆ ಸಚಿವರಾಗಿದ್ದಾಗ ಮಂಜೂರಾದ ಧಾರವಾಡ- ಬೆಳಗಾವಿ ರೈಲು ಯೋಜನೆಗೆ ಭೂಸ್ವಾಧೀನ ಕಾರ್ಯವೇ ಮುಗಿದಿಲ್ಲ. ದುರ್ದೈವವೆಂದರೆ, ಕೇಂದ್ರ ಸರ್ಕಾರ ಮಂಜೂರು ಮಾಡಿದ ರೈಲು ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರ ಒಬ್ಬ ಅಧಿಕಾರಿಯನ್ನೂ ನೇಮಿಸಿಲ್ಲ. ಮಲ್ಲಿಕಾರ್ಜುನ ಖರ್ಗೆ ಅವರು ರೈಲ್ವೆ ಸಚಿವರಾಗಿದ್ದಾಗ ಮಂಜೂರಾದ ಗುಲ್ಬರ್ಗಾ ರೈಲು ವಿಭಾಗ ಆರಂಭವಾಗಲೇ ಇಲ್ಲ. ಈಗಷ್ಟೇ ಅದರ ಬಗೆಗೆ ಸ್ಥಳೀಯರು ಹೋರಾಟ ಆರಂಭಿಸಿದ್ದಾರೆ. ಹಳಿ ಏರದ ಮತ್ತು ಹಳಿ ತಪ್ಪುತ್ತಿರುವ ರಾಜ್ಯದ ರೈಲು ಯೋಜನೆಗಳ ಸಂಕಟವನ್ನು ಯಾರಿಗೆ ಹೇಳಬೇಕು?

ರಮಾನಂದ ಶರ್ಮಾ, ಬೆಂಗಳೂರು

ಅಪಘಾತ: ಸಾಂತ್ವನದೊಂದಿಗೆ ಬೇಕು ಸಹಾಯ

ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಲಾರಿಯೊಂದು ಉರುಳಿಬಿದ್ದು, ವಾರದ ಸಂತೆಯಲ್ಲಿ ಹಣ್ಣು, ತರಕಾರಿ ಮಾರಾಟ ಮಾಡಲು ಹೊರಟಿದ್ದ 10 ಮಂದಿ ಸಾವನ್ನಪ್ಪಿರುವ ಸುದ್ದಿಯನ್ನು (ಪ್ರ.ವಾ., ಜ. 23) ಓದಿ ಆಘಾತವಾಯಿತು. ಈ ದಾರುಣ ಪ್ರಕರಣ, ಆರ್ಥಿಕ ಅಸಮಾನತೆಯಿಂದ ಸಂಕಷ್ಟ ಅನುಭವಿಸುತ್ತಿರುವವರ ನಿತ್ಯದ ಬದುಕಿನ ಹೋರಾಟಗಳಿಗೆ ನಿದರ್ಶನದಂತಿದೆ. ಸತ್ತವರ ಕುಟುಂಬಗಳ ನೋವಿಗೆ ಸ್ಪಂದಿಸುವ ಕೆಲಸ ಶೀಘ್ರವೇ ಆಗಬೇಕು. ಸಾಮಾಜಿಕ ನ್ಯಾಯ ಮತ್ತು ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ತಕ್ಷಣದ ಕ್ರಮ ಕೈಗೊಳ್ಳಬೇಕು. ಜೊತೆಗೆ ಸಹೃದಯರು, ಸಮುದಾಯದ ಸದಸ್ಯರು ಸಹ ನೊಂದ ಕುಟುಂಬಗಳಿಗೆ ಸಹಾಯ ಮಾಡುವ ಉದಾರ ಗುಣ ತೋರಬೇಕು.

ಪೂಜಾ ಸಿಂಗೆ, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಟ್ರಂಪ್ ಪೌರತ್ವ ನೀತಿ ಭಾರತೀಯರ ಕನಸಿಗೆ ಕೊಳ್ಳಿ

ನಿರೀಕ್ಷಿಸಿದಂತೆಯೇ ಆಗಿದೆ; ಎರಡನೆಯ ಬಾರಿಗೆ ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ತಕ್ಷಣವೇ ವಲಸಿಗರಿಗೆ ಪ್ರತಿಕೂಲವೆನಿಸುವ ನಿಯಮ ತಂದಿದ್ದಾರೆ. ಅಮೆರಿಕದಲ್ಲಿ ವಲಸಿಗರಿಗೆ ಜನಿಸಿದ ಮಕ್ಕಳಿಗೆ ಇನ್ನು ಮುಂದೆ ತನ್ನಿಂದ ತಾನೇ ಪೌರತ್ವ ಲಭ್ಯವಾಗುವುದಿಲ್ಲ ಎಂದು ಕಾರ್ಯಾದೇಶ ಹೊರಡಿಸಿದ್ದಾರೆ. ಇದರಿಂದ ಅಮೆರಿಕದಲ್ಲಿ ನೆಲಸಿರುವ ವಲಸಿಗರಲ್ಲಿ ತಲ್ಲಣ ಉಂಟಾಗಿದೆ. ಭಾರತದ ಲಕ್ಷಾಂತರ ವಲಸಿಗರ ಮೇಲೂ ಟ್ರಂಪ್ ನಿರ್ಧಾರ ಪರಿಣಾಮ ಬೀರಲಿದೆ. ಅಮೆರಿಕದ ಒಳಗೂ ಇದಕ್ಕೆ ವಿರೋಧ ವ್ಯಕ್ತವಾಗಿದೆ. ಟ್ರಂಪ್ ಅವರ ಈ ನಿಯಮ ಜಾರಿಗೆ ಬರುವುದರ ಬಗ್ಗೆ ಅನುಮಾನವೂ ಇದೆ

ಪ್ರಜಾವಾಣಿ ವಾರ್ತೆ


ಅಮೆರಿಕ ಸಂವಿಧಾನದ 14ನೇ ತಿದ್ದುಪಡಿಯು ದೇಶದಲ್ಲಿ ಜನಿಸಿದ ಮಕ್ಕಳಿಗೆ ಪೌರತ್ವ ನೀಡುತ್ತದೆ. ಅಮೆರಿಕದಲ್ಲಿ ನೆಲಸಿರುವ ಅಕ್ರಮ ವಲಸಿಗರ ಮಕ್ಕಳಿಗೂ ಇದು ಅನ್ವಯವಾಗುತ್ತದೆ ಎಂದು ಇದುವರೆಗೆ ವ್ಯಾಖ್ಯಾನಿಸಲಾಗುತ್ತಿತ್ತು. ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ತಕ್ಷಣವೇ ಈ ಕಾನೂನಿನ ವ್ಯಾಖ್ಯಾನವನ್ನು ಬದಲಿಸಿರುವ ಡೊನಾಲ್ಡ್ ಟ್ರಂಪ್ ಅವರು, ಫೆ.20ರ ನಂತರ ಅಕ್ರಮ ವಲಸಿಗರಿಗೆ ಮತ್ತು ಅಮೆರಿಕದ ನಾಗರಿಕರಲ್ಲದವರಿಗೆ ಹುಟ್ಟುವ ಮಕ್ಕಳಿಗೆ ಪೌರತ್ವ ನೀಡಲಾಗದು ಎಂದು ಘೋಷಿಸಿದ್ದಾರೆ. ದೇಶದಲ್ಲಿ ಅಕ್ರಮವಾಗಿ ನೆಲಸಿರುವ ಪೋಷಕರಿಗೆ ಹುಟ್ಟಿದ ಮಕ್ಕಳಿಗೆ ಮತ್ತು ತಾತ್ಕಾಲಿಕವಾಗಿ ಕಾನೂನುಬದ್ಧವಾಗಿ ಅಮೆರಿಕಕ್ಕೆ ಬಂದಿರುವವರಿಗೆ ದೇಶದಲ್ಲಿ ಹುಟ್ಟುವ ಮಕ್ಕಳಿಗೆ ಪೌರತ್ವವನ್ನು ಖಾತರಿಪಡಿಸುವಂಥ ದಾಖಲೆಗಳನ್ನು (ಸಾಮಾಜಿಕ ಭದ್ರತಾ ಕಾರ್ಡ್, ಪಾಸ್‌ಪೋರ್ಟ್) ವಿತರಿಸಬಾರದು ಎಂದು ಅಧಿಕಾರಿಗಳಿಗೆ ಟ್ರಂಪ್ ಕಾರ್ಯಾದೇಶ ಹೊರಡಿಸಿದ್ದಾರೆ.


ಅಕ್ರಮ ವಲಸಿಗರೊಂದಿಗೆ ಅವರ ಮಕ್ಕಳನ್ನೂ (ಅಮೆರಿಕದಲ್ಲಿ ಹುಟ್ಟಿದ್ದರೂ) ದೇಶದಿಂದ ಹೊರಹಾಕಲು ತಾನು ಬಯಸುವುದಾಗಿ ಟ್ರಂಪ್ 2024ರ ಡಿಸೆಂಬರ್‌ನಲ್ಲಿ ಹೇಳಿದ್ದರು. 'ನಾನು ಕುಟುಂಬಗಳನ್ನು ಒಡೆಯಲು ಪ್ರಯತ್ನಿಸುವುದಿಲ್ಲ. ಹಾಗಾಗಿ ಪೋಷಕರೊಂದಿಗೆ ಮಕ್ಕಳನ್ನೂ ದೇಶದಿಂದ ಹೊರಗೆ ಕಳಿಸುವುದು ನನಗಿರುವ ಏಕೈಕ ದಾರಿ' ಎಂದಿದ್ದರು.


ಅಮೆರಿಕ ಸಂವಿಧಾನಕ್ಕೆ 1865ರಲ್ಲಿ 13ನೇ ತಿದ್ದುಪಡಿಯನ್ನು ತಂದು, ಗುಲಾಮ ಪದ್ಧತಿಯನ್ನು ನಿಷೇಧಿಸಲಾಯಿತು. ಕ್ರೂರ ಪದ್ಧತಿಯಿಂದ ಮುಕ್ತರಾದ, ಅಮೆರಿಕದಲ್ಲಿ ಹುಟ್ಟಿದ ಮಾಜಿ ಗುಲಾಮರ ಪೌರತ್ವದ ಪ್ರಶ್ನೆ ಉದ್ಭವಿಸಿತು. ಅದಕ್ಕಾಗಿ, 1868ರಲ್ಲಿ ಅಮೆರಿಕದ ಸಂವಿಧಾನಕ್ಕೆ 14ನೇ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿಯ ವ್ಯಾಪ್ತಿಗೆ ದೇಶದ ಪೌರತ್ವ ಪಡೆಯದ ಪೋಷಕರ ಮಕ್ಕಳೂ ಸೇರಲು ಕಾರಣವಾಗಿದ್ದು ವೊಂಗ್ ಕಿಮ್ ಆರ್ಕ್ ಎನ್ನುವ ಚೀನಾ ಮೂಲದ ವಲಸಿಗರ ಮಗ.

24 ವರ್ಷದ ವೊಂಗ್, ಚೀನಾದಿಂದ ಅಮೆರಿಕಕ್ಕೆ ವಲಸೆ ಹೋಗಿದ್ದ ಪೋಷಕರಿಗೆ ಅಮೆರಿಕದಲ್ಲೇ ಹುಟ್ಟಿದ ಮಗ. ಆತ ಒಮ್ಮೆ ಕಾರ್ಯನಿಮಿತ್ತ ಚೀನಾಕ್ಕೆ ಭೇಟಿ ನೀಡಿ ಮತ್ತೆ ಅಮೆರಿಕಕ್ಕೆ ವಾಪಸ್ ಹೋದಾಗ, ಅಲ್ಲಿನ ವಲಸೆ ಅಧಿಕಾರಿಗಳು ದೇಶದೊಳಗೆ ಪ್ರವೇಶ ಮಾಡಲು ಆತನಿಗೆ ಅನುಮತಿ ನೀಡಲಿಲ್ಲ. ಅದನ್ನು ಅಲ್ಲಿನ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ ವೊಂಗ್, ತಾನು ಅಮೆರಿಕದಲ್ಲಿಯೇ ಹುಟ್ಟಿರುವುದರಿಂದ, ಸಂವಿಧಾನದ 14ನೇ ತಿದ್ದುಪಡಿಯ ಅನ್ವಯ ತನ್ನ ಪೋಷಕರ ವಲಸೆ ಸ್ಥಿತಿಗತಿ ಮುಖ್ಯವಾಗುವುದಿಲ್ಲ ಎಂದು ವಾದ ಮಂಡಿಸಿದ. 1898ರ ವೊಂಗ್ ಕಿಮ್ ಆರ್ಕ್ ಮತ್ತು ಯುನೈಟೆಡ್ ಸ್ಟೇಟ್ಸ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ವಲಸಿಗರಿಗೆ ಹುಟ್ಟುವ ಮಕ್ಕಳಿಗೂ ಪೌರತ್ವ ನೀಡಬೇಕು ಎಂದು ತೀರ್ಪು ನೀಡಿತು. ಅಂದಿನಿಂದ ವಲಸಿಗರ ವರ್ಣ ಮತ್ತು ಪೋಷಕರ ವಲಸೆಯ ಸ್ಥಿತಿಗತಿಯನ್ನು ಪರಿಗಣಿಸದೆಯೇ ಅಮೆರಿಕದಲ್ಲಿ ಹುಟ್ಟುವ ಮಕ್ಕಳಿಗೆ ಪೌರತ್ವ ಸಿಗತೊಡಗಿತು.









ಆದೇಶ ಜಾರಿ ಸುಲಭವಲ್ಲ

ಸುಮಾರು ಒಂದೂವರೆ ಶತಮಾನದಿಂದ ದೇಶದಲ್ಲಿ ಅಸ್ತಿತ್ವದಲ್ಲಿರುವ ಸಾಂವಿಧಾನಿಕ ನಿಯಮವನ್ನು ಟ್ರಂಪ್ ಅವರು ಆಡಳಿತಾತ್ಮಕ ಕ್ರಮದಿಂದ ರದ್ದುಪಡಿಸಲು ಹೊರಟಿದ್ದಾರೆ. ಆದರೆ, ಕಾರ್ಯಾದೇಶ ಹೊರಡಿಸುವ ಮೂಲಕವೇ ಹುಟ್ಟಿನಿಂದ ದತ್ತವಾಗುವ ಪೌರತ್ವವನ್ನು ರದ್ದುಪಡಿಸಲು ಸಾಧ್ಯವಿಲ್ಲ ಎನ್ನುವುದು ಅಲ್ಲಿನ ಸಂವಿಧಾನ ತಜ್ಞರ ಅಭಿಪ್ರಾಯ.

'ಇದು ಅಮೆರಿಕದ ದೊಡ್ಡ ಸಂಖ್ಯೆಯ ಜನರ ಬದುಕಿನ ಮೇಲೆ ಪರಿಣಾಮ ಬೀರಲಿದೆ. ಆದರೆ, ಇದನ್ನು ಟ್ರಂಪ್ ಏಕಪಕ್ಷೀಯವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಅಮೆರಿಕದ ಅಧ್ಯಕ್ಷರು ಪೌರತ್ವಕ್ಕೆ ಸಂಬಂಧಿಸಿದ ನಿಯಮವನ್ನು ಅತ್ಯಂತ ಸಂಕುಚಿತವಾಗಿ ವ್ಯಾಖ್ಯಾನಿಸಲು ತಮ್ಮ ಅಧಿಕಾರಿಗಳಿಗೆ ಆದೇಶಿಸಿದ್ದಾರೆ. ಆದರೆ, ಪೌರತ್ವ ನಿರಾಕರಣೆಯು ಕಾನೂನಿನ ತೊಡಕುಗಳಿಗೆ ಕಾರಣವಾಗುತ್ತದೆ. ಅಂತಿಮವಾಗಿ, ಇದು ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಬೇಕಾದ ವಿಚಾರ' ಎನ್ನುವುದು ತಜ್ಞರ ನಿಲುವು.

ಜನನ ಪ್ರವಾಸೋದ್ಯಮ

ಮಕ್ಕಳಿಗೆ ಅಮೆರಿಕದ ಪೌರತ್ವ ಸಿಗಬೇಕು ಎಂಬ ಉದ್ದೇಶದಿಂದ ಗರ್ಭಿಣಿಯರು ಅಮೆರಿಕಕ್ಕೆ ತೆರಳಿ ಅಲ್ಲಿ ಮಗುವಿಗೆ ಜನ್ಮ ನೀಡುವ ರೂಢಿಯೂ ಚಾಲ್ತಿಯಲ್ಲಿದ್ದು, ಇದನ್ನು 'ಜನನ ಪ್ರವಾಸೋದ್ಯಮ' ಎಂದು ಕರೆಯಲಾಗಿದೆ. ಈ ಕಾರಣಕ್ಕೆ ಅಮೆರಿಕಕ್ಕೆ ಬರುವವರಿಗೆ ಪೌರತ್ವ ನೀಡಬಾರದು ಎಂಬುದು ಟ್ರಂಪ್ ನಿಲುವು.

ಹುಟ್ಟಿನ ಮೂಲದ ಪೌರತ್ವ ನಿರಾಕರಣೆಗೆ ಕಾನೂನು ತಿದ್ದುಪಡಿಯ ಅಗತ್ಯವಿದೆ. ಅದಕ್ಕೆ ಸಂಸತ್‌ನ ಎರಡೂ ಸದನಗಳಲ್ಲಿ (ಜನಪ್ರತಿನಿಧಿ ಸಭೆ ಮತ್ತು ಸೆನೆಟ್) ಮೂರನೇ ಎರಡರಷ್ಟು ಬಹುಮತ ಅಗತ್ಯವಿದ್ದು, ಅಮೆರಿಕದ ರಾಜ್ಯಗಳ ಪೈಕಿ ಶೇ 75ರಷ್ಟು ರಾಜ್ಯಗಳು ಅದನ್ನು ಅನುಮೋದಿಸಬೇಕಾಗುತ್ತದೆ.

2022ರ ಅಂಕಿಅಂಶದ ಪ್ರಕಾರ, ಅಮೆರಿಕದ 12 ಲಕ್ಷ ನಾಗರಿಕರು ಅಕ್ರಮ ವಲಸಿಗ ಪೋಷಕರಿಗೆ ಹುಟ್ಟಿದವರಾಗಿದ್ದಾರೆ. ಅವರ ಪೈಕಿ ಅನೇಕರು ಮದುವೆಯಾಗಿ, ಮಕ್ಕಳ ಪೋಷಕರಾಗಿದ್ದಾರೆ. ಈಗ ಹುಟ್ಟಿನ ಆಧಾರದಲ್ಲಿ ಪೌರತ್ವ ರದ್ದುಪಡಿಸುವ ನಿಯಮ ಜಾರಿ ಮಾಡಿದರೆ, 2050ರ ಹೊತ್ತಿಗೆ ಅಮೆರಿಕದಲ್ಲಿ ಅಕ್ರಮ ವಲಸಿಗರ ಸಂಖ್ಯೆಯು 47 ಲಕ್ಷಕ್ಕೆ ಏರಲಿದೆ ಎಂದು 'ವಲಸೆ ನೀತಿ ಸಂಸ್ಥೆ' ಎನ್ನುವ ಚಿಂತಕರ ಚಾವಡಿ ತಿಳಿಸಿದೆ.

ವ್ಯಾಪಕ ವಿರೋಧ: ಟ್ರಂಪ್ ಪೌರತ್ವದ ಬಗೆಗಿನ ಹೊಸ ನಿಯಮ ಘೋಷಿಸಿದ ಕೂಡಲೇ ಅಮೆರಿಕದಲ್ಲೇ ಅದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ವಿರೋಧ ಪಕ್ಷವಾಗಿರುವ ಡೆಮಾಕ್ರಟಿಕ್ ಪಕ್ಷದ ಹಿಡಿತದಲ್ಲಿರುವ ರಾಜ್ಯಗಳ ನ್ಯಾಯಾಲಯಗಳಲ್ಲಿ ಇದನ್ನು ಪ್ರಶ್ನಿಸಿ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. 22 ರಾಜ್ಯಗಳು, ಎರಡು ನಗರಗಳು ಮತ್ತು ಅನೇಕ ನಾಗರಿಕ ಸಂಘಟನೆಗಳು ನ್ಯಾಯಾಲಯದ ಮೊರೆ ಹೋಗಿವೆ.

ಈ ಪೈಕಿ ವಾಷಿಂಗ್ಟನ್, ಅರಿಜೋನಾ, ಇಲಿನಾಯ್ ಮತ್ತು ಒರೆಗಾನ್ ರಾಜ್ಯಗಳ ಮನವಿಗೆ ಸಂಬಂಧಿಸಿದಂತೆ ಸಿಯಾಟಲ್ ನ್ಯಾಯಾಲಯವು ವಿಚಾರಣೆ ನಡೆಸಿದ್ದು, ಕಾರ್ಯಾದೇಶಕ್ಕೆ 14 ದಿನಗಳ ತಡೆ ನೀಡಿದೆ. ಈ ಕಾರ್ಯಾದೇಶವು ತನಗೆ ಅಚ್ಚರಿ ಉಂಟುಮಾಡಿದೆ ಎಂದಿರುವ ನ್ಯಾಯಾಧೀಶರು, ಇದು ಸಂವಿಧಾನದ ನೇರ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗಲಿದೆ ಎಂದು ಸರ್ಕಾರದ ಪರ ವಕೀಲರು ಹೇಳಿದ್ದಾರೆ.

ದೊಡ್ಡ ಸಂಖ್ಯೆಯ ಭಾರತೀಯರು ಕೂಡ ಅಲ್ಲಿ ಹುಟ್ಟಿದ ಕಾರಣಕ್ಕೆ ಅಮೆರಿಕದ ಪೌರತ್ವ ಪಡೆದಿದ್ದಾರೆ. ಭಾರತದಿಂದ ವಲಸೆ ಹೋಗಿ ಅಲ್ಲಿ ವಿವಿಧ ಉದ್ಯೋಗಗಳಲ್ಲಿ ನಿರತರಾಗಿರುವ 10 ಲಕ್ಷಕ್ಕೂ ಹೆಚ್ಚು ಮಂದಿ ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿ ಕಾಯುತ್ತಿದ್ದು, ತಮಗೆ ಪೌರತ್ವ ಸಿಗದಿದ್ದರೂ ಇಲ್ಲಿ ಹುಟ್ಟುವ ತಮ್ಮ ಮಕ್ಕಳಿಗಾದರೂ ಸಿಗಲಿ ಎನ್ನುವ ಆಶಯದೊಂದಿಗೆ ಬದುಕುತ್ತಿದ್ದಾರೆ. ಅವರೆಲ್ಲ ಬದುಕು ಮತ್ತು ಕನಸಿಗೆ ಟ್ರಂಪ್ ಅವರ ನೀತಿಯಿಂದಾಗಿ ಕೊಳ್ಳಿ ಬಿದ್ದಂತಾಗಿದೆ.

ಆಧಾರ: ಪಿಟಿಐ, ಬಿಬಿಸಿ, ಪ್ಯೂ ರಿಸರ್ಚ್ ವರದಿ, ನ್ಯೂಯಾರ್ಕ್ ಟೈಮ್ಸ್, ರಾಯಿಟರ್ಸ್

ಭಾರತೀಯರ ಮೇಲೆ ಪರಿಣಾಮ ಹೇಗೆ?



33.14 ಕೋಟಿ
ಅಮೆರಿಕದ ಒಟ್ಟು ಜನಸಂಖ್ಯೆ

48 ಲಕ್ಷ
ಅಮೆರಿಕದಲ್ಲಿ ನೆಲಸಿರುವ ಭಾರತ ಮೂಲದವರು

16 ಲಕ್ಷ
ಅಮೆರಿಕದಲ್ಲಿ ಜನಿಸಿರುವ ಭಾರತ ಮೂಲದವರು

10 ಲಕ್ಷ
ಗ್ರೀನ್ ಕಾರ್ಡ್‌ಗಾಗಿ (ಶಾಶ್ವತ ಪೌರತ್ವ) ಕಾಯುತ್ತಿರುವ ಭಾರತೀಯರು

ಟ್ರಂಪ್ ಅವರು ಹೊರಡಿಸಿರುವ ಕಾರ್ಯಾದೇಶವು ಅಮೆರಿಕದಲ್ಲಿ ನೆಲಸಿರುವ ಅಕ್ರಮ ವಲಸಿಗರಿಗೆ ಮಾತ್ರ ಸೀಮಿತವಾಗಿಲ್ಲ. ಎಚ್1-ಬಿ/ಎಚ್2ಬಿ ವೀಸಾ, ವಿದ್ಯಾರ್ಥಿ/ಪ್ರವಾಸಿ ವೀಸಾದಂತಹ ವೀಸಾಗಳ ಮೂಲಕ ಅಮೆರಿಕದಲ್ಲಿ ತಾತ್ಕಾಲಿಕವಾಗಿ ಕಾನೂನುಬದ್ಧವಾಗಿ ನೆಲಸಿರುವವರಿಗೂ ಅನ್ವಯವಾಗುತ್ತದೆ. ಜಗತ್ತಿನ ವಿವಿಧ ದೇಶಗಳಿಂದ ಅಮೆರಿಕಕ್ಕೆ ಉದ್ಯೋಗ, ಉನ್ನತ ಶಿಕ್ಷಣದ ಉದ್ದೇಶಕ್ಕೆ ಲಕ್ಷಾಂತರ ಮಂದಿ ತೆರಳುತ್ತಾರೆ. ಇದರಲ್ಲಿ ಭಾರತೀಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ.

'ಎಚ್1-ಬಿ' ಯು ವಲಸೆಯೇತರ ವೀಸಾ ಆಗಿದ್ದು, ಅಮೆರಿಕದ ಕಂಪನಿಗಳಿಗೆ ಹೊರದೇಶಗಳ ಪರಿಣತ ವೃತ್ತಿಪರರಿಗೆ ಅಮೆರಿಕದಲ್ಲಿ ಕೆಲಸ ನೀಡಲು ಅವಕಾಶ ನೀಡುತ್ತದೆ. ಈ ವೀಸಾದ ಅಡಿಯಲ್ಲಿ ಅಮೆರಿಕಕ್ಕೆ ತೆರಳುವವರಲ್ಲಿ ಭಾರತೀಯರೇ ಮುಂದೆ ಇದ್ದಾರೆ. ಭಾರತದ ಎಂಜಿನಿಯರ್‌ಗಳು ಹಾಗೂ ಇತರ ಕ್ಷೇತ್ರಗಳ ತಜ್ಞರನ್ನು ತಂತ್ರಜ್ಞಾನ ಹಾಗೂ ಇತರ ಕಂಪನಿಗಳು ಕರೆಸಿಕೊಳ್ಳುತ್ತವೆ.

ಎಚ್1- ಬಿ ವೀಸಾಗಳಲ್ಲಿ ಶೇ 72ರಷ್ಟನ್ನು ಭಾರತದವರೇ ಪಡೆಯುತ್ತಿದ್ದಾರೆ. ಚೀನಾದ ನಾಗರಿಕರು ಶೇ 12ರಷ್ಟು ಪಡೆಯುತ್ತಿದ್ದಾರೆ. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರಗಳಲ್ಲಿ ದುಡಿಯುವವರು ಈ ವೀಸಾವನ್ನು ಪಡೆಯುತ್ತಿದ್ದಾರೆ. ಕಂಪ್ಯೂಟರ್‌ಗೆ ಸಂಬಂಧಿಸಿದ ಉದ್ಯೋಗದಲ್ಲಿರುವ ಶೇ 65ರಷ್ಟು ಮಂದಿ ಈ ವೀಸಾದ ಫಲಾನುಭವಿಗಳು.

ಕಳೆದ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ನಡುವಿನ ಅವಧಿಯಲ್ಲಿ ಅಮೆರಿಕ 1.3 ಲಕ್ಷ ಎಚ್1ಬಿ ವೀಸಾ ವಿತರಿಸಿತ್ತು. ಈ ಪೈಕಿ 24,766 ವೀಸಾಗಳನ್ನು ಭಾರತದ ತಂತ್ರಜ್ಞಾನ ಕಂಪನಿಗಳೇ ಪಡೆದಿದ್ದವು. ಇನ್ಫೊಸಿಸ್‌ಗೆ 8,140 ವೀಸಾಗಳನ್ನು ನೀಡಿದ್ದರೆ, ಟಿಸಿಎಸ್ 5,274 ವೀಸಾ ಪಡೆದಿತ್ತು.

ವೃತ್ತಿಪರರಲ್ಲದೆ, ಭಾರತದ ಯುವಕರು ದೊಡ್ಡ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯುವುದಕ್ಕಾಗಿ ಅಮೆರಿಕಕ್ಕೆ ತೆರಳುತ್ತಾರೆ. ಓಪನ್ ಡೋರ್ಸ್ ವರದಿ ಪ್ರಕಾರ, 2023–24ರಲ್ಲಿ ಭಾರತದ 3.30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಮೆರಿಕದಲ್ಲಿ ಶಿಕ್ಷಣ ಪಡೆಯುತ್ತಿದ್ದರು.

ಇಲ್ಲಿಯವರೆಗೂ ಎಚ್1-ಬಿ ವೀಸಾ, ವಿದ್ಯಾರ್ಥಿ ವೀಸಾ ಸೇರಿದಂತೆ ಇತರ ವೀಸಾಗಳ ಅಡಿಯಲ್ಲಿ ಅಮೆರಿಕಕ್ಕೆ ತೆರಳಿದ ಭಾರತೀಯರಿಗೆ ಅಲ್ಲಿ ಮಗು ಜನಿಸಿದರೆ, ಆ ಮಗುವಿಗೆ ಅಮೆರಿಕದ ಪೌರತ್ವ ಸಿಗುತ್ತಿತ್ತು. ಹೊಸ ಕಾರ್ಯಾದೇಶದ ಪ್ರಕಾರ, ಇನ್ನು ಮುಂದೆ ಅಮೆರಿಕದ ಅಧಿಕೃತ ಪೌರತ್ವ ಹೊಂದಿಲ್ಲದ ಭಾರತೀಯರಿಗೆ ಅಲ್ಲಿ ಮಗು ಜನಿಸಿದರೆ, ಆ ಮಗು ಅಮೆರಿಕದ ಪ್ರಜೆಯಾಗುವುದಿಲ್ಲ. ಅಲ್ಲಿನ ಶಾಶ್ವತ ಪೌರತ್ವ ಪಡೆಯಲು ಗ್ರೀನ್ ಕಾರ್ಡ್‌ಗಾಗಿಯೇ ಅವರು ಕಾಯಬೇಕಾಗುತ್ತದೆ (ಸದ್ಯ 10 ಲಕ್ಷಕ್ಕೂ ಹೆಚ್ಚು ಭಾರತೀಯರು ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಹಾಕಿ ಕಾಯುತ್ತಿದ್ದಾರೆ).

ಇಲ್ಲಿಯವರೆಗೂ ಅಮೆರಿಕದಲ್ಲಿ ಹುಟ್ಟಿದ ವ್ಯಕ್ತಿಗೆ 21 ವರ್ಷ ಆದ ಬಳಿಕ, ಪೋಷಕರು ಆತ/ಆಕೆಯೊಂದಿಗೆ ನೆಲಸಿದ್ದರೆ ಪೋಷಕರಿಗೂ ಅಮೆರಿಕ ಪೌರತ್ವ ಸಿಗುತ್ತಿತ್ತು. ಈ ನೀತಿಯಿಂದಾಗಿ ಗ್ರೀನ್ ಕಾರ್ಡ್‌ಗಾಗಿ ವರ್ಷಾನುಗಟ್ಟಲೆ ಕಾದರೂ ಕಾರ್ಡ್ ಸಿಗದ ಭಾರತೀಯರು ಅಮೆರಿಕದ ಪ್ರಜೆಗಳಾಗುತ್ತಿದ್ದರು. ಅಕ್ರಮವಾಗಿ ಅಮೆರಿಕ ಪ್ರವೇಶಿಸಿದವರು ಕೂಡ ಮಕ್ಕಳ ಪೌರತ್ವದ ಕಾರಣದಿಂದ ಅಮೆರಿಕದ ಪೌರತ್ವ ಹೊಂದುತ್ತಿದ್ದರು. ಆದರೆ, ಇನ್ನು ಮುಂದೆ ಅದಕ್ಕೂ ಅವಕಾಶ ಇಲ್ಲ.



ಮಾಸ್ ಜಗತ್ತಿನಲ್ಲೊಂದು ಭಿನ್ನ ಕಥೆಯ ರಾಯಲ್

ನಾವು ನೋಡಿದ ಸಿನಿಮಾ

ಚಿತ್ರದ ಹೆಸರು : ರಾಯಲ್
- ನಿರ್ಮಾಣ: ಜಯಣ್ಣ, ಭೋಗೇಂದ್ರ
- ನಿರ್ದೇಶನ: ದಿನಕರ್ ತೂಗುದೀಪ್
- ತಾರಾಗಣ: ವಿರಾಟ್, ಸಂಜನಾ ಆನಂದ್, ಛಾಯಾಸಿಂಗ್, ರಘು ಮುಖರ್ಜಿ ಮತ್ತಿತರರು

ಸಾಮಾನ್ಯರಿಗೆ, ಮಧ್ಯಮ ವರ್ಗದವರಿಗೆ ರಾಯಲ್ ಆಗಿ ಬದುಕಬೇಕೆಂಬ ಹಂಬಲ ಸಹಜ. ಕೆಲವರು ಶ್ರಮ ಹಾಕಿ ಆರ್ಥಿಕವಾಗಿ ಆ ಹಂತ ತಲುಪುತ್ತಾರೆ. ಇನ್ನು ಕೆಲವರು ಶೋಕಿ ಬದುಕಿಗಾಗಿ ಅಡ್ಡಹಾದಿ ಹಿಡಿಯುತ್ತಾರೆ. ಹೀಗೆ ಶೋಕಿ ಮಾಡಿಕೊಂಡಿದ್ದ ಕಥಾ ನಾಯಕ ಕೃಷ್ಣನಿಗೆ ಬದುಕಿನಲ್ಲಿ ಬಯಸದೇ ಶ್ರೀಮಂತಿಕೆ ಬರುತ್ತದೆ. ಇದು 'ರಾಯಲ್' ಚಿತ್ರದ ಒಂದೆಳೆ ಕಥೆ. ಮಾಮೂಲಿ ಮಾಸ್, ಆ್ಯಕ್ಷನ್ ಸಿನಿಮಾಗಳಿಗೆ ಹೋಲಿಸಿದರೆ ಚಿತ್ರದ ಕಥೆ ಭಿನ್ನವಾಗಿದೆ. ಸಾಕಷ್ಟು ತಿರುವುಗಳೊಂದಿಗೆ ಚಿತ್ರಕಥೆಯೂ ಕುತೂಹಲಭರಿತವಾಗಿದೆ.

ಚಿತ್ರ ಶುರುವಾಗುವುದು ಗೋವಾದ ಕಡಲತೀರದಲ್ಲಿ. ನಾಯಕಿ ಸಂಜನಾ ಮತ್ತು ಗೆಳತಿಯರು ಮೋಜು ಮಸ್ತಿಗಾಗಿ ಗೋವಾಕ್ಕೆ ಹೋದಾಗ ನಾಯಕ ಕೃಷ್ಣನ ಪ್ರವೇಶವಾಗುತ್ತದೆ. ಅಲ್ಲಿಂದ ಅವರಿಬ್ಬರ ಪ್ರೇಮಕಥೆ ಪ್ರಾರಂಭ. ಮೊದಲ ಹತ್ತು ನಿಮಿಷ ಇದೊಂದು ಮಾಮೂಲಿ ಪ್ರೇಮಕಥೆಯ ಸಿನಿಮಾ ಎಂದು ಭಾಸವಾಗುತ್ತದೆ. ಆದರೆ ಕಥೆಗೆ ಇದ್ದಕ್ಕಿದ್ದಂತೆ ತಿರುವು ದೊರೆತು ಚಿತ್ರ ಕುತೂಹಲಕಾರಿಯಾಗುತ್ತದೆ. ಕೃಷ್ಣನ ಕೌಟಂಬಿಕ ಕಥೆ ತೆರೆದುಕೊಳ್ಳುವ ಹೊತ್ತಿಗೆ ಚಿತ್ರದ ಮೊದಲಾರ್ಧ ಮುಗಿದಿರುತ್ತದೆ.

ದ್ವಿತೀಯಾರ್ಧ ಬೇರೆಯದೇ ಲೋಕ. ಗೋವಾದ ಬೀದಿಯಲ್ಲಿ ಕಳ್ಳತನ, ಮೋಸಮಾಡಿಕೊಂಡಿದ್ದ ನಾಯಕ ಅವನ ಕನಸಿನಂತೆ ಶ್ರೀಮಂತಿಕೆ ತುಂಬಿ ತುಳುಕುತ್ತಿರುವ ರಾಯಲ್ ಲೋಕಕ್ಕೆ ಬಂದಿರುತ್ತಾನೆ. ಅಲ್ಲಿಗೆ ಏಕೆ ಬಂದ? ಅದರ ಹಿನ್ನೆಲೆ ಏನು ಎಂಬುದರ ಸುತ್ತ ದ್ವಿತೀಯಾರ್ಧ ನಡೆಯುತ್ತದೆ. ಹುಡುಗಿಯರ ನೆಚ್ಚಿನ ಕೃಷ್ಣನಾಗಿ ನಾಯಕ ವಿರಾಟ್ ಇಷ್ಟವಾಗುತ್ತಾರೆ. ಆದರೆ ಆ್ಯಕ್ಷನ್ ದೃಶ್ಯಗಳನ್ನು ನಾಯಕ ವೈಭವೀಕರಣಕ್ಕಾಗಿ ಬಲವಂತವಾಗಿ ತುರುಕಿದಂತೆ ಭಾಸವಾಗುತ್ತದೆ. ಸಂಜನಾ ಆನಂದ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ನಾಯಕನ ತಾಯಿ ಪಾತ್ರದಲ್ಲಿ ನಟಿ ಛಾಯಾಸಿಂಗ್ ನೆನಪಿನಲ್ಲಿ ಉಳಿಯುತ್ತಾರೆ. ರಂಗಾಯಣ ರಘು, ಅಚ್ಯುತ್ ಕುಮಾರ್ ಪಾತ್ರಕ್ಕೆ ಹೆಚ್ಚು ಕೆಲಸವಿಲ್ಲ. ಖಳನಟನಾಗಿ ರಘು ಮುಖರ್ಜಿ ನಟನೆ ಉತ್ತಮವಾಗಿದೆ.

ಚರಣ್‌ರಾಜ್ ಹಿನ್ನೆಲೆ ಸಂಗೀತ ಚಿತ್ರಕ್ಕೆ ಶಕ್ತಿ ತುಂಬಿದೆ. ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ರಘು ನಿಡುವಳ್ಳಿ ಅವರ ಸಂಭಾಷಣೆಯಲ್ಲಿ ಪಂಚ್ ಜೊತೆಗೆ ತೂಕದ ಮಾತುಗಳೂ ಇವೆ. ಒಟ್ಟಾರೆ ಚಿತ್ರದ ಅವಧಿ, ಅದರಲ್ಲಿಯೂ ದ್ವಿತೀಯಾರ್ಧದ ಅವಧಿಯನ್ನು ಇನ್ನಷ್ಟು ಕಡಿಮೆ ಮಾಡುವ ಅವಕಾಶ ನಿರ್ದೇಶಕರಿಗಿತ್ತು. ಇಡೀ ಚಿತ್ರವನ್ನು ಸಾಕಷ್ಟು ಕಡೆ ಲಾಜಿಕ್ ಮರೆತು ತೆಲುಗು ಮಾದರಿಯ ಮಾಸ್ ಸಿನಿಮಾವಾಗಿ ಟ್ರೀಟ್ ಮಾಡಿರುವುದರಿಂದ ನಿರ್ದೇಶಕರು ಹಾಸ್ಯಕ್ಕೆ ಇನ್ನಷ್ಟು ಒತ್ತು ನೀಡುವ ಅವಕಾಶವಿತ್ತು. ❖


ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5933

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಾತಕನಿಗೆ ಕಾಣಿಸಿದ ಕಡಿದಾದ ಕೊರಕಲು (3)
4.ಪ್ರತಿಯಲ್ಲಿ ಗುಂಪು ಕಾಣುತ್ತಿದೆಯಲ್ಲಾ! (3)
6.ಆ ಗಳಿಗೆಯಲ್ಲಿ ಖರೀದಿಸಿರುವ ಬಿದಿರಿನ ದೊಡ್ಡ ಗೂಡೆ (3)
7.ಕಾಲಿನಿಂದ ಹಿಡಿದು ತಲೆಯವರೆಗೆ ಎಂದು ಹೀಗೆನ್ನಿ (6)
11.ತನಗೆ ಸಂಬಂಧಿಸದ ವಿಷಯಗಳಲ್ಲಿ ನಡುವೆ ಪ್ರವೇಶಿಸುವವನು (6)
14.ದೇಹವನ್ನು ನೋಡಿದಾಗಲೇ ಈ ಅನುಮಾನ! (3)
15.ಕಡಿದಾಗ ಉಂಟಾದ ನವೆ (3)
16.ಉದ್ದವಾಗಿ ಬಾಗಿರುವ ತುತ್ತೂರಿ (3)

ಮೇಲಿಂದ ಕೆಳಕ್ಕೆ
1.ವರ ನೀಡಿದ ಅನವಶ್ಯಕ ವಿವರಣೆ (3)
2.ಚೆನ್ನಾಗಿ ಅರಿತವನು ಏಕೋ ತಿರುಗಿದ್ದಾನಲ್ಲಾ! (4)
3.ಹೊರಗೆ ಆವರಿಸಿದ ಧೂಮ (2)
4.ಕೊಡುವವನು ಇಲ್ಲಿದ್ದಾನೆ (4)
5.ತೀಡಿ ತೀಡಿ ಸರಿಪಡಿಸುವಿಕೆ (4)
7.ನಂಬಿಕೆಗೆ ಅರ್ಹನಾದವನು (2)
8.ದಶಕದಿಂದಲೂ ಕಾಡುತ್ತಿರುವ ಸೊಳ್ಳೆ! (3)
9.ಗಂಡಸರು ಸೊಂಟಕ್ಕೆ ಸುತ್ತಿಕೊಳ್ಳುವ ವಸ್ತ್ರ (2)
10.ಭೇದಿಯಾಗಲು ಕೊಡುವ ಔಷಧ (4)
11.ಆಮಂತ್ರಣವಿಲ್ಲದೆ ಮನೆಗೆ ಬಂದ ಅತಿಥಿ (4)
12.ಗ್ರಾಹಕನೊಂದಿಗೆ ಕಲೆಹಾಕುವವನು ಸೇರಿಕೊಂಡಿದ್ದಾನೆ (4)
13.ತರಲೆ ಮಾಡುತ್ತಿರುವ ಬಾಲೆ! (3)
14.ಸಂಕರದ ಹತ್ತಿರ ಕಟ್ಟಿರುವ ಸೇತುವೆ (2)



5932ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಜೇವಣಶಾಲೆ 5.ತಟಾಕ
7.ಮೌನವ್ರತ 9.ತಿದ್ದುಪಡಿ
10.ನೂಪುರ 11.ತಕರಾರು
13.ಸರಪಣಿ 15.ಬೆಂಬಲ
16.ಅಪಧಮನಿ

ಮೇಲಿಂದ ಕೆಳಕ್ಕೆ:
1.ಶಿವದಾನ 2.ಮುಸಾ
3.ಅಟಾಟೋಪ 6.ಅತಿರಸ
8.ತನೂರುಹ 12.ಕಲಬತ್ತು
14.ಪರಿಮಳ 17.ಪತ್ರ

ಸುಡೊಕು 6318

				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6317 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಜನವರಿ 25, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಏಕಾದಶಿ ಗಂ. 20-32 ನಕ್ಷತ್ರ: ಅನುರಾಧ ಗಂ. 07-08 ಯೋಗ: ಧ್ರುವ ಗಂ. 28-38 ಕರಣ: ಬವ ಗಂ. 08-04, ಮಕರ ಮಾಸದ 11 ನೇ ದಿನ, ಮಳೆನಕ್ಷತ್ರ: ಶ್ರವಣ 1.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 07-01 ಸೂರ್ಯಾಸ್ತ : 06-24
ಮುಸ್ಲಿಂ ದಿನಾಂಕ : 24 ರಜಬ್, ದಿನ ವಿಶೇಷ : ಸತಿಲ ಏಕಾದಶಿ
ಅದೃಷ್ಟ ಸಂಖ್ಯೆ : 3, 9

ಮೇಷ: ವೃತ್ತಿ ಸಂಬಂಧಿತ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವಿರಿ, ಯಾವ ಕಾರಣಕ್ಕೂ ನಿಮ್ಮ ಸ್ವಾರ್ಥಕ್ಕಾಗಿ ಇನ್ನೊಬ್ಬರ ಜೀವನದಲ್ಲಿ ಆಟವಾಡಬೇಡಿ. ಸೇವಾ ಹಿರಿತನದಿಂದ ಹೆಚ್ಚಿನ ಸ್ಥಾನಮಾನ ದೊರೆಯುವುದು.

ವೃಷಭ: ದಾಯಾದಿಗಳ ಮಧ್ಯೆ ನೀವಂದುಕೊಂಡಷ್ಟು ನಿಮ್ಮ ಪರಿಸ್ಥಿತಿ ಕೆಟ್ಟದಾಗಿ ಇರುವುದಿಲ್ಲ. ಸರ್ಕಾರಿ ವ್ಯವಹಾರಗಳಲ್ಲಿ ಅನುಕೂಲಕರ ವಾತಾವರಣ ಸಿಗಲಿದೆ. ನಿಮ್ಮ ಸ್ವಯಂ ಶಕ್ತಿಯು ನಿಮ್ಮ ಹಿತೈಷಿಗಳ ಕಣ್ಣನ್ನು ಕೆಂಪಾಗಿಸುತ್ತದೆ.

ಮಿಥುನ: ನೀವೇ ಸ್ವಂತವಾಗಿ ಶುರು ಮಾಡಿದ ವ್ಯವಹಾರದಲ್ಲಿ ಲಾಭಕ್ಕಾಗಿ ಸ್ವಲ್ಪ ದಿನ ಕಾಯಬೇಕಾಗುವುದು. ನಿಮ್ಮ ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ನಿಮಗೆ ಸಿಗಲಿದೆ. ಶ್ರೀಮಂತ ಜೀವನವನ್ನು ಮನಸ್ಸು ಹಂಬಲಿಸಲಿದೆ.

ಕರ್ಕಾಟಕ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿಯನ್ನು ಹೊಂದಿರುವ ನೀವು, ಅವಸರದಲ್ಲಿ ಇಂದು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣಗಳಿವೆ. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಿದ ಸಂತೋಷ ಸಿಗುವುದು.

ಸಿಂಹ : ಮನೆಯವರೊಂದಿಗೆ ಒಂದು ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಹಣಕ್ಕಿಂತ ಮಿಗಿಲಾಗಿ ಹೆಸರು ಗಳಿಸುವ ಬಗ್ಗೆ ಗಮನವಿರಲಿ. ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು.

ಕನ್ಯಾ : ನಾಲ್ಕಾರು ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ನಿಮ್ಮ ಏಳಿಗೆಗೆ ದಾರಿಯಾಗಲಿದೆ. ನಿಮ್ಮ ಪ್ರಯಾಣವು ಪೂರ್ವ ನಿಯೋಜಿತ ರೀತಿಯಲ್ಲಿ ನಡೆಯುವುದು ಕಷ್ಟಕರ. ಎಲ್ಲಾ ಕೆಲಸಗಳೂ ತ್ವರಿತ ಗತಿಯಲ್ಲಿ ಸಾಗುವುದು.

ತುಲಾ: ಸಾಮಾಜಿಕ ವಲಯದಲ್ಲಿ ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ಆಯ್ಕೆಯಾಗಿರುತ್ತದೆ. ಕೆಲಸ ಕಾರ್ಯಗಳು ಯಾವುದೇ ಆತಂಕವಿಲ್ಲದೆ ನಡೆಯುವುದು.

ವೃಶ್ಚಿಕ: ಪೂಜಾದಿ ಕೆಲಸಗಳಿಂದ ಮನಸ್ಸು ಉಲ್ಲಾಸಗೊಳ್ಳಲಿದೆ ಹಾಗೂ ಅಧಿಕಾರಿಗಳಿಗೆ ನಿಮ್ಮ ಮೇಲಿದ್ದ ಅಸಮಾಧಾನ ದೂರಾಗುವುದು. ಉದ್ಯೋಗದಲ್ಲಿ ಉತ್ತಮ ಹೆಸರು ಗಳಿಸುವ ಪ್ರಯತ್ನಕ್ಕೆ ಶುಭವಾಗುತ್ತದೆ.

ಧನು: ಸಾಂಸ್ಕೃತಿಕವಾಗಿ ಅದರಲ್ಲೂ ಮುಖ್ಯವಾಗಿ ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ. ಜವಾಬ್ದಾರಿಯುತ ಕಾರ್ಯಗಳ ಬಗ್ಗೆ ಗಮನವಿರಲಿ. ತಾಯಿಯ ಆರೋಗ್ಯ ಸುಧಾರಿಸುವುದು.

ಮಕರ: ತುಂಬಾ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗೆ ದೇವರೇ ದಾರಿ ತೋರಿದಂತೆ ಅಪರಿಚಿತನೊಬ್ಬನ ಭೇಟಿಯಿಂದ ಉತ್ತರ ಸಿಗುತ್ತದೆ. ಮಿತ್ರರ ಉಪಾಯವೊಂದರಿಂದ ನೀವು ಸಂಕಟದಿಂದ ಪಾರಾಗುವಂತಾಗಲಿದೆ.

ಕುಂಭ : ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಕಾರ್ಯ ಸಾಧನೆಗೆ ಅನುಕೂಲಕರ ಮತ್ತು ಲಾಭದಾಯಕ ವಾತಾವರಣ ಸಿಗುವುದು. ನಿಮ್ಮ ಸಂಪಾದನೆಯನ್ನು ನೋಡಿ ಕೆಲವರು ಮತ್ಸರ ಪಡುವಂತಾಗುತ್ತದೆ.

ಮೀನ: ಕೆಲಸದಲ್ಲಿದ್ದಂತಹ ಅಡೆತಡೆಗಳನ್ನು ಈ ದಿನದ ಗ್ರಹದ ಚಲನೆಯು ನಿವಾರಣೆ ಮಾಡುವುದು. ಮೋಜು ಮಸ್ತಿಯ ಆಲೋಚನೆಯಿಂದ ದೂರವಿರುವ ಪ್ರಯತ್ನ ಒಳ್ಳೆಯದು. ತಾಳ್ಮೆಯು ನಿಮಗೆ ಅತ್ಯವಶ್ಯ.

ಸಾಲ ಮರುಪಾವತಿಗೆ ಕಾಲಾವಕಾಶಕ್ಕೆ ಸೂಚನೆ • ಮನೆ ಜಪ್ತಿ ಮಾಡಿದರೆ ದೂರು ಕೊಡಿ: ಸತೀಶ ಜಾರಕಿಹೊಳಿ

ಫೈನಾನ್ಸ್ ಕಂಪನಿ ಹಾವಳಿ ತಡೆಗೆ ಕ್ರಮ: ಸಚಿವ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಫೈನಾನ್ಸ್ ಕಂಪನಿಗಳ ಕಿರುಕುಳ ವಿಷಯವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಜಿಲ್ಲಾ ಮಟ್ಟದಲ್ಲಿ ಲೀಡ್ ಬ್ಯಾಂಕ್ ಅಧಿಕಾರಿಗಳು, ಸಹಕಾರ ಸಂಸ್ಥೆಗಳ ನಿರ್ದೇಶಕರು ಮತ್ತು ಫೈನಾನ್ಸ್ ಕಂಪನಿಗಳ ಅಧಿಕಾರಿಗಳ ಸಭೆ ನಡೆಸಲಾಗುವುದು. ಯಾರಿಗೂ ತೊಂದರೆ ಆಗದ ರೀತಿ ಕ್ರಮ ಕೈಗೊಳ್ಳಲಾಗುವುದು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಸತೀಶ ಜಾರಕಿಹೊಳಿ

'ಫೈನಾನ್ಸ್ ಕಂಪನಿಗಳು ಸಾಲ ನೀಡಿವೆ. ನ್ಯಾಯಾಲಯದಿಂದ ಆದೇಶ ಪಡೆದು ಮನೆಗಳನ್ನು ಜಪ್ತಿ ಮಾಡುತ್ತಿವೆ. ಮಹಿಳೆಯರು ತಾವಾಗಿಯೇ ಆಮಿಷಕ್ಕೆ ಒಳಗಾಗಿ ಮೋಸ ಹೋಗಿದ್ದನ್ನು ಒಪ್ಪುತ್ತಿದ್ದಾರೆ. ಮೋಸ ಮಾಡಿದ ಹಲವರು ಈಗಾಗಲೇ ಜೈಲು ಸೇರಿದ್ದಾರೆ. ಎರಡು ತಿಂಗಳು ಕಾಲಾವಕಾಶ ಕೊಡಲು ಕಂಪನಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಫೈನಾನ್ಸ್ ಕಂಪನಿ ಕಿರುಕುಳಕ್ಕೆ ಶಿರೂರಿನ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು ನಿಜ. ಇನ್ನೊಂದೆಡೆ ಯುವತಿಗೂ ಕಿರುಕುಳ ನೀಡಿದವರನ್ನು ಬಂಧಿಸಲಾಗಿದೆ. ಮನೆ ಜಪ್ತಿ ಮಾಡಿದರೆ, ಕಿರುಕುಳ ನೀಡಿದರೆ ಜನರು ದೂರು ನೀಡಬೇಕು. ಪೊಲೀಸರು ಸೂಕ್ತ ಕ್ರಮ ಜರುಗಿಸುತ್ತಾರೆ' ಎಂದರು.

ಮತ್ತೊಂದು ಮನೆ ಜಪ್ತಿ: ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಸಾಲ ಮರುಪಾವತಿಗೆ ವಿಳಂಬ ಮಾಡಿದ ಕಾರಣ ತಾಲ್ಲೂಕಿನ ಬೈಲೂರು ಗ್ರಾಮದಲ್ಲಿ ಫೈನಾನ್ಸ್ ಕಂಪನಿಯೊಂದು ಮನೆ ಜಪ್ತಿ ಮಾಡಿದೆ. ಕುಟುಂಬದ ಎಲ್ಲ 9 ಸದಸ್ಯರೂ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ.

'ಮಕ್ಕಳ ಉದ್ಯೋಗಕ್ಕಾಗಿ ಧಾರವಾಡದ ಹಣಕಾಸು ಸಂಸ್ಥೆಯಿಂದ ₹8 ಲಕ್ಷ ಸಾಲ ಪಡೆದಿದ್ದೆ. ತಿಂಗಳಿಗೆ ₹15,520 ಕಂತು ಕಟ್ಟುವಂತೆ ತಿಳಿಸಿದ್ದರು. ಐದು ವರ್ಷಗಳಿಂದ ಕಂತು ಕಟ್ಟಿದ್ದೇನೆ. ಐದು ತಿಂಗಳಿಂದ ಸಾಧ್ಯವಾಗಿಲ್ಲ. '₹8 ಲಕ್ಷ ಸಾಲಕ್ಕೆ ಈಗಾಗಲೇ ₹9 ಲಕ್ಷಕ್ಕೂ ಹೆಚ್ಚು ದುಡ್ಡು ಕಟ್ಟಿದ್ದೇವೆ. ಆಶ್ರಯ ಮನೆಯಲ್ಲಿ ವಾಸವಿದ್ದೆವು. ಅದನ್ನೂ ಫೈನಾನ್ಸ್ ಕಂಪನಿಯವರು ಕಿತ್ತುಕೊಂಡಿದ್ದರೆ' ಎಂದು ಸಂತ್ರಸ್ತೆ ಯಲ್ಲವ್ವ ಬಸಪ್ಪ ಕುರಗುಂದ 'ಪ್ರಜಾವಾಣಿ'ಗೆ ತಿಳಿಸಿದರು.



ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಬೈಲೂರು ಗ್ರಾಮದಲ್ಲಿ ಫೈನಾನ್ಸ್ ಕಂಪನಿ ಮನೆ ಜಪ್ತಿ ಮಾಡಿದ್ದರಿಂದ ಹೊರಗೆ ಕುಳಿತ ಯಲ್ಲವ್ವ ಹಾಗೂ ಬಸಪ್ಪ

ಜಿಲ್ಲೆಯಲ್ಲಿ 2,254 ನೋಂದಾಯಿತ ಹಣಕಾಸು ಸಂಸ್ಥೆಗಳಿವೆ. ಕೆಲ ಸಂಸ್ಥೆ ಸುಮ್ಮನಿದ್ದರೂ ಮಧ್ಯವರ್ತಿಗಳು ಕಿರುಕುಳ ನೀಡುತ್ತಿದ್ದಾರೆ ಎಂಬ ದೂರುಗಳೂ ಬಂದಿವೆ

ಮೊಹಮ್ಮದ್ ರೋಷನ್, ಜಿಲ್ಲಾಧಿಕಾರಿ

ಫೈನಾನ್ಸ್ ಕಂಪನಿಗಳ ಮೇಲೆ ಪೊಲೀಸರು ನೇರವಾಗಿ ಕ್ರಮ ಕೈಗೊಳ್ಳಲು ಬರುವುದಿಲ್ಲ. ಸಹಕಾರ ಇಲಾಖೆಯಿಂದ ಒಬ್ಬ ನೋಡಲ್ ಅಧಿಕಾರಿ ನೇಮಿಸಿದರೆ ಅವರ ವರದಿಯಂತೆ ಕ್ರಮ ಕೈಗೊಳ್ಳಬಹುದು

ಡಾ.ಭೀಮಾಶಂಕರ ಗುಳೇದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ರಿಯಾಯಿತಿ ಸಿಗುತ್ತದೆ ಎಂಬ ಆಮಿಷಕ್ಕೆ ಜನ ಬಲಿಯಾಗಬಾರದು. ಅದು ಸುಳ್ಳು. ಈ ಬಗ್ಗೆ ಜಿಲ್ಲೆಯಲ್ಲಿ ಜಾಗೃತಿ ಕಾರ್ಯಕ್ರಮ ಮಾಡಲಾಗುವುದು

ಪ್ರಶಾಂತ ಕುಲಕರ್ಣಿ, ವ್ಯವಸ್ಥಾಪಕ, ಜಿಲ್ಲಾ ಲೀಡ್ ಬ್ಯಾಂಕ್

ಕಿರಾಣಿ ವ್ಯಾಪಾರಿ ಆತ್ಮಹತ್ಯೆ

ಹಾವೇರಿ: 'ಬ್ಯಾಂಕ್ ಮತ್ತು ಫೈನಾನ್ಸ್ ಕಂಪನಿಗಳಲ್ಲಿ ಪಡೆದಿದ್ದ ₹ 15 ಲಕ್ಷ ಸಾಲ ತೀರಿಸಲಾಗದೇ ಕಿರಾಣಿ ಅಂಗಡಿ ವ್ಯಾಪಾರಿ ನಾಗಪ್ಪ ಪುಟ್ಟಪ್ಪ ಗುಂಜಾಳ (36) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಬಂಕಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.



'ಸಾಲ ತೀರಿಸಲಾಗದೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ನಾಗಪ್ಪ ಅವರ ಪತ್ನಿ ತಿಳಿಸಿದ್ದು, ಅದರಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಿರಾಣಿ ವ್ಯಾಪಾರದಲ್ಲಿ ಹೆಚ್ಚು ಆದಾಯ ಬರುತ್ತಿರಲಿಲ್ಲ. ಇದರಿಂದ ನಾಗಪ್ಪ ಅವರಿಗೆ ಸಾಲದ ಕಂತು ತುಂಬುವುದು ಕಷ್ಟವಾಗಿತ್ತು' ಎಂದು ಅವರು ತಿಳಿಸಿದ್ದಾರೆ.

'ಸಾಲಕ್ಕೆ ಬಡ್ಡಿ ನೀಡಿಲ್ಲವೆಂದು ಆರೋಪಿಸಿದ್ದ ಫೈನಾನ್ಸ್ ಕಂಪನಿ ಪ್ರತಿನಿಧಿಯೊಬ್ಬರು, ಇತ್ತೀಚೆಗೆ ನಾಗಪ್ಪ ಅವರ ಬೈಕ್ ಒಯ್ದಿದ್ದರು. ಸಾಲ ಪಾವತಿಗೆ ಕಿರುಕುಳವೂ ಇತ್ತು' ಎಂದು ನಾಗಪ್ಪ ಸಂಬಂಧಿಕರು ದೂರಿದ್ದಾರೆ.

ಬೀಗ ತೆರವು ಮಾಡಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ

ಬೆಳಗಾವಿ ತಾಲ್ಲೂಕಿನ ತಾರಿಹಾಳ ಗ್ರಾಮದಲ್ಲಿ ಫೈನಾನ್ಸ್ ಕಂಪನಿಯವರು ಮನೆಗೆ ಜಡಿದಿದ್ದ ಬೀಗವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತೆರವು ಮಾಡಿಸಿದರು. ಮಾಧುರಿ ಲೋಹಾರ ಎಂಬ ಬಾಣಂತಿ, ಒಂದು ತಿಂಗಳ ಹಸುಳೆ ಹಾಗೂ ಬಾಣಂತಿಯ ಪಾಲಕರನ್ನು ಸಾಲ ವಸೂಲಿಗಾರರು ಗುರುವಾರ ಹೊರಹಾಕಿದ್ದರು.

ಕಾರು ಅಪಘಾತದ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವೆ, ತಮ್ಮ ಆಪ್ತರನ್ನು ಕಳುಹಿಸಿ ಫೈನಾನ್ಸ್ ಕಂಪನಿ ಅಧಿಕಾರಿಗಳೊಂದಿಗೆ ಮಾತನಾಡಿ ಮನೆ ಬೀಗ ತೆರೆಸಿದರು. ಬಡ್ಡಿ ಮನ್ನಾ ಮಾಡಿ, ಸಾಲದ ಅಸಲನ್ನು ತುಂಬಲು ಕುಟುಂಬಕ್ಕೆ ಕಾಲಾವಕಾಶ ನೀಡಲು ಅವರು ಕಂಪನಿಗೆ ತಿಳಿಸಿದ್ದಾರೆ.

ಗೃಹ ಸಚಿವರಿಗೆ ಮಂಗಳ ಸೂತ್ರ ಕಳುಹಿಸಿದ ಮಹಿಳೆ

ರಾಯಚೂರು: ಸಾಲ ಮರುಪಾವತಿಸಲಾಗದೇ ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯೊಬ್ಬರ ಪತ್ನಿ ಗುರುವಾರ ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಮಂಗಳಸೂತ್ರ ಕಳುಹಿಸಿ, ಪತಿಯ ಸಾವಿಗೆ ಕಾರಣವಾದ ಮೈಕ್ರೊ ಫೈನಾನ್ಸ್ ಕಂಪನಿ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮಾನ್ವಿ ತಾಲ್ಲೂಕಿನ ಕಪಗಲ್‌ದ ಶರಣಬಸವ ಜನವರಿ 17ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. 'ನನ್ನ ಪತಿ ಆತ್ಮಹತ್ಯೆ ಮಾಡಿಕೊಳ್ಳಲು ಮೈಕ್ರೊ ಫೈನಾನ್ಸ್ ಕಂಪನಿಯ ಸಿಬ್ಬಂದಿಯೇ ಕಾರಣ. ಪತಿ ಸಾವಿನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ನನ್ನ ಕುಟುಂಬಕ್ಕೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿ ಶರಣಬಸವ ಅವರ ಪತ್ನಿ ಪಾರ್ವತಿ ಅವರು ಗೃಹ ಸಚಿವರಿಗೆ ತಾಳಿ ಕಳುಹಿಸಿದ್ದಾರೆ.



ಗೌಂಡಿ ಕೆಲಸ ಮಾಡುತ್ತಿದ್ದ ಶರಣಬಸವ ಕೆಲ ಫೈನಾನ್ಸ್ ಕಂಪನಿಗಳಿಂದ ₹ 8 ಲಕ್ಷ ಸಾಲ ಪಡೆದುಕೊಂಡಿದ್ದರು. ಸಾಲದ ಕಂತುಗಳನ್ನು ಪಾವತಿಸದ ಕಾರಣ ಕಂಪನಿಗಳ ಸಿಬ್ಬಂದಿ ಮನೆಗೆ ಬಂದು ಸಾಲದ ಕಂತುಗಳನ್ನು ಕಟ್ಟುವಂತೆ ಒತ್ತಡ ಹಾಕಿದ್ದರು ಎನ್ನಲಾಗಿದೆ.

'ಆವಂತಿ ಫೈನಾನ್ಸ್‌ನಲ್ಲಿ ₹ 40 ಸಾವಿರ, ಎಲ್&ಟಿ ಫೈನಾನ್ಸ್‌ನಿಂದ ₹ 50 ಸಾವಿರ, ಬೆಲ್‌ಸ್ಟಾರ್‌ನಿಂದಲೂ ಸಾಲ ಪಡೆದಿದ್ದರು. ಸಾಲ ಪಡೆದ ಹಣದಿಂದ ಗಾರೆ ಕೆಲಸದ ಸಾಮಗ್ರಿಗಳನ್ನು ಸಾಗಿಸಲು ಆಟೊ ಖರೀದಿಸಿದ್ದರು' ಎಂದು ಶರಣಬಸವ ಅವರ ಪತ್ನಿ ಪಾರ್ವತಿ ತಿಳಿಸಿದ್ದಾರೆ.

'ನನ್ನ ಪತಿಯೇ ಇಲ್ಲದ ಮೇಲೆ ಮಾಂಗಲ್ಯ ಏಕೆ? ಹೀಗಾಗಿಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ದೂರು ಸಲ್ಲಿಸಿ, ಅಲ್ಲಿಂದ ನೇರವಾಗಿ ಅಂಚೆ ಕಚೇರಿಗೆ ಬಂದು ಗೃಹ ಸಚಿವರಿಗೆ ಮಾಂಗಲ್ಯ ಕಳುಹಿಸಿದ್ದೇನೆ' ಎಂದು ಹೇಳಿದ್ದಾರೆ.

'ಸಾಲ ಪಡೆದು ಹಣ ಕಟ್ಟೋಕೆ ಆಗಿಲ್ಲ ಅಂದ್ರೆ ಮೀಸೆ ಏಕೆ ಬಿಟ್ಟಿದ್ದೀಯಾ ಎಂದು ಫೈನಾನ್ಸ್ ಕಂಪನಿ ಸಿಬ್ಬಂದಿ ಶರಣಬಸವನಿಗೆ ಹೀಯಾಳಿಸಿದ್ದರು. ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಜನಸೇವಾ ಫೌಂಡೇಶನ್ ಸಂಘಟನೆ ಜಾವೀದ್ ಖಾನ್ ದೂರಿದ್ದಾರೆ.

ಸುದ್ದಿ 2 ನಿಮಿಷ

ಸರ್ಕಾರದಿಂದ ಬಡ್ಡಿ ರಹಿತ ಸಾಲ ಪಡೆಯಿರಿ: ಚಲುವರಾಯಸ್ವಾಮಿ

ಮಂಡ್ಯ:'ತೊಂದರೆ ನೀಡುವ ಫೈನಾನ್ಸ್ ಕಂಪನಿಗಳ ಕಡೆಗೆ ಹೋಗುವುದನ್ನು ಜನ ನಿಲ್ಲಿಸಬೇಕು. ಸರ್ಕಾರವೇ ಬಡ್ಡಿ ರಹಿತ ಸಾಲ ನೀಡುತ್ತಿದ್ದು, ಪಿಎಲ್‌ಡಿ ಬ್ಯಾಂಕ್, ಸೊಸೈಟಿ ಮೂಲಕ ತೆಗೆದುಕೊಳ್ಳಬಹುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

'ಫೈನಾನ್ಸ್ ಕಂಪನಿಗಳ ಕಿರುಕುಳ ಸಂಬಂಧ ಕಠಿಣ ಕಾನೂನು ಕ್ರಮಕ್ಕೆ ಚಿಂತನೆ ನಡೆದಿದೆ. ಬಡ್ಡಿ, ಸುಸ್ತಿಬಡ್ಡಿ ಹಾಕಿ ತೊಂದರೆ ಕೊಟ್ಟರೆ ಕ್ರಮ ಕೈಗೊಳ್ಳುತ್ತೇವೆ. ಮಂಡ್ಯದಲ್ಲೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶನ ನೀಡಿದ್ದೇನೆ' ಎಂದು ನಗರದಲ್ಲಿ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.



'ಫೈನಾನ್ಸ್ ಕಂಪನಿಗಳ ಹಾವಳಿ ಬಗ್ಗೆ ತಿಂಗಳಿನಿಂದಲೂ ಚರ್ಚೆಯಾಗುತ್ತಿದ್ದರೂ ಸರ್ಕಾರ ಕ್ರಮ ಕೈಗೊಳ್ಳಲಿಲ್ಲ. ನೊಂದವರಿಗೆ ಧೈರ್ಯವನ್ನೂ ತುಂಬಲಿಲ್ಲ. ಪ್ರಾಣ ಕಳೆದುಕೊಂಡ ಮೇಲೆ, ಊರು ಬಿಟ್ಟ ಮೇಲೆ ಸಭೆ ನಡೆಸಿದರೇನು ಪ್ರಯೋಜನ? ಮಂಡ್ಯದಲ್ಲಿ 60 ಫೈನಾನ್ಸ್ ಕಂಪನಿಗಳಿದ್ದು, 46 ಕ್ಕೆ ಪರವಾನಗಿಯೇ ಇಲ್ಲ. ಅಂಥವುಗಳ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರವಿಲ್ಲ-ವೆಂದು ಜಿಲ್ಲಾಧಿಕಾರಿಯೇ ತಿಳಿಸಿದ್ದಾರೆ' ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಮೈಸೂರಿನಲ್ಲಿ ಹೇಳಿದರು.

ಮಹಿಳಾ ಆಯೋಗಕ್ಕೆ ದೂರು

ವಿಜಯಪುರ: 'ಮಗಳ ಮದುವೆಗೆ ₹3 ಲಕ್ಷ ಸಾಲ ಮಾಡಿದ್ದೆ. ತಾಳಿ ಮಾರಿ ಒಂದಷ್ಟು ಸಾಲ ತೀರಿಸಿರುವೆ. ಇನ್ನುಳಿದ ಸಾಲ ತೀರಿಸಲು ಸಮಯ ಕೇಳಿದರೂ ಬಿಡುತ್ತಿಲ್ಲ. ಫೈನಾನ್ಸ್ ಕಂಪನಿಯ ಸಿಬ್ಬಂದಿ ಮನೆಗೆ ಬಂದು ಕೂರುತ್ತಾರೆ. ಬೇರೆ ಬೇರೆ ಸ್ವರೂಪದಲ್ಲಿ ಕಿರುಕುಳ ನೀಡುತ್ತಾರೆ. ನನಗೆ ದಿಕ್ಕೇ ತೋಚುತ್ತಿಲ್ಲ' ಎಂದು ಸಿಂದಗಿ ತಾಲ್ಲೂಕಿನ ಮಾಡಬಾಳ ಗ್ರಾಮದ ಮಹಿಳೆ ನಿಂಬೆವ್ವ ಅವರು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಎದುರು ನೋವು ತೋಡಿಕೊಂಡರು.

ಫೈನಾನ್ಸ್‌ನವರ ಕಂಪನಿಗಳ ಕಿರುಕುಳ ತಾಳಲಾರದೇ ಮನೆ ಬಿಟ್ಟು 15 ದಿನಗಳಿಂದ ಅಡವಿ ಸೇರಿದ್ದೇನೆ. ಈಗ ಸಾಯುವುದಷ್ಟೇ ಬಾಕಿ ಇದೆ. ನನಗೆ ರಕ್ಷಣೆ ನೀಡಿ' ಎಂದು ಅವರು ಕೋರಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಮಹಿಳೆಯ ಅಹವಾಲು ಆಲಿಸಿ, ಧೈರ್ಯ ತುಂಬಿ ಮಾತನಾಡಿದ ನಾಗಲಕ್ಷ್ಮಿ ಚೌಧರಿ, 'ಯಾವುದೇ ಕಾರಣಕ್ಕೂ ಫೈನಾನ್ಸ್ ಕಂಪನಿಯವರು ಮಹಿಳೆಯರಿಗೆ ಕಿರುಕುಳ ನೀಡಬಾರದು. ಸಾಲ ಮರು ಪಾವತಿಸಲು ಸಮಯ ನೀಡಬೇಕು' ಎಂದು ಸೂಚಿಸಿದರು.

ಕಿರುಕುಳಕ್ಕೆ ಒಳಗಾದವರ ಅಹವಾಲು ಆಲಿಸಿ, ಅವರ ಸಮಸ್ಯೆ ಇತ್ಯರ್ಥ ಪಡಿಸಲು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ತಹಶೀಲ್ದಾರ್ ಒಳಗೊಂಡ ಕಣ್ಗಾವಲು ಸಮಿತಿ ರಚಿಸುವಂತೆ ಚೌಧರಿ ಸೂಚಿಸಿದರು.

'ಗ್ಯಾರಂಟಿ ಕೊಟ್ಟರೂ ಜನ ಯಾಕೆ ಸಾಲ ಮಾಡುತ್ತಿದ್ದಾರೆ?'

ಪ್ರಜಾವಾಣಿ ವಾರ್ತೆ

ರಾಮನಗರ:'ಗ್ಯಾರಂಟಿ ಯೋಜನೆಯಡಿ ಸರ್ಕಾರ ₹2 ಸಾವಿರ ಕೊಟ್ಟರೂ ಜನ ಯಾಕೆ ಮೈಕ್ರೊ ಫೈನಾನ್ಸ್‌ನಲ್ಲಿ ಸಾಲ ಮಾಡುತ್ತಿದ್ದಾರೆ? ನಾನು ಮುಖ್ಯಮಂತ್ರಿಯಾಗಿದ್ದಾಗ ಫೈನಾನ್ಸ್ ಹಾವಳಿ ತಡೆಗೆ ಒಂದು ಕಾನೂನು ತಂದಿದ್ದೆ. ಅದು ಏನಾಯಿತು?' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು.



ತಾಲ್ಲೂಕಿನ ದಾಸೇಗೌಡನದೊಡ್ಡಿಯಲ್ಲಿ ಶುಕ್ರವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಜಿಲ್ಲೆಯಲ್ಲಿರುವ ಮೈಕ್ರೊ ಫೈನಾನ್ಸ್ ಹಾವಳಿ ವಿಷಯವನ್ನು ಸರ್ಕಾರ ಗಮನಿಸಬೇಕಲ್ಲವೇ? ಉಸ್ತುವಾರಿ ಸಚಿವರು ನೋಡಬೇಕಲ್ವಾ? ಈ ಹಾವಳಿ ಕೇವಲ ರಾಮನಗರವಷ್ಟೇ ಅಲ್ಲದೆ, ರಾಜ್ಯದ ಹಲವೆಡೆ ವ್ಯಾಪಿಸಿದೆ ಎಂದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ಮೈಕ್ರೊ ಫೈನಾನ್ಸ್‌ಗೆ ಕಡಿವಾಣ ಹಾಕಲು ಮಸೂದೆ ಪಾಸ್ ಮಾಡಿ ಕಾನೂನು ಸಹ ಜಾರಿಗೆ ತಂದಿದ್ದೆ. ಅಂದಿನ ಸಹಕಾರ ಸಚಿವರನ್ನು ಕೇರಳಕ್ಕೆ ಕಳುಹಿಸಿ ಈ ಬಗ್ಗೆ ಅಧ್ಯಯನ ಮಾಡಿಸಿದ್ದೆ. ಅಲ್ಲಿ ಮೈಕ್ರೊ ಫೈನಾನ್ಸ್ ನಿಯಂತ್ರಣಕ್ಕೆ ಒಂದು ಆಯೋಗವಿದೆ. ಅಂತಹ ಒಂದು ಆಯೋಗವನ್ನು ಇಲ್ಲೂ ಸ್ಥಾಪಿಸಿ ಸಾಲ ಮರುಪಾವತಿ ಮಾಡಲಾಗದವರಿಗೆ ಕಿರುಕುಳ ತಪ್ಪಿಸಿ ಅನುಕೂಲ ಮಾಡಿಕೊಡಲು ಪ್ರಯತ್ನಿಸಿದ್ದೆ' ಎಂದು ಅವರು ಹೇಳಿದರು.

ಅಲೆಮಾರಿಗಳಿಗೂ ಫೈನಾನ್ಸ್ ಸಾಲದ ಶೂಲ

ಶಿವಮೊಗ್ಗ: ಸಾಲ ಕೊಟ್ಟವರಿಗೆ ಹೆದರಿ ಕಣ್ತಪ್ಪಿಸಿಕೊಳ್ಳುತ್ತಿರುವ ಶಿಂದೋಳ ಕ್ಯಾಂಪ್‌ನ ಗಂಡಸರು

• ವೆಂಕಟೇಶ ಜಿ.ಎಚ್

ಶಿವಮೊಗ್ಗ: ಅಧಿಕ ಬಡ್ಡಿ ವಿಧಿಸುವ ಫೈನಾನ್ಸ್ ಕಂಪನಿಗಳ ಸಾಲದ ಶೂಲಕ್ಕೆ ಸಿಲುಕಿ ಗ್ರಾಮೀಣರು ಮಾತ್ರವಲ್ಲ ಶಿವಮೊಗ್ಗದ ಎಂಆರ್‌ಎಸ್ ಸರ್ಕಲ್ ಬಳಿಯ ಶಿಂದೋಳ (ದುರುಗಮುರಗಿ) ಸಮುದಾಯದ ಅಲೆಮಾರಿ ಕ್ಯಾಂಪ್‌ನ ನಿವಾಸಿಗಳು ಹೈರಾಣಾಗಿದ್ದಾರೆ.

ದುರುಗಮುರುಗಿ ಹೊತ್ತು ಭಿಕ್ಷಾಟನೆ ಮಾಡುವುದು, ಚಿಂದಿ ಆಯುವುದು ಹಾಗೂ ಜಾತ್ರೆ, ಸಂತೆಗಳಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡುವುದು ಇವರ ಕಾಯಕ. ಕೆಲವರು ಆಡು ಸಾಕಣೆ ಕೂಡ ಮಾಡುತ್ತಾರೆ. ಹೆಚ್ಚಿನವರು ದೈನಂದಿನ ಅಗತ್ಯ, ಆಸ್ಪತ್ರೆ ಖರ್ಚು, ವ್ಯಾಪಾರಕ್ಕೆಂದು ಫೈನಾನ್ಸ್ ಕಂಪನಿಗಳಿಂದ ಸಾಲ ಪಡೆದಿದ್ದಾರೆ. ಕುಡಿತದ ಚಟವೂ ಕೆಲವರನ್ನು ಸಾಲಗಾರರನ್ನಾಗಿಸಿದೆ. ಆದರೆ ಸಾಲ ಕೊಟ್ಟವರು ವಿಧಿಸುತ್ತಿರುವ ದುಬಾರಿ ಬಡ್ಡಿ ಹಲವರನ್ನು ಕ್ಯಾಂಪ್ ಬಿಡುವಂತೆ ಮಾಡಿದೆ.

ಬಡ್ಡಿ ಜೊತೆ ದಂಡ: ₹ 10,000 ಸಾಲ ಕೊಟ್ಟರೆ ಅದರಲ್ಲಿ ₹ 1,000 ಕಡಿತಗೊಳಿಸಿರುತ್ತಾರೆ. ಆದರೆ, ಸಾಲದ ಅಷ್ಟೂ ಮೊತ್ತಕ್ಕೆ ಶೇ 10ರ ದರದಲ್ಲಿ ತಿಂಗಳಿಗೆ ₹1,000 ಬಡ್ಡಿ ಕಟ್ಟಬೇಕು. ಒಂದು ದಿನ ತಡವಾದರೂ ₹ 150 ದಂಡ ಹಾಕುತ್ತಾರೆ. ದಂಡ ಪಾವತಿಸದಿದ್ದರೆ ದಿನದ ಲೆಕ್ಕದಲ್ಲಿ ಸಾಲದ ಮೊತ್ತ ಏರಿಕೆಯಾಗುತ್ತದೆ.

'ನಮ್ಮ ಹೆಸರಿಗೆ ಮನೆಯೂ ಇಲ್ಲ, ಆಸ್ತಿಯೂ ಇಲ್ಲ. ಅಂತೆಯೇ ಬ್ಯಾಂಕ್‌ಗಳಲ್ಲಿ ನಮಗೆ ಸಾಲ ಸಿಗುವುದಿಲ್ಲ. ಯಾವುದೇ ಆಧಾರ ಪಡೆಯದೇ ಫೈನಾನ್ಸ್ ಕಂಪನಿಯವರು ಸಾಲ ಕೊಡುತ್ತಾರೆ. ಹೀಗಾಗಿ ಎಷ್ಟೇ ಬಡ್ಡಿ, ಚಕ್ರ ಬಡ್ಡಿ, ವಾರದ ಬಡ್ಡಿ, ದಂಡ ವಿಧಿಸಿದರೂ ಅನಿವಾರ್ಯವಾಗಿ ಸಾಲ ಪಡೆಯುತ್ತೇವೆ' ಎಂದು ಕ್ಯಾಂಪ್ ನಿವಾಸಿ ನಾಗರಾಜ ದುರಗಮುರಗಿ ಹೇಳುತ್ತಾರೆ.

ಹಗಲು ಊರು ಬಿಡುತ್ತೇನೆ: 'ಎರಡು ವರ್ಷಗಳ ಹಿಂದೆ ಆಸ್ಪತ್ರೆ ಖರ್ಚಿಗೆಂದು ₹ 60,000 ಸಾಲ ಪಡೆದಿದ್ದೆ. ಬಡ್ಡಿ, ಚಕ್ರ ಬಡ್ಡಿ ಸೇರಿ ₹ 3 ಲಕ್ಷ ಆಗಿದೆ. ಅಸಲು ಇರಲಿ ಬಡ್ಡಿ ಕಟ್ಟಲೂ ಆಗುತ್ತಿಲ್ಲ. ಸಾಲ ಕೊಟ್ಟವರು ಮನೆಗೆ ಬಂದು ಒದೆಯುತ್ತಾರೆ. ಹೆಂಡತಿ-ಮಕ್ಕಳು, ನೆರೆಯವರ ಎದುರು ಅವಮಾನ, ಹಿಂಸೆ ಆಗುತ್ತದೆ. ಹೀಗಾಗಿ ಹಗಲು ಹೊತ್ತು ಕ್ಯಾಂಪ್‌ನಲ್ಲಿ ಇರುವುದಿಲ್ಲ. ಬಾಳೆಹೊನ್ನೂರು, ಕೊಪ್ಪ, ತೀರ್ಥಹಳ್ಳಿ ಕಡೆ ಹೋಗಿ ಸಿಕ್ಕ ಕೆಲಸ ಮಾಡುತ್ತೇನೆ. ತಡರಾತ್ರಿ ಕದ್ದುಮುಚ್ಚಿ ಮನೆಗೆ ಬಂದು ಹೆಂಡತಿ-ಮಕ್ಕಳ ಮುಖ ನೋಡಿ ನಸುಕಿನಲ್ಲಿ ವಾಪಸ್ ಹೋಗುತ್ತೇನೆ' ಎಂದು ಅವರು ಹೇಳುತ್ತಾರೆ.

ಜಾಮೀನು ಕೊಟ್ಟವರಿಗೂ ಸಂಕಷ್ಟ: ಕ್ಯಾಂಪ್‌ನಲ್ಲಿ ವಾಸವಿದ್ದ ಪುಟ್ಟಸ್ವಾಮಿ ಮಗುವಿಗೆ ಕಾಯಿಲೆ ಇತ್ತು. ಆಸ್ಪತ್ರೆಗೆ ತೋರಿಸಲು ಫೈನಾನ್ಸ್‌ನಿಂದ ಪಡೆದಿದ್ದ ₹ 15,000 ಸಾಲಕ್ಕೆ ಪಕ್ಕದ ಮನೆಯ ಪಾರ್ವತಮ್ಮ ಜಾಮೀನುದಾರರಾಗಿದ್ದರು. ಪುಟ್ಟಸ್ವಾಮಿ ಊರು ಬಿಟ್ಟಿದ್ದಾರೆ. ಜಾಮೀನು ಕೊಟ್ಟಿದ್ದ ಪಾರ್ವತಿ ಸಾಲ ತೀರಿಸಬೇಕಿದೆ. ಬಡ್ಡಿ ಸೇರಿ ಸಾಲದ ಮೊತ್ತ ₹ 60,000 ಆಗಿದೆ.

'ಪತಿ ಶಿವು ಕಾಮಾಲೆಯಿಂದ ಮೂರು ವರ್ಷಗಳ ಹಿಂದೆ ಮೃತಪಟ್ಟಿದ್ದು, ಮೆಗ್ಗಾನ್ ಆಸ್ಪತ್ರೆಯಲ್ಲಿ ವೈದ್ಯರು ಕೈ ಚೆಲ್ಲಿದಾಗ ಮಣಿಪಾಲಕ್ಕೆ ಕರೆದೊಯ್ದಿದ್ದೆ. ಆಗ ಚಿಕಿತ್ಸೆಗೆ ಬೇರೆಬೇರೆ ಫೈನಾನ್ಸ್ ಕಂಪನಿಗಳಿಂದ ಪಡೆದಿದ್ದ ಸಾಲಕ್ಕೆ ಬಡ್ಡಿ ಸೇರಿ ಈಗ ₹ 2.50 ಲಕ್ಷ ಆಗಿದೆ. ಚಿಂದಿ ಆರಿಸಿ ದಿನಕ್ಕೆ ₹ 400 ದುಡಿಯುತ್ತೇನೆ. ನಿತ್ಯ ₹ 200 ಬಡ್ಡಿಗೆ ಜಮಾ ಆಗುತ್ತಿದೆ. ಉಳಿದ ದುಡ್ಡಿನಲ್ಲಿ ನಾಲ್ವರು ಮಕ್ಕಳನ್ನು ಸಾಕಬೇಕು. ಸಾಲ ಈ ಜನ್ಮದಲ್ಲಿ ತೀರುತ್ತದೆಯೋ ಇಲ್ಲವೋ ಗೊತ್ತಿಲ್ಲ' ಎಂದು ಮಂಜುಳಾ ಹೇಳಿದರು.

'ನಮ್ಮ ಜನ ಬುದ್ಧಿವಂತರಲ್ಲ. ಫೈನಾನ್ಸ್ ಕಂಪನಿಯವರು ಕಷ್ಟಕ್ಕೆ ಸಾಲ ಕೊಟ್ಟಿರುತ್ತಾರೆ. ತೀರಿಸದಿದ್ದರೆ ಅನ್ಯಾಯ ಮಾಡಿದಂತಾಗುತ್ತದೆ. ಅವರ ಋಣ ಏಕೆ ಎಂಬ ಪಾಪ ಪ್ರಜ್ಞೆಯಿಂದಲೂ ಸಾಲ-ಬಡ್ಡಿ ಕಟ್ಟುತ್ತಾ ಹೋಗುತ್ತಾರೆ. ಇಲ್ಲಿನ ಶೇ 70 ಮಂದಿ ಫೈನಾನ್ಸ್, ಸ್ವ-ಸಹಾಯ ಸಂಘಗಳಿಂದ ಸಾಲ ಪಡೆದಿದ್ದಾರೆ' ಎಂದು ಕ್ಯಾಂಪ್‌ನ ಹಿರಿಯ ಗಂಗಣ್ಣ ಹೇಳುತ್ತಾರೆ.



ಶಿವಮೊಗ್ಗದ ಬೈಪಾಸ್ ರಸ್ತೆಯ ಎಂಆರ್‌ಎಸ್ ಸರ್ಕಲ್ ಬಳಿಯ ಅಲೆಮಾರಿ ಕ್ಯಾಂಪ್‌ನ ನೋಟ ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್

ಸಾಲ ಕೊಟ್ಟವರಿಂದ ಆಗುತ್ತಿರುವ ತೊಂದರೆ ಬಗ್ಗೆ ಕ್ಯಾಂಪ್‌ನ ನಿವಾಸಿಗಳು ಗಮನಕ್ಕೆ ತಂದರೆ ಜಿಲ್ಲಾಡಳಿತ ಅವರಿಗೆ ನೆರವಾಗಲಿದೆ. ಪೊಲೀಸರ ಮೂಲಕ ರಕ್ಷಣೆ ಕೊಡಿಸಲಾಗುವುದು

ಗುರುದತ್ತ ಹೆಗಡೆ, ಶಿವಮೊಗ್ಗ ಜಿಲ್ಲಾಧಿಕಾರಿ

ಅಲೆಮಾರಿಗಳಿಗೆ ಭದ್ರತೆ, ಶಿಕ್ಷಣ ಎರಡೂ ಇಲ್ಲ. ನಿಗಮದಲ್ಲೂ ₹ 2.50 ಲಕ್ಷದವರೆಗೆ ಆಧಾರ ರಹಿತ ಕಿರುಸಾಲ ಕೊಡುವ ವ್ಯವಸ್ಥೆ ಇದೆ. ಅಧಿಕಾರಿಗಳನ್ನು ಕಳುಹಿಸಿ ಜಾಗೃತಿ ಮೂಡಿಸಲಾಗುವುದು

ಜಿ.ಪಲ್ಲವಿ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ

ಠಾಣೆಗೆ ಹೋಗಲ್ಲ.. ಊರು ಬಿಡುತ್ತೇವೆ..!

'ಕೆಲವರು ಸಾಲ ಕೊಡಲು ಆಧಾರ್ ಕಾರ್ಡ್, ವೋಟರ್ ಐಡಿ, ರೇಷನ್ ಕಾರ್ಡ್ ಪಡೆಯುತ್ತಾರೆ. ಸಾಲ ವಸೂಲಿಗೆ ರೌಡಿಗಳನ್ನು ಸಾಕಿಕೊಂಡಿದ್ದಾರೆ. ನಿಗದಿತ ಅವಧಿಯಲ್ಲಿ ಕಟ್ಟದಿದ್ದರೆ ಒದ್ದು ಅವಾಚ್ಯವಾಗಿ ನಿಂದಿಸುತ್ತಾರೆ. ಅವರಿಗೆ ನಮ್ಮ ಕ್ಯಾಂಪ್‌ನಲ್ಲೇ ಮಾಹಿತಿದಾರರು ಇದ್ದಾರೆ. ನಾವು ಪೊಲೀಸ್ ಠಾಣೆಗೆ ಹೋಗುವುದು ಗೊತ್ತಾದರೂ ಮತ್ತೆ ಬಂದು ಒದೆಯುತ್ತಾರೆ. ಹೀಗಾಗಿ ಠಾಣೆಯತ್ತ ತಲೆ ಹಾಕುವುದಿಲ್ಲ. ಬದಲಿಗೆ ಊರು ಬಿಡುತ್ತೇವೆ' ಎಂದು ನಾಗರಾಜ ಹೇಳುತ್ತಾರೆ.

ಬೀದಿ ದೀಪದ ಕೆಳಗೆ ಮಕ್ಕಳ ಓದು..

ಮೂರು ದಶಕಕ್ಕೂ ಹೆಚ್ಚು ಕಾಲದಿಂದ ಅಸ್ತಿತ್ವದಲ್ಲಿದ್ದರೂ ಅಲೆಮಾರಿ ಕ್ಯಾಂಪ್‌ನಲ್ಲಿ ವಿದ್ಯುತ್, ಕುಡಿಯುವ ನೀರು, ಶೌಚಾಲಯದಂತಹ ಯಾವುದೇ ಮೂಲ ಸೌಕರ್ಯ ಇಲ್ಲ. 1ನೇ ತರಗತಿಯಿಂದ ಬಿ.ಎ. ಪ್ರಥಮ ವರ್ಷ ಓದುತ್ತಿರುವ ಮಕ್ಕಳು ಇಲ್ಲಿದ್ದಾರೆ. ಕ್ಯಾಂಪ್‌ನಲ್ಲಿನ ಸೋಲಾರ್ ಬೀದಿ ದೀಪದ ಬೆಳಕು ಸಾಲದೇ ರಾತ್ರಿ ದೇವರಾಜ ಅರಸು ಸಮುದಾಯ ಭವನದ ಎದುರಿನ ವಿದ್ಯುತ್ ದೀಪದ ಕೆಳಗೆ ಓದುತ್ತಾರೆ. ಹೆಣ್ಣುಮಕ್ಕಳು ಕತ್ತಲಾಗುವವರೆಗೂ ಕಾದು ಕುಳಿತು ಸಹ್ಯಾದ್ರಿ ಕಾಲೇಜು ಹಿಂಭಾಗದ ಬಯಲಿನಲ್ಲಿ ಶೌಚ ಕ್ರಿಯೆ ಮುಗಿಸಿಕೊಳ್ಳುತ್ತಾರೆ.



ಮೈಕ್ರೊ ಫೈನಾನ್ಸ್ ಕಂಪನಿ ಅಕ್ರಮ ವಿರೋಧಿ ಮಹಿಳೆಯರ ವೇದಿಕೆಯ ಸದಸ್ಯರು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಮನವಿ ಸಲ್ಲಿಸಿದರು

'ಮೈಕ್ರೊ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣಕ್ಕೆ ಕಾನೂನು ತನ್ನಿ'

ಬೆಂಗಳೂರು: 'ಮೈಕ್ರೊಫೈನಾನ್ಸ್ ಸಂಸ್ಥೆಗಳ ನಿಯಂತ್ರಣಕ್ಕೆ ರಾಜ್ಯ ಸರ್ಕಾರವು ಕಾನೂನು ರೂಪಿಸಬೇಕು' ಎಂದು ಒತ್ತಾಯಿಸಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ 'ಮೈಕ್ರೊಫೈನಾನ್ಸ್ ಅಕ್ರಮ ವಿರೋಧಿ ಮಹಿಳೆಯರ ವೇದಿಕೆ' ಮನವಿ ಸಲ್ಲಿಸಿದೆ.

'ಮೈಕ್ರೊಫೈನಾನ್ಸ್‌ಗಳ ನಿಯಂತ್ರಣಕ್ಕೆ ಅಗತ್ಯ ಕಾನೂನನ್ನು ಜಾರಿಗೆ ತರುವುದಾಗಿ ಬೆಳಗಾವಿ ವಿಧಾನ ಮಂಡಲ ಅಧಿವೇಶನದಲ್ಲಿ ಹೇಳಿದ್ದೀರಿ. ರಾಜ್ಯದ ಎಲ್ಲ ಗ್ರಾಮೀಣ ಭಾಗದಲ್ಲೂ ಈ ಸಮಸ್ಯೆ ಬಿಗಡಾಯಿಸಿದೆ. ಸುಲಭಕ್ಕೆ ಸಾಲ ನೀಡುವ ನೆವದಲ್ಲಿ ಮಹಿಳೆಯರನ್ನು ಅತೀವ ಬಡ್ಡಿಯ ಸಾಲಕ್ಕೆ ಸಿಲುಕಿಸಲಾಗುತ್ತಿದೆ. ಇದರ ಮೇಲೆ ನಿಯಂತ್ರಣ ಹೇರಬೇಕು' ಎಂದು ವೇದಿಕೆಯ ವಿ.ಗಾಯತ್ರಿ ಕೋರಿದ್ದಾರೆ.

ಮೈಕ್ರೊಫೈನಾನ್ಸ್‌ಗಳ ಹಾವಳಿಯ ಬಗ್ಗೆ ಜನವಾದಿ ಮಹಿಳಾ ಸಂಘಟನೆ, ಜಾಗೃತಿ ಸಂಸ್ಥೆ ಮತ್ತು ಆರ್‌ಎಲ್‌ಎಚ್‌ಪಿ ನಡೆಸಿರುವ ಸಮೀಕ್ಷಾ ವರದಿಗಳ ಪ್ರತಿಗಳನ್ನು ವೇದಿಕೆಯು ಸಲ್ಲಿಸಿದೆ.

ಅದನ್ನು ಸ್ವೀಕರಿಸಿದ ಸಚಿವರು, 'ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಿ' ಎಂದು ಹಣಕಾಸು ಇಲಾಖೆ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಅರಮನೆ ಮೈದಾನ ಸುಪರ್ದಿಗೆ ಸುಗ್ರೀವಾಜ್ಞೆ

ಒಂದನೇ ಪುಟದಿಂದ...

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. 1996ರ ಅಧಿನಿಯಮ ರೂಪಿಸಿದಾಗ ₹11 ಕೋಟಿ ಪರಿಹಾರ ನಿಗದಿ ಮಾಡಲಾಗಿತ್ತು. ಇದರಲ್ಲಿ ಒಂದಷ್ಟು ಭಾಗವನ್ನು ರಾಜವಂಶಸ್ಥರು ಪರಿಹಾರವಾಗಿ ಪಡೆದಿದ್ದಾರೆ. ಅಲ್ಲದೇ, ಈ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿದೆ. ಇದಕ್ಕೆ ಸುಪ್ರೀಂ ಕೋರ್ಟ್‌ನಿಂದ ಯಾವುದೇ ತಡೆಯಾಜ್ಞೆ ಇಲ್ಲ ಎಂದರು.

ಆದರೆ, ಕಳೆದ ಡಿ.10ರಂದು ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನೆ ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಿತು. ಆ ಆದೇಶದ ಪ್ರಕಾರ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ ಸೆಕ್ಷನ್ 45 ಬಿಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತು ಎಂದು ಹೇಳಿದರು.

ಕೇವಲ ಎರಡು ಕಿ.ಮೀ ರಸ್ತೆ ಅಭಿವೃದ್ಧಿಗೆ ₹3,014 ಕೋಟಿ ಎಂದರೆ, ಪ್ರತಿ ಎಕರೆಗೆ ₹200 ಕೋಟಿ ಆಗುತ್ತದೆ. ಇದರಿಂದ ರಾಜ್ಯದಲ್ಲಿ ಆರ್ಥಿಕವಾಗಿ ಗಂಡಾಂತರ ಪರಿಸ್ಥಿತಿ ಉದ್ಭವ ಆಗುತ್ತದೆ. ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗದ ಸ್ಥಿತಿಯೂ ಉದ್ಭವಿಸುತ್ತದೆ ಎಂದು ಸಚಿವರು ಹೇಳಿದರು.

ಈ ಸುಗ್ರೀವಾಜ್ಞೆ ಜಾರಿ ಮಾಡುವುದರಿಂದ ಅಗತ್ಯವಿರುವಷ್ಟು ಜಾಗವನ್ನು ಬಳಸಿಕೊಳ್ಳಲು ಮತ್ತು ಉದ್ದೇಶಿತ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರಕ್ಕೆ ಅಧಿಕಾರ ದೊರೆಯುತ್ತದೆ. ಯಾವುದೇ ನ್ಯಾಯಾಲಯದ ತೀರ್ಪು ಅಥವಾ ಸರ್ಕಾರವು ಈ ಹಿಂದೆ ಕೈಗೊಂಡ ತೀರ್ಮಾನದಂತೆ ಯಾವುದೇ ಮೂಲಸೌಕರ್ಯ ಯೋಜನೆಯಿಂದ ಭಾಗಶಃ ಅಥವಾ ಸಂಪೂರ್ಣವಾಗಿ ಹಿಂದೆ ಸರಿಯಲು ಸುಗ್ರೀವಾಜ್ಞೆ ಅವಕಾಶ ನೀಡುತ್ತದೆ ಎಂದು ಎಚ್.ಕೆ.ಪಾಟೀಲ ವಿವರಿಸಿದರು.

ಒಂದು ವೇಳೆ ಸುಪ್ರೀಂ ಕೋರ್ಟ್ ಸಿವಿಲ್ ಮೇಲ್ಮನವಿ ವಿಚಾರದಲ್ಲಿ ಸರ್ಕಾರದ ಪರವಾಗಿ ಆದೇಶ ನೀಡಿದರೆ, ಮಾರಾಟ ಅಥವಾ ಬೇರೆ ಯಾವುದೇ ರೀತಿಯಲ್ಲಿ ಬಳಕೆಯಾದ ಜಾಗದ ಟಿಡಿಆರ್ ಮೊತ್ತವನ್ನು ಹಿಂಪಡೆಯುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಸುಗ್ರೀವಾಜ್ಞೆಯ ಮೂಲಕ ಅಧಿಕಾರ ಪಡೆಯುವುದೇ ಸೂಕ್ತ ಎಂದು ಸಂಪುಟ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಎಂದು ಹೇಳಿದರು. ಕೆಲವೇ ದಿನಗಳಲ್ಲಿ ಈ ಪ್ರಕರಣದ ವಿಚಾರಣೆ ಬರಲಿದ್ದು, ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರವನ್ನೂ ಸಲ್ಲಿಸಬೇಕಾಗಿರುವ ಕಾರಣ ತುರ್ತು ಸಂಪುಟ ಸಭೆ ನಡೆಸಲಾಯಿತು ಎಂದೂ ಪಾಟೀಲ ತಿಳಿಸಿದರು.

'ಹೊಸೂರು ವಿಮಾನ ನಿಲ್ದಾಣ: ವಿಳಂಬ ಬೇಡ'

ಚೆನ್ನೈ: ಹೊಸೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣದ ಕಾಮಗಾರಿಯನ್ನು ವಿಳಂಬಗೊಳಿಸಬಾರದು ಎಂದು ವಿವಿಧ ಕೈಗಾರಿಕೆಗಳ ಒಕ್ಕೂಟಗಳು ತಮಿಳುನಾಡು ಸರ್ಕಾರಕ್ಕೆ ಮನವಿ ಮಾಡಿವೆ.

ಹೊಸೂರಿನ ತನೇಜಾ ಏರೋಸ್ಪೇಸ್ ಮತ್ತು ಏವಿಯೇಷನ್ ಲಿಮಿಟೆಡ್ ಒಡೆತನದ ಖಾಸಗಿ ವಿಮಾನ ನಿಲ್ದಾಣದ ಸಮೀಪದಲ್ಲಿ ರುವ ಗ್ರಾಮಗಳು ಹೊಸ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸೂಕ್ತ ಜಾಗ ಎಂದು ಹೊಸೂರು ಕೈಗಾರಿಕೆಗಳ ಒಕ್ಕೂಟ ಹಾಗೂ ಹೊಸೂರು ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳ ಒಕ್ಕೂಟ ಅಭಿಪ್ರಾಯಪಟ್ಟಿವೆ.

ಡಿಎಂಕೆ ಸರ್ಕಾರದ ಮಹತ್ವಾಕಾಂಕ್ಷೆಯ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಯೋಜನೆಗಾಗಿ ಹೊಸೂರು ಮತ್ತು ಸುತ್ತಮುತ್ತಲಿನ 5 ಸಂಭಾವ್ಯ ತಾಣಗಳನ್ನು ತಮಿಳುನಾಡು ಸರ್ಕಾರದ ಕೋರಿಕೆಮೇರೆಗೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ) ಅಧ್ಯಯನ ಮಾಡಿತ್ತು ಅದರಲ್ಲಿ ಎರಡು ಸ್ಥಳಗಳನ್ನು ಆಯ್ಕೆ ಮಾಡಲಾಗಿದ್ದು, ಎಎಐ ಅಧ್ಯಯನದ ಬಳಿಕ ಒಂದು ತಾಣವನ್ನು ಅಂತಿಮಗೊಳಿಸಲಿದೆ.

ಜೇವರ್ಗಿ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ಶಾಲೆಗೆ ಹೋಗಿದ್ದ ಹನ್ನೊಂದು ವರ್ಷದ ಬಾಲಕಿಯನ್ನು ಆಟೊದಲ್ಲಿ ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿರುವ ಬಗ್ಗೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಆರೋಪಿ ಅಬ್ಬಾಸ್ ಅಲಿ ಜಾಫರ್ ಗೌನಳ್ಳಿ (21) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'5ನೇ ತರಗತಿ ಓದುತ್ತಿದ್ದ ನನ್ನ ಮಗಳು ಅಬ್ಬಾಸ್ ಅಲಿಯ ಆಟೊರಿಕ್ಷಾದಲ್ಲಿ ಶಾಲೆಗೆ ಹೋಗಿಬರುತ್ತಿದ್ದಳು. ಜ.20ರಂದು ಸಂಜೆ ಮಗಳನ್ನು ಆಟೊದಲ್ಲಿ ಅಪಹರಿಸಿದ ಅಬ್ಬಾಸ್‌ಅಲಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂದು ಬಾಲಕಿಯ ತಾಯಿ ದೂರಿನಲ್ಲಿ ಆರೋಪಿಸಿದ್ದಾರೆ.

'ದೂರು ದಾಖಲಾದ ದಿನವೇ ಆರೋಪಿ ಅಬ್ಬಾಸ್ ಅಲಿಯನ್ನು ಬಂಧಿಸಲಾಗಿದೆ. ಈಗ ಆತ ಇಲ್ಲಿ ಆಟೊ ಚಾಲನೆ ಕೆಲಸ ಮಾಡುತ್ತಿಲ್ಲ. ಬೆಂಗಳೂರಿಗೆ ದುಡಿಯಲು ಹೋಗಿ ವಾಪಸ್ ಬಂದಿದ್ದಾಗ ಈ ಕೃತ್ಯ ಎಸಗಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಜೇವರ್ಗಿ ಠಾಣೆ ವ್ಯಾಪ್ತಿಯಲ್ಲಿ ಈಚೆಗೆ ಯುವಕ ಮೆಹಬೂಬ್ ನೀಡಿದ ಕಿರುಕುಳಕ್ಕೆ ಬೇಸತ್ತು 8ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು. ಕಳೆದ ವಾರ ಜೇವರ್ಗಿ ಬಂದ್ ಮಾಡಿ ಪ್ರತಿಭಟಿಸಲಾಗಿತ್ತು.

20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅತಂತ್ರ

ಬೋಧನೆ ಮುಗಿದರೂ ನಡೆಯದ ಪರೀಕ್ಷೆ

• ಬಸವರಾಜ ಹವಾಲ್ದಾರ


ಬಾಗಲಕೋಟೆ: ಪಠ್ಯ ಬೋಧನೆ ಮುಗಿದು ತಿಂಗಳಾದರೂ ಉತ್ತರ ಪತ್ರಿಕೆಗಳ ಕೊರತೆಯಿಂದ ಬಾಗಲಕೋಟ ವಿಶ್ವವಿದ್ಯಾಲಯದ ಪದವಿಯ ಒಂದು ಹಾಗೂ ಮೂರನೇ ಸೆಮಿಸ್ಟರ್ ಪರೀಕ್ಷೆಗಳು ನಡೆದಿಲ್ಲ. 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಯ ನಿರೀಕ್ಷೆಯಲ್ಲಿದ್ದಾರೆ.

ಶೈಕ್ಷಣಿಕ ವೇಳಾಪಟ್ಟಿಯಂತೆ ಪದವಿಯ ಬಿ.ಎ, ಬಿ.ಕಾಂ, ಬಿ.ಎಸ್‌ಸಿ, ಬಿಬಿಎ, ಬಿಸಿಎ ಒಂದನೇ ಸೆಮಿಸ್ಟರ್ ಡಿಸೆಂಬರ್ 12 ರಂದು, ಪದವಿಯ 3ನೇ ಸೆಮಿಸ್ಟರ್‌ ಪಠ್ಯಬೋಧನೆಯು ಡಿಸೆಂಬರ್ 24 ರಂದು ಪೂರ್ಣಗೊಂಡಿದೆ. ಅಲ್ಲಿಂದ ವಿದ್ಯಾರ್ಥಿಗಳು ಮನೆಯಲ್ಲಿ ಇದ್ದುಕೊಂಡೇ ಅಧ್ಯಯನ ನಡೆಸಿದ್ದಾರೆ. ಆದರೆ, ಪರೀಕ್ಷಾ ವೇಳಾಪಟ್ಟಿ ಪ್ರಕಟವಾಗಿಲ್ಲ.

ಶೈಕ್ಷಣಿಕ ವೇಳಾಪಟ್ಟಿಯಂತೆ ಪಠ್ಯ ಬೋಧನೆ ವಿಳಂಬವಾಗಬಾರದು. ಹೆಚ್ಚುವರಿ ತರಗತಿಗಳ ಮೂಲಕ ಪಠ್ಯ ಪೂರ್ಣಗೊಳಿಸಲು ವಿಶ್ವವಿದ್ಯಾಲಯ ಸೂಚಿಸಿತ್ತು. ಹಲವು ಕಾಲೇಜುಗಳು ಪಠ್ಯ ಬೋಧನೆ ಪೂರ್ಣ ಮಾಡಿವೆ.

ಮುಖ್ಯಾಂಶಗಳು

- 3ಂಗಳಿಂದ ಮನೆಯಲ್ಲಿರುವ ವಿದ್ಯಾರ್ಥಿಗಳು
- ಪರೀಕ್ಷೆ ವಿಳಂಬದಿಂದ ಶೈಕ್ಷಣಿಕ ವರ್ಷ ವಿಳಂಬ
- ಉತ್ತರ ನೀಡಲು ಕಾಲೇಜು ಸಿಬ್ಬಂದಿ ಪರದಾಟ



ಉತ್ತರ ಪತ್ರಿಕೆಗಳ ಮುದ್ರಣ ತಾಂತ್ರಿಕ ಕಾರಣದಿಂದ ವಿಳಂಬವಾಗಿದೆ. ಫೆಬ್ರುವರಿ ಮೊದಲ ವಾರದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು

ಆನಂದ ದೇಶಪಾಂಡೆ, ಕುಲಪತಿ, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 70ಕ್ಕೂ ಹೆಚ್ಚು ಕಾಲೇಜುಗಳಿವೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಮುಂಚಿತವಾಗಿ ಶುಲ್ಕ ಭರಿಸಿರುತ್ತಾರೆ. ಆದರೂ, ವಿಶ್ವ-ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉತ್ತರ ಪತ್ರಿಕೆಗಳನ್ನು ನಿಗದಿತ ಅವಧಿಯಲ್ಲಿ ಪೂರೈಸಲು ಆಗದಿರುವುದು ಹೇಗೆ ಎಂಬ ಪ್ರಶ್ನೆ ವಿದ್ಯಾರ್ಥಿಗಳು ಮತ್ತು ಕಾಲೇಜುಗಳದ್ದು.

'ವಿಶ್ವವಿದ್ಯಾಲಯದಿಂದ ಪರೀಕ್ಷಾ ದಿನಾಂಕ ಪ್ರಕಟಿಸುವುದನ್ನು ಇಂದು, ನಾಳೆ ಎಂದು ಹೇಳಲಾಗುತ್ತಿದೆ. ಆದರೆ, ಈವರೆಗೆ ದಿನಾಂಕ ಪ್ರಕಟಿಸಿಲ್ಲ. ತಿಂಗಳಿಂದ ಮನೆಯಲ್ಲೇ ಅಧ್ಯಯನ ಮಾಡುತ್ತಿದ್ದೇವೆ. ವಿಳಂಬವಾದರೆ, ಮುಂದೆ ಅಕಾಡೆಮಿಕ್ ವರ್ಷ ವಿಳಂಬವಾಗಿ ವಿವಿಧ ಪರೀಕ್ಷೆಗಳಿಗೆ ಹಾಜರಾಗಲು ತೊಂದರೆಯಾಗುತ್ತದೆ' ಎಂದು ವಿದ್ಯಾರ್ಥಿ ಸುರೇಶ ಪಾಟೀಲ ಅಳಲು ತೋಡಿಕೊಂಡರು.

'ಪರೀಕ್ಷೆಗಳು ವಿಳಂಬ ಆಗಿರುವುದರಿಂದ ನಿತ್ಯ ವಿದ್ಯಾರ್ಥಿಗಳು ಕಾಲೇಜಿಗೆ ಬಂದು ಪರೀಕ್ಷೆ ಯಾವಾಗ ಎಂದು ಕೇಳುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೂಡಲೇ ಪರೀಕ್ಷೆ ನಡೆಸಬೇಕು' ಎಂದು ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಅರುಣಕುಮಾರ ಗಾಳಿ ಹೇಳಿದರು.

ಕೊಂಕಣಿ ರಂಗ ಶ್ರೇಷ್ಠ, ಅನುವಾದ ಪುರಸ್ಕಾರ ಪ್ರಕಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ವಿಶ್ವ ಕೊಂಕಣಿ ಕೇಂದ್ರ ನೀಡುವ 2025ನೇ ಸಾಲಿನ ಡಾ.ಪಿ. ದಯಾನಂದ ಪೈ ವಿಶ್ವ ಕೊಂಕಣಿ ರಂಗ ಶ್ರೇಷ್ಠ ಪುರಸ್ಕಾರ ಹಾಗೂ ಅನುವಾದ ಪುರಸ್ಕಾರಗಳನ್ನು ಪ್ರಕಟಿಸಲಾಗಿದೆ.



ರಾಮದಾಸ ಭಟ್



ಗೀತಾ ಶೆಣೈ

ಕೊಂಕಣಿ ರಂಗ ಶ್ರೇಷ್ಠ ಪುರಸ್ಕಾರಕ್ಕೆ ಗುಲ್ವಾಡಿ ರಾಮದಾಸ ದತ್ತಾತ್ರೇಯ ಭಟ್ ಹಾಗೂ ಭಾಷಾನುವಾದ ಪುರಸ್ಕಾರಕ್ಕೆ ಗೀತಾ ಶೆಣೈ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಗಳು ತಲಾ ₹1 ಲಕ್ಷ ನಗದು, ಪ್ರಶಸ್ತಿ ಫಲಕ ಹಾಗೂ ಸನ್ಮಾನ ಒಳಗೊಂಡಿವೆ. ಫೆ. 8ರಂದು ಮಂಗಳೂರಿನಲ್ಲಿ ನಡೆಯಲಿರುವ ವಿಶ್ವಕೊಂಕಣಿ ನಾಟಕೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬಿಜೆಪಿ, ದೆಹಲಿ ಪೊಲೀಸರ ವಿರುದ್ಧ ಎಎಪಿ ಕಿಡಿ; ಪಂಜಾಬ್ ಪೊಲೀಸರ ಭದ್ರತೆ ಒದಗಿಸಲು ಆಗ್ರಹ

ಕೇಜ್ರಿವಾಲ್ ಹತ್ಯೆಗೆ ಸಂಚು: ಆರೋಪ

ನವದೆಹಲಿ (ಪಿಟಿಐ): 'ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ 'ಕೊಲೆ'ಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ, ದೆಹಲಿ ಪೊಲೀಸರಿಂದ ಸಂಚು ನಡೆದಿದೆ' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆರೋಪಿಸಿದೆ.

'ಕೊಲೆಗೆ ಸಂಚು ನಡೆದ ಕಾರಣ ಈ ಹಿಂದೆ ಇದ್ದಂತೆ ಕೇಜ್ರಿವಾಲ್ ಅವರಿಗೆ ಪಂಜಾಬ್ ಪೊಲೀಸರಿಂದಲೇ ಭದ್ರತೆ ಒದಗಿಸಲು ಸೂಚಿಸಬೇಕು' ಎಂದು ಚುನಾವಣಾ ಆಯೋಗಕ್ಕೆ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೆಹಲಿ ಮುಖ್ಯಮಂತ್ರಿ ಆತಿಶಿ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ಈ ಕುರಿತು ನೇರ ಆರೋಪ ಮಾಡಿದರು.

'ಫೆ.5ರ ಚುನಾವಣೆಯಲ್ಲಿ ಎಎಪಿಗೂ ನ್ಯಾಯಯುತ ಅವಕಾಶ ಇರುವಂತೆ ಕ್ರಮ ವಹಿಸಬೇಕು. ಕೇಜ್ರಿವಾಲ್ ಅವರಿಗಿರುವ ಜೀವಬೆದರಿಕೆ ಕುರಿತು ಪರಿಶೀಲಿಸಬೇಕು ಎಂದು ಕೋರಲಾಗಿದೆ' ಎಂದರು.

'ಶಾ ನಿಯಂತ್ರಣದಲ್ಲಿರುವ ದೆಹಲಿ ಪೊಲೀಸರ ಮೇಲೆ ನಮಗೆ ವಿಶ್ವಾಸವಿಲ್ಲ. ಹೀಗಾಗಿ, ಹಿಂದೆ ಇದ್ದಂತೆ ಪಂಜಾಬ್ ಪೊಲೀಸರಿಂದಲೇ ಭದ್ರತೆ ಒದಗಿಸಲು ಕೋರಿದ್ದೇವೆ. ದೆಹಲಿ ಪೊಲೀಸ್ ಇಲಾಖೆ ಸದ್ಯ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿದೆ. ಕೊಲೆ ಸಂಚು ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆಯಂತೆ ಮೂಕ ಪ್ರೇಕ್ಷಕವಾಗಿದೆ' ಎಂದು ಟೀಕಿಸಿದರು.

'ಕೊಲೆ ಸಂಚಿನಲ್ಲಿ ಬಿಜೆಪಿ ಮತ್ತು ದೆಹಲಿ ಪೊಲೀಸ್ ಇಬ್ಬರ ಪಾತ್ರವೂ ಇದೆ. ಒಂದರ ನಂತರ ಮತ್ತೊಂದರಂತೆ ಕೇಜ್ರಿವಾಲ್ ವಿರುದ್ಧ ಹಲ್ಲೆ ಯತ್ನಗಳು ನಡೆದಿವೆ. ಕಳೆದ ವರ್ಷ ಅಕ್ಟೋಬರ್‌ನಲ್ಲೂ ಯತ್ನ ನಡೆದಿತ್ತು. ಸರ್ಕಾರ ತನಿಖೆ ನಡೆಸಿದಾಗ ದಾಳಿಯಲ್ಲಿ ಬಿಜೆಪಿ ಕಾರ್ಯಕರ್ತರ ಪಾತ್ರ ಇರುವುದು ತಿಳಿಯಿತು. ಆದರೆ, ಪೊಲೀಸರು ಕ್ರಮ ಕೈಗೊಂಡಿಲ್ಲ' ಎಂದು ಆತಿಶಿ ದೂರಿದರು.

ಫೆ. 5ರ ವಿಧಾನಸಭೆ ಚುನಾವಣೆ ಹಿನ್ನಲೆಯಲ್ಲಿ ರಾಜಧಾನಿಯಲ್ಲಿ ಕೆಟ್ಟ ರಾಜಕಾರಣ ನಡೆಯುತ್ತಿದೆ. ಕೇಜ್ರಿವಾಲ್ ಅವರಿಗಿರುವ ಭದ್ರತೆ ಹಿಂಪಡೆಯಲು ಬಿಜೆಪಿ ಸಂಚು ನಡೆಸುತ್ತಿದೆ ಎಂದು ಟೀಕಿಸಿದರು.



ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಶುಕ್ರವಾರ ದೆಹಲಿಯ ನವಜೀವನ್ ಕ್ಯಾಂಪ್ ವಲಯದಲ್ಲಿ ಪಾದಯಾತ್ರೆ ನಡೆಸಿದ ಮುಖ್ಯಮಂತ್ರಿ ಆತಿಶಿ ಮತದಾರರೊಬ್ಬರಿಗೆ ಮುಖಾಮುಖಿ ಆದರು ಪಿಟಿಐ ಚಿತ್ರ

ದೆಹಲಿಯಲ್ಲಿ ಯಮುನಾ ನದಿ ಕಲುಷಿತ ಎಂದು ಯೋಗಿ ಆದಿತ್ಯನಾಥ ಟೀಕಿಸಿದ್ದಾರೆ. ಅವರು ತಮ್ಮದೇ ರಾಜ್ಯದ ಮಥುರಾದಲ್ಲಿ ಆ ನದಿ ನೀರು ಕುಡಿಯಬಲ್ಲರೇ?
ಅಖಿಲೇಶ್ ಯಾದವ್
ಸಮಾಜವಾದಿ ಪಕ್ಷದ ಅಧ್ಯಕ್ಷ

ಮೋದಿ ಮತ್ತು ಕೇಜ್ರಿವಾಲ್ ಅಣ್ಣತಮ್ಮಂದಿರಂತೆ. ಒಂದೇ ನಾಣ್ಯದ ಎರಡು ಮುಖಗಳು. ಇಬ್ಬರಿಗೂ ಆರ್‌ಎಸ್‌ಎಸ್ ಸಿದ್ಧಾಂತದ ಹಿನ್ನೆಲೆ ಇದೆ
ಅಸಾದುದ್ದೀನ್ ಒವೈಸಿ
ಎಐಎಂಐಎಂ ಅಧ್ಯಕ್ಷ

ನನಗೆ ನೀಡಿದ್ದ ಪಂಜಾಬ್ ಪೊಲೀಸರ ಭದ್ರತೆ ಹಿಂಪಡೆದಿದ್ದು ಶುದ್ಧ ರಾಜಕಾರಣ. ವೈಯಕ್ತಿಕ ಭದ್ರತೆ, ಸುರಕ್ಷತೆ ವಿಷಯದಲ್ಲಿ ರಾಜಕಾರಣ ಇರಬಾರದು
ಅರವಿಂದ ಕೇಜ್ರಿವಾಲ್
ಎಎಪಿ ಸಂಚಾಲಕ

ಚುನಾವಣಾ ಆಯೋಗ, ದೆಹಲಿ ಪೊಲೀಸರ ಸೂಚನೆಯಂತೆ ಅರವಿಂದ ಕೇಜ್ರಿವಾಲ್ ಅವರಿಗೆ ನೀಡಿದ್ದ ಭದ್ರತೆ ವಾಪಸು ಪಡೆಯಲಾಗಿದೆ
ಗೌರವ್ ಯಾದವ್
ಪೊಲೀಸ್ ಮಹಾನಿರ್ದೇಶಕ, ಪಂಜಾಬ್

ಪ್ರಜಾ ಮತ ಜನತಂತ್ರದ ಹಬ್ಬ

'ಧ್ವನಿವರ್ಧಕ ಧರ್ಮದ ಭಾಗವಲ್ಲ'

ಪ್ರಜಾವಾಣಿ ವಾರ್ತೆ

ಮುಂಬೈ: 'ಧ್ವನಿವರ್ಧಕಗಳ ಬಳಕೆ ಯಾವುದೇ ಧರ್ಮದ ಅಗತ್ಯ ಭಾಗವಲ್ಲ. ಧ್ವನಿವರ್ಧಕಗಳ ಬಳಕೆಗೆ ಅನುಮತಿ ನಿರಾಕರಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಸಮನಾಗುವುದಿಲ್ಲ' ಎಂದು ಬಾಂಬೆ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಶಬ್ದ ಮಾಲಿನ್ಯ(ನಿರ್ವಹಣೆ ಮತ್ತು ನಿಯಂತ್ರಣ) ನಿಯಮಗಳು– 2000 ಹಾಗೂ ಮಹಾರಾಷ್ಟ್ರ ಪೊಲೀಸ್ ಕಾಯ್ದೆ ಮತ್ತು ಪರಿಸರ ಸಂರಕ್ಷಣೆ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸುವ ಧ್ವನಿವರ್ಧಕಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ಹೈಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಅಜಯ್ ಗಡ್ಕರಿ ಹಾಗೂ ಶ್ಯಾಮ್ ಚಾಂಡಕ್ ಅವರು ಇದ್ದ ವಿಭಾಗೀಯ ಪೀಠ ನೀಡಿರುವ ಈ ತೀರ್ಪು ರಾಷ್ಟ್ರ ಮಟ್ಟದಲ್ಲಿ ಪರಿಣಾಮ ಬೀರುವ ಸಾಧ್ಯತೆ ಇದೆ.

ಮುಂಬೈನ ಕುರ್ಲಾದ ಜಾಗೊ ನೆಹರೂನಗರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಹಾಗೂ ಶಿವಸೃಷ್ಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟೀಸ್ ಅಸೋಸಿಯೇಷನ್ ಲಿಮಿಟೆಡ್ ಸಲ್ಲಿಸಿದ್ದ ಮೇಲ್ಮನವಿಗಳ ವಿಚಾರಣೆಯನ್ನು ವಿಭಾಗೀಯ ಪೀಠ ನಡೆಸಿದೆ.

ಹಲವು ಮಸೀದಿ, ಮದರಸಾಗಳು, ಶಬ್ದ ಮಾಲಿನ್ಯಕ್ಕೆ ಸಂಬಂಧಿಸಿದ ನಿಯಮ ಉಲ್ಲಂಘಿಸುತ್ತಿದ್ದು, ಇವುಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಈ ಎರಡು ಸಂಘಟನೆಗಳು ಕೋರಿದ್ದವು.

ಮಹಾರಾಷ್ಟ್ರ ಸರ್ಕಾರ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮುಂಬೈ ಪೊಲೀಸನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು.

ಚರ್ಚ್ ಆಫ್ ಗಾಡ್ (ಫುಲ್ ಗಾಸ್ಪೆಲ್) ಇನ್ ಇಂಡಿಯಾ ವರ್ಸಸ್ ಕೆ.ಕೆ. ಆರ್ ಮೆಜೆಸ್ಟಿಕ್ ಕಾಲೊನಿ ವೆಲ್‌ಫೇರ್ ಅಸೋಸಿಯೇಶನ್ ಪ್ರಕರಣದಲ್ಲಿ 'ಸುಪ್ರೀಂ' ತೀರ್ಪನ್ನು ಉಲ್ಲೇಖಿಸಿರುವ ಪೀಠ, 'ಇತರರ ಶಾಂತಿಗೆ ಭಂಗ ತರುವ ಮೂಲಕ ಪ್ರಾರ್ಥನೆ ಸಲ್ಲಿಸಬೇಕು ಎಂದು ಯಾವ ಧರ್ಮವೂ ಹೇಳಿಲ್ಲ ಎಂಬುದು ನಿರ್ವಿವಾದ. ಇನ್ನೊಂದೆಡೆ, ಜೋರಾದ ಧ್ವನಿಯಲ್ಲಿ ಇಲ್ಲವೇ ಡ್ರಮ್ ಬಾರಿಸುವ ಮೂಲಕ ಪ್ರಾರ್ಥನೆ ಸಲ್ಲಿಸುವಂತೆ ಯಾವ ಧರ್ಮವೂ ಉಪದೇಶ ಮಾಡುವುದಿಲ್ಲ' ಎಂದು ಹೇಳಿದೆ.

ತೀರ್ಪಿನ ಪ್ರಮುಖಾಂಶ

- ಹಲವು ಆಯಾಮಗಳಿಂದ ನೋಡಿದಾಗ, ಶಬ್ದವು ಕೂಡ ಆರೋಗ್ಯಕ್ಕೆ ಅಪಾಯ ಒಡ್ಡಬಲ್ಲ ಪ್ರಮುಖ ಅಂಶ. ಯಾವುದೇ ವ್ಯಕ್ತಿಗೆ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡದಿದ್ದಾಗ, ತನ್ನ ಹಕ್ಕುಗಳಿಗೆ ಚ್ಯುತಿ ಬಂದಿದೆ ಎಂದು ಆ ವ್ಯಕ್ತಿ ಹೇಳುವಂತಿಲ್ಲ.
- ಜನರ ಹಿತದೃಷ್ಟಿಯಿಂದ ಧ್ವನಿವರ್ಧಕಗಳ ಬಳಕೆಗೆ ಅನುಮತಿ ನೀಡಬಾರದು
- ಧ್ವನಿವರ್ಧಕಗಳ ಬಳಕೆಗೆ ಅನುಮತಿ ನಿರಾಕರಿಸುವುದು ಸಂವಿಧಾನದ 19 ಅಥವಾ 25ನೇ ವಿಧಿಯ ಉಲ್ಲಂಘನೆ ಆಗುವುದಿಲ್ಲ
- ನಾಗರಿಕ ಸಮಾಜವೊಂದರಲ್ಲಿ, ಧರ್ಮದ ಹೆಸರಿನಲ್ಲಿ ಅಥವಾ ಇತರ ಚಟುವಟಿಕೆಗಳ ಮೂಲಕ ವಯೋವೃದ್ಧರು, ರೋಗಿಗಳು, ವಿದ್ಯಾರ್ಥಿಗಳು ಅಥವಾ ಮಕ್ಕಳ ಸುಖನಿದ್ರೆಗೆ ಭಂಗ ತರುವುದಕ್ಕೆ ಅನುಮತಿ ನೀಡಲಾಗದು

ಹೈಕೋರ್ಟ್ ಸುದ್ದಿ

ಸಾಧ್ವಿಯಾದ ಬಾಲಿವುಡ್ ಮಾಜಿ ನಟಿ ಮಮತಾ ಕುಲಕರ್ಣಿ

ಪ್ರಜಾವಾಣಿ ವಾರ್ತೆ

ಮುಂಬೈ: ಬಾಲಿವುಡ್‌ನ ಮಾಜಿ ನಟಿ, ರೂಪದರ್ಶಿ ಮಮತಾ ಕುಲಕರ್ಣಿ ಅವರು ಸನ್ಯಾಸ ಸ್ವೀಕರಿಸಿದ್ದಾರೆ. 52 ವರ್ಷ ವಯಸ್ಸಿನ ಅವರು ಇನ್ನು ಮುಂದೆ 'ಯಾಮೈ ಮಮತಾ ನಂದಗಿರಿ' ಹೆಸರಿನಿಂದ ಗುರುತಿಸಿಕೊಳ್ಳುವರು.

ಚಿತ್ರರಂಗದಿಂದ ನಿರ್ಗಮಿಸಿದ್ದ ಅವರು ಕೆಲ ತಿಂಗಳ ಹಿಂದಷ್ಟೇ, ಮತ್ತೆ ಸುಮಾರು 25 ವರ್ಷಗಳ ಬಳಿಕ ಮುಂಬೈಗೆ ಮರಳಿದ್ದರು. ಇಲ್ಲಿನ ಕಿನ್ನರ್ ಅಖಾಡದಲ್ಲಿ ಸನ್ಯಾಸ ದೀಕ್ಷೆ ಸ್ವೀಕರಿಸುವರು.

ಸದ್ಯ ಅವರು ಮಹಾಕುಂಭಮೇಳದಲ್ಲಿ ಅಧ್ಯಾತ್ಮ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.



ಮಮತಾ ಕುಲಕರ್ಣಿ

'ಮಮತಾ ಕುಲಕರ್ಣಿ ನನ್ನ ಜೊತೆ 10 ವರ್ಷದಿಂದ ಸಂಪರ್ಕದಲ್ಲಿದ್ದಾರೆ. ಸನಾತನ ಧರ್ಮಕ್ಕೆ ಬದ್ಧವಾಗಿರುವುದಾಗಿ ಅವರು ತಿಳಿಸಿದ್ದಾರೆ' ಎಂದು ಮಹಾಂಡಲೇಶ್ವರ ಆಚಾರ್ಯ ಲಕ್ಷ್ಮಿ ನಾರಾಯಣ ತ್ರಿಪಾಠಿ ಅವರು ತಿಳಿಸಿದರು.

ಕೇಸರಿ ಬಣ್ಣದ ರುಮಾಲು ಧರಿಸಿರುವ ಚಿತ್ರವನ್ನು ಮಮತಾ ಕುಲಕರ್ಣಿ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ವಿಕಿ ಗೋಸ್ವಾಮಿ ಜೊತೆ ವಿವಾಹ ಆಗಿದ್ದ ಅವರು, ಕೆಲ ವರ್ಷ ಆಫ್ರಿಕಾದಲ್ಲಿ ವಾಸವಿದ್ದರು. ಮಾದಕ ವಸ್ತು ಪ್ರಕರಣ ಸಂಬಂಧ ಅಮೆರಿಕದ ತನಿಖಾ ಸಂಸ್ಥೆಯ ತನಿಖೆಗೂ ಒಳಪಟ್ಟಿದ್ದರು.

ಅತ್ಯಾಚಾರ: ಆಟೊ ಚಾಲಕ ಬಂಧನ

ಮುಂಬೈ: ಇಲ್ಲಿನ ಉಪನಗರದಲ್ಲಿ 20 ವರ್ಷದ ಮಹಿಳೆ ಮೇಲೆ ಆಟೊ ಚಾಲಕ ಅತ್ಯಾಚಾರವೆಸಗಿದ್ದು, ಆತನನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿ ರಾಜರತನ್ ಸದಾಶಿವ ವಲ್ವಾಲ್‌ನನ್ನು ಗುರುವಾರ ರಾತ್ರಿ ಬಂಧಿಸಲಾಗಿದೆ. ಆರೋಪಿ ಬುಧವಾರ ಈ ಕೃತ್ಯ ಎಸಗಿದ ನಂತರ, ಮಹಿಳೆಯನ್ನು ಮುಂಬೈನ ಗೋರೆಗಾಂವ್ ಪ್ರದೇಶದಲ್ಲಿ ಪಶ್ಚಿಮ ರೈಲ್ವೆ ಮಾರ್ಗದಲ್ಲಿರುವ ರಾಮಮಂದಿರ ನಿಲ್ದಾಣದ ಬಳಿ ಬಿಟ್ಟು ಹೋಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತೆ ನೆರೆಯ ಪಾಲ್ಘರ್ ಜಿಲ್ಲೆಯ ವಸೈ-ವಿರಾರ್ ಉಪನಗರದವರು.

ಹಲ್ಲೆ ಪ್ರಕರಣ: ಸೈಫ್ ಹೇಳಿಕೆ ದಾಖಲು

ಮುಂಬೈ (ಪಿಟಿಐ): ಕಳೆದ ವಾರ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರ ಹೇಳಿಕೆಯನ್ನು ಬಾಂದ್ರಾ ಪೊಲೀಸರು ದಾಖಲಿಸಿಕೊಂಡಿದ್ದಾರೆ.

'ತನ್ನ ಮೇಲೆ ನಡೆದ ದಾಳಿ ಹಾಗೂ ತನ್ನ ಕುಟುಂಬದವರನ್ನು ಹೇಗೆ ರಕ್ಷಿಸಲು ಪ್ರಯತ್ನಿಸಿದೆ ಎಂಬುದರ ಕುರಿತು ಸೈಫ್ ವಿವರಿಸಿದ್ದಾರೆ. ಅಲ್ಲದೆ ದಾಳಿಕೋರನನ್ನು ನಟ ಗುರುತಿಸಿದ್ದಾರೆ' ಎಂದೂ ಅವರು ತಿಳಿಸಿದ್ದಾರೆ.

ಘಟನೆ ಕುರಿತು ಸೈಫ್ ಅವರ ಪತ್ನಿ ಕರೀನಾ ಕಪೂರ್ ಮತ್ತು ಅವರ ಮನೆ ಸಿಬ್ಬಂದಿ ಹೇಳಿಕೆಗಳನ್ನೂ ಪೊಲೀಸರು ಈಗಾಗಲೇ ದಾಖಲಿಸಿಕೊಂಡಿದ್ದಾರೆ.

ಈ ಪ್ರಕರಣದ ಆರೋಪಿ, ಶರೀಫುಲ್ ಇಸ್ಲಾಂ ಶೆಹಜಾದ್ ಮೊಹಮ್ಮದ್ ರೋಹಿಲ್ಲಾ ಅಮೀನ್ ಫಕೀರ್ (30) ಉರುಫ್ ವಿಜಯ್ ದಾಸ್ ಖಾನ್ ಅನ್ನು ಪೊಲೀಸರು ಬಂಧಿಸಿದ್ದಾರೆ.

29ರವರೆಗೂ ಪೊಲೀಸರ ವಶಕ್ಕೆ: ಆರೋಪಿಯನ್ನು ಪೊಲೀಸರು ಇಲ್ಲಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಶುಕ್ರವಾರ ಹಾಜರುಪಡಿಸಿದರು. ಕೋರ್ಟ್ ಆರೋಪಿಯನ್ನು ಜ. 29ರವರೆಗೂ ಪೊಲೀಸರ ವಶಕ್ಕೆ ಒಪ್ಪಿಸಿ ಆದೇಶಿಸಿತು.

'ಮಗನ ವಿರುದ್ಧ ಸುಳ್ಳು ಆರೋಪ'

'ನಟ ಸೈಫ್ ಅಲಿ ಖಾನ್‌ಗೆ ಇರಿದಿರುವ ಪ್ರಕರಣದಲ್ಲಿ ನನ್ನ ಮಗನನ್ನು ತಪ್ಪಾಗಿ ಆರೋಪಿ ಮಾಡಲಾಗಿದೆ. ಇದರ ವಿರುದ್ಧ ಬಾಂಗ್ಲಾದೇಶ ಸರ್ಕಾರ, ಭಾರತದ ರಾಯಭಾರಿ ಕಚೇರಿಗೆ ಮನವಿ ಸಲ್ಲಿಸಲಾಗುವುದು' ಎಂದು ಬಂಧಿತ ಆರೋಪಿಯ ತಂದೆ ಹೇಳಿದ್ದಾರೆ.

ಆರೋಪಿ ಶರೀಫುಲ್ ಇಸ್ಲಾಂ ತಂದೆ ಮೊಹಮ್ಮದ್ ರುಹುಲ್ ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, 'ಸಿಸಿಟಿವಿ ಕ್ಯಾಮೆರಾದಲ್ಲಿ ಕಂಡುಬಂದಿದ್ದ ವ್ಯಕ್ತಿ ಶರೀಫುಲ್ ಅಲ್ಲ. ಹೀಗಾಗಿ, ಮಗನನ್ನು ತಪ್ಪಾಗಿ ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಗಿದೆ' ಎಂದಿದ್ದಾರೆ.

ಅತ್ಯಾಚಾರ: ಮರಣದಂಡನೆ ಕೋರಿ ಅರ್ಜಿ

ಕೋಲ್ಕತ್ತ (ಪಿಟಿಐ): ಇಲ್ಲಿನ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಮೇಲೆ ನಡೆದಿದ್ದ ಅತ್ಯಾಚಾರ ಮತ್ತು ಕೊಲೆ ಕೃತ್ಯದ ಅಪರಾಧಿ ಸಂಜಯ್‌ರಾಯ್‌ಗೆ ಮರಣದಂಡನೆ ವಿಧಿಸಬೇಕು ಎಂದು ಕೋರಿ ಸಿಬಿಐ, ಹೈಕೋರ್ಟ್‌ಗೆ ಮೇಲ್ಮನವಿಯನ್ನು ಶುಕ್ರವಾರ ಸಲ್ಲಿಸಿದೆ.

ಸಿಬಿಐ ಅರ್ಜಿಯನ್ನು ಜ.27ರಂದು ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದು ವಿಭಾಗೀಯ ಪೀಠದ ನೇತೃತ್ವ ವಹಿಸಿರುವ ನ್ಯಾಯಮೂರ್ತಿ ದೇಬಂಗ್ಸು ಬಸಕ್ ತಿಳಿಸಿದರು. ಪಶ್ಚಿಮ ಬಂಗಾಳ ಸರ್ಕಾರ ಸಲ್ಲಿಸಿರುವ ಇಂತಹುದೇ ಮನವಿಯುಳ್ಳ ಅರ್ಜಿಯ ವಿಚಾರಣೆಯೂ ಇದರ ಜೊತೆಗೆ ನಡೆಯಲಿದೆ ಎಂದು ತಿಳಿಸಿದರು.

'ಕೆಳಹಂತದ ವಿಚಾರಣಾ ನ್ಯಾಯಾಲಯವು ವಿಧಿಸಿರುವ ಶಿಕ್ಷೆ ಸಾಲದು' ಎಂದು ಸಿಬಿಐ ಅರ್ಜಿಯಲ್ಲಿ ಪ್ರತಿಪಾದಿಸಿದೆ. ನ್ಯಾಯಮೂರ್ತಿ ಮೊಹಮ್ಮದ್ ಶಬ್ಬರ್ ರಶೀದಿ ಅವರು ಪೀಠದಲ್ಲಿದ್ದಾರೆ.

ಸಿಬಿಐಯನ್ನು ಪ್ರತಿನಿಧಿಸಿದ್ದ ಉಪ ಸಾಲಿಸಿಟರ್ ಜನರಲ್ ರಾಜದೀಪ್ ಮಜುಂದಾರ್, 'ಕೆಳಹಂತದ ಕೋರ್ಟ್ ಆದೇಶ ಪ್ರಶ್ನಿಸುವ ಹಕ್ಕು, ಪ್ರಕರಣದ ತನಿಖೆ ನಡೆಸಿದ್ದ ಸಿಬಿಐಗೆ ಇದೆ' ಎಂದು ವಾದಿಸಿದ್ದರು.

ಕೆಳಹಂತದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಅನಿರ್ಬನ್ ದಾಸ್ ಅವರು, ಅಪರಾಧಿಗೆ ಜೀವನಪರ್ಯಂತ ಜೈಲು ಶಿಕ್ಷೆ ವಿಧಿಸಿ ಜನವರಿ 20ರಂದು ಆದೇಶ ನೀಡಿದ್ದರು.

'ಇದು, ಗಲ್ಲು ಶಿಕ್ಷೆಯನ್ನು ವಿಧಿಸುವಂತಹ ಅಪರೂಪದಲ್ಲಿ ಅಪರೂಪದ ಪ್ರಕರಣವಲ್ಲ' ಎಂದು ಅವರು ಆದೇಶ ನೀಡುವ ಸಂದರ್ಭದಲ್ಲಿ ಅಭಿಪ್ರಾಯಪಟ್ಟಿದ್ದರು.



ಪುಣ್ಯಸ್ನಾನ... ಮಹಾ ಕುಂಭಮೇಳದ ಪ್ರಯುಕ್ತ ತ್ರಿವೇಣಿ ಸಂಗಮದಲ್ಲಿ ಶುಕ್ರವಾರ ಸಂಜೆ ಪ್ರಸನ್ನಾನಂದನಾಥ ಸ್ವಾಮೀಜಿ, ವಚನಾನಂದ ಸ್ವಾಮೀಜಿ, ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಬಸವಮೂರ್ತಿ ಮಾದಾರಚೆನ್ನಯ್ಯ ಸ್ವಾಮೀಜಿ, ಕಬೀರಾನಂದ ಸ್ವಾಮೀಜಿ ಮತ್ತಿತರರು ಪುಣ್ಯಸ್ನಾನದಲ್ಲಿ ಪಾಲ್ಗೊಂಡರು

ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ ಸ್ಫೋಟ, 8 ಸಾವು

ಭಂಡಾರಾ (ಪಿಟಿಐ): ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯ ಶಸ್ತ್ರಾಸ್ತ್ರ ತಯಾರಿಕೆ ಕಾರ್ಖಾನೆಯಲ್ಲಿ ಶುಕ್ರವಾರ ಸಂಭವಿಸಿದ ಸ್ಫೋಟದಲ್ಲಿ 8 ಮಂದಿ ಮೃತಪಟ್ಟಿದ್ದು, ಇತರೆ ಏಳು ಮಂದಿ ಗಾಯಗೊಂಡಿದ್ದಾರೆ.

ಜಿಲ್ಲಾ ಪೊಲೀಸರ ಪ್ರಕಾರ, ಜವಹರ್ ನಗರದಲ್ಲಿ ಇರುವ ಕಾರ್ಖಾನೆಯ ಎಲ್‌ಟಿಪಿ ಘಟಕದಲ್ಲಿ ಮಧ್ಯಾಹ್ನ ತೀವ್ರ ಸ್ಫೋಟ ಸಂಭವಿಸಿದೆ. ಆ ಸಂದರ್ಭದಲ್ಲಿ 13–14 ಸಿಬ್ಬಂದಿ ಇದ್ದರು. ಸ್ಫೋಟದ ತೀವ್ರತೆಗೆ ಆಸುಪಾಸಿನ ಮೂರು ಗ್ರಾಮಗಳ ವ್ಯಾಪ್ತಿಯಲ್ಲಿ ನಿವಾಸಿಗಳಿಗೆ ಭೂಕಂಪನದ ಅನುಭವವಾಯಿತು.

ಸ್ಫೋಟದ ತೀವ್ರತೆಗೆ ಘಟಕದ ಛಾವಣಿ ಪೂರ್ಣ ಕುಸಿದಿದೆ. ಅವಶೇಷಗಳಡಿ ಸಿಲುಕಿರುವವರ ರಕ್ಷಣೆಗಾಗಿ ತೀವ್ರ ಶೋಧ ಕಾರ್ಯ ನಡೆಸಲಾಯಿತು. ಸ್ಫೋಟಕ್ಕೆ ನಿರ್ದಿಷ್ಟ ಕಾರಣ ಗೊತ್ತಾಗಿಲ್ಲ.

ಪ್ರಾಥಮಿಕ ಮಾಹಿತಿ ಪ್ರಕಾರ, ಸ್ಥಳದಲ್ಲಿಯೇ ಎಂಟು ಜನರು ಸತ್ತಿದ್ದು, ಇತರೆ ಏಳು ಜನರು ಗಾಯಗೊಂಡಿದ್ದಾರೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಸುದ್ದಿಗಾರರಿಗೆ ತಿಳಿಸಿದರು.


₹83 ಸಾವಿರ ದಾಟಿದ ಚಿನ್ನದ ದರ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಮೊದಲ ಬಾರಿಗೆ ಚಿನ್ನದ ದರವು ₹83 ಸಾವಿರ ದಾಟಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ. ಸತತ ಎಂಟು ದಿನಗಳಿಂದ ಚಿನ್ನದ ಧಾರಣೆ ಏರಿಕೆಯ ಹಾದಿ ಹಿಡಿದಿದೆ. ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹200 ಏರಿಕೆಯಾಗಿ, ₹83,100ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ ₹82,700ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಏರಿಕೆಯಾಗಿ, ₹94 ಸಾವಿರ ಆಗಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಮತ್ತು ವ್ಯಾಪಾರ ನೀತಿಗಳಿಂದಾಗಿ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ತಲೆದೋರಿದೆ. ಇದರಿಂದ ಚಿನ್ನ ಖರೀದಿ ಹೆಚ್ಚಿರುವುದರಿಂದ ಬೆಲೆ ಕೂಡ ಏರಿಕೆಯಾಗುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,205
ಇಂದಿನ ಅಂತ್ಯ	23,092
▼	113
ದಿನದ ಕನಿಷ್ಠ	23,050

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹451-685
ದ್ವಿತಳಿ (ಬಿ.ವಿ)	₹325-843

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1440 (1450)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1360 (1365)
ಪಾಮೋಲಿನ್	₹1310 (1310)

ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಸತತ ಎರಡು ದಿನಗಳಿಂದ ಏರಿಕೆ ಕಂಡಿದ್ದ ದೇಶೀಯ ಷೇರುಪೇಟೆಯು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿದೆ.

ರಿಯಾಲ್ಟಿ, ತೈಲ ಮತ್ತು ಅನಿಲ, ಹೆಲ್ತ್‌ಕೇರ್ ವಲಯಗಳ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೂಚ್ಯಂಕಗಳು ಕುಸಿತ ಕಂಡಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 329 ಅಂಶ ಇಳಿಕೆ ಕಂಡು 76,190 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 113 ಅಂಶ ಇಳಿಕೆ ಕಂಡು, 23,092 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಜೊಮಾಟೊ, ಟಾಟಾ ಮೋಟರ್ಸ್, ಇಂಡಸ್ ಇಂಡ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಎಲ್ ಆ್ಯಂಡ್ ಟಿ, ಅಲ್ಟ್ರಾಟೆಕ್ ಸಿಮೆಂಟ್, ಎಚ್‌ಡಿಎಫ್‌ಸಿ ಬ್ಯಾಂಕ್, ಅದಾನಿ ಪೋರ್ಟ್ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಪತಂಜಲಿಗೆ ಖಾರ 'ಭಾರ'

ಮೆಣಸಿನಕಾಯಿ ಪುಡಿ ವಾಪಸ್ ಪಡೆಯಲು ನಿರ್ಧಾರ

ನವದೆಹಲಿ (ಪಿಟಿಐ): ಆಹಾರ ಸುರಕ್ಷತಾ ನಿಯಮಾವಳಿಗಳ ಪಾಲನೆಯಲ್ಲಿ ವಿಫಲವಾಗಿರುವ ಪತಂಜಲಿ ಫುಡ್ ಕಂಪನಿಯು, ಮಾರುಕಟ್ಟೆಯಲ್ಲಿರುವ 4 ಟನ್‌ನಷ್ಟು ಮೆಣಸಿನಕಾಯಿ ಪುಡಿಯನ್ನು ಹಿಂಪಡೆಯಲು ಮುಂದಾಗಿದೆ.

2011ರ ಆಹಾರ ಸುರಕ್ಷತೆ ಮತ್ತು ಮಾನದಂಡಗಳ (ಮಾಲಿನ್ಯ ಕಾರಕಗಳು, ವಿಷಕಾರಿ ವಸ್ತುಗಳು ಮತ್ತು ಕೀಟನಾಶಕದ ಅವಶೇಷ) ಅನುಗುಣವಾಗಿ ಮೆಣಸಿನಕಾಯಿ ಪುಡಿ ತಯಾರಿಸಿಲ್ಲ. ಹೀಗಾಗಿ, ಇದನ್ನು ವಾಪಸ್ ಪಡೆಯಬೇಕು ಎಂದು ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಸೂಚಿಸಿತ್ತು.



'ಮೆಣಸಿನಕಾಯಿ ಪುಡಿ ಸೇರಿ ಇತರೆ ಆಹಾರ ಪದಾರ್ಥಗಳಲ್ಲಿ ಇರಬೇಕಾದ ಕೀಟನಾಶಕ ಅವಶೇಷಗಳ ಪ್ರಮಾಣದ ಮಿತಿಯನ್ನು ಪ್ರಾಧಿಕಾರವು ನಿಗದಿಪಡಿಸಿದೆ. ಕಂಪನಿಯು ತಯಾರಿಸಿದ 200 ಗ್ರಾಂ ತೂಕದ ಮೆಣಸಿನಕಾಯಿ ಪುಡಿ ಪ್ಯಾಕೆಟ್‌ಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ. ಇವುಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೀಟನಾಶಕ ಅಂಶ ಇರುವುದು ಕಂಡು ಬಂದಿದೆ' ಎಂದು ಕಂಪನಿಯ ಸಿಇಒ ಸಂಜೀವ್ ಅಸ್ಥಾನ ಸ್ಪಷ್ಟನೆ ನೀಡಿದ್ದಾರೆ.

ಮೆಣಸಿನಕಾಯಿ ಪುಡಿ ಪ್ಯಾಕೆಟ್‌ಗಳನ್ನು (ಬ್ಯಾಚ್ ಸಂಖ್ಯೆ: ಎಜೆಡಿ2400012) ಖರೀದಿಸಿರುವ ಗ್ರಾಹಕರು ಕಂಪನಿಗೆ ವಾಪಸ್ ನೀಡಬೇಕು. ಅವರಿಗೆ ಹಣ ಮರುಪಾವತಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಕಂಪನಿಗೆ ಆಹಾರ ಪದಾರ್ಥ ಗಳನ್ನು ಪೂರೈಸುವ ಕೃಷಿ ಉತ್ಪಾದಕರನ್ನು ಮೌಲ್ಯಮಾಪನ ಮಾಡಲಾಗುತ್ತಿದೆ. ಆ ಮೂಲಕ ಗುಣಮಟ್ಟಕ್ಕೆ ಒತ್ತು ನೀಡಲಾಗುತ್ತಿದೆ. ಪ್ರಾಧಿಕಾರದ ಎಲ್ಲಾ ನಿಯಮಾವಳಿಗಳನ್ನು ಪಾಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಪ್ರಾಧಿಕಾರದ ಸೂಚನೆ ಮೇರೆಗೆ ಹಿಂಪಡೆಯಲಾಗುತ್ತಿದೆ. ಈ ಬಗ್ಗೆ ವಿತರಕರಿಗೂ ಸೂಚಿಸಲಾಗಿದೆ. ಜಾಹೀರಾತಿನ ಮೂಲಕ ಗ್ರಾಹಕರಿಗೂ ಮಾಹಿತಿ ನೀಡಲಾಗಿದೆ

ಸಂಜೀವ್ ಅಸ್ಥಾನ, ಸಿಇಒ, ಪತಂಜಲಿ ಫುಡ್ಸ್

ಸುದ್ದಿ 2 ನಿಮಿಷ

ರೂಪಾಯಿ ಮೌಲ್ಯ 22 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 22 ಪೈಸೆ ಏರಿಕೆಯಾಗಿದೆ. ಪ್ರತಿ ಡಾಲರ್ ಮೌಲ್ಯ ₹86.22 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ. ಅಲ್ಲದೆ, ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಹೊರಹರಿವಿನ ಪ್ರಮಾಣವು ಅಲ್ಪಮಟ್ಟಿಗೆ ಕಡಿಮೆಯಾಗಿದೆ. ಇದು ರೂಪಾಯಿ ಬಲಗೊಳ್ಳಲು ನೆರವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಆದರೆ, ದೇಶೀಯ ಷೇರುಪೇಟೆ ಮತ್ತು ರೂಪಾಯಿ ಮೌಲ್ಯವು ಸ್ಥಿರತೆ ಕಾಯ್ದುಕೊಳ್ಳುವಲ್ಲಿ ಫೆಬ್ರುವರಿ 1ರಂದು ಮಂಡಿಸಲಿರುವ ಕೇಂದ್ರ ಬಜೆಟ್ ನಿರ್ಣಾಯಕವಾಗಿದೆ ಎಂದು ಹೇಳಿದ್ದಾರೆ.

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ ನೀತಿಗಳಿಂದ 'ಇಟ್ಟಿಗೆ ಡಾಲರ್' ಸೂಚ್ಯಂಕದ ದಾಖಲೆ ಮಟ್ಟಕ್ಕೆ ತಲುಪಿತ್ತು. ಆದರೆ, ಜಾಗತಿಕ ಅನಿಶ್ಚಿತತೆಗಳಿಂದಾಗಿ ಸ್ಥಿರತೆ ಕಾಯ್ದುಕೊಳ್ಳುವಲ್ಲಿ ವಿಫಲವಾದೆ' ಎಂದು ಸಿಆರ್ ಫಾರೆಕ್ಸ್ ಅಡ್ವೈಸರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಪಬಾರಿ ತಿಳಿಸಿದ್ದಾರೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯಲ್ಲಿ ಟ್ರಂಪ್ ಅವರು ಶೀಘ್ರವೇ ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರ ಕಡಿತಗೊಳಿಸಲಿದೆ ಎಂದು ಪ್ರಕಟಿಸಿದ್ದಾರೆ. ಇದು ಡಾಲರ್ ಸೂಚ್ಯಂಕದ ಇಳಿಕೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.



ಏಕರೂಪ ದರ ನಿಗದಿ ಓಲಾ, ಉಬರ್ ಸ್ಪಷ್ಟನೆ

ನವದೆಹಲಿ (ಪಿಟಿಐ): 'ಯಾವುದೇ ಸ್ಥಳಕ್ಕೆ ದರ ನಿಗದಿಗೆ ಸಂಬಂಧಿಸಿದಂತೆ ಏಕರೂಪತೆ ಕಾಯ್ದುಕೊಳ್ಳಲಾಗಿದೆ. ವಿಭಿನ್ನ ದರ ನಿಗದಿಯಂತಹ ಕ್ರಮ ಅನುಸರಿಸುತ್ತಿಲ್ಲ' ಎಂದು ಓಲಾ ಕಂಪನಿಯು ಶುಕ್ರವಾರ ಸ್ಪಷ್ಟಪಡಿಸಿದೆ.

ಗ್ರಾಹಕರು ಐಫೋನ್‌ನಲ್ಲಿ ಬುಕಿಂಗ್ ಮಾಡುತ್ತಿದ್ದಾರೆಯೇ ಅಥವಾ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಬುಕಿಂಗ್ ಮಾಡುತ್ತಿದ್ದಾರೆಯೇ ಎಂಬ ಆಧಾರದ ಮೇಲೆ ಒಂದೇ ಸ್ಥಳಕ್ಕೆ ವಿಭಿನ್ನ ದರ ನಿಗದಿಪಡಿಸಲಾಗುತ್ತಿದೆ ಎಂದು ದೂರಲಾಗಿತ್ತು. ಈ ಬಗ್ಗೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ಓಲಾ ಮತ್ತು ಉಬರ್‌ಗೆ ನೋಟಿಸ್ ನೀಡಿದೆ.

'ಈ ವಿಷಯವು ಕಂಪನಿಯ ಗಮನಕ್ಕೆ ಬಂದ ತಕ್ಷಣವೇ ನ್ಯಾಯಸಮ್ಮತವಾಗಿ ದರ ನಿಗದಿಪಡಿಸುತ್ತಿರುವ ಬಗ್ಗೆ ಸಿಸಿಪಿಎಗೆ ವಿವರಣೆ ನೀಡಲಾಗಿದೆ' ಎಂದು ಓಲಾ ವಕ್ತಾರರು ತಿಳಿಸಿದ್ದಾರೆ. ದರ ನಿಗದಿಗೆ ಸಂಬಂಧಿಸಿದಂತೆ ಕಂಡುಬಂದಿರುವ ತಪ್ಪು ತಿಳಿವಳಿಕೆ ಬಗ್ಗೆ ಸಿಸಿಪಿಎಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿದ್ದಾರೆ. 'ಗ್ರಾಹಕರು ಬಳಸುವ ಫೋನ್‌ಗಳ ಆಧಾರದ ಮೇಲೆ ಬೆಲೆ ನಿಗದಿಪಡಿಸುತ್ತಿಲ್ಲ. ಈ ಕುರಿತು ಸಿಸಿಪಿಎಗೆ ವಿವರಣೆ ನೀಡಲಾಗುವುದು' ಎಂದು ಉಬರ್ ವಕ್ತಾರರು ತಿಳಿಸಿದ್ದಾರೆ.

ಸಕ್ಕರೆ ಕಾರ್ಖಾನೆಗಳಿಂದ ಇಂಧನ ಇಲಾಖೆ ವಿದ್ಯುತ್ ಖರೀದಿ

'ವಿದ್ಯುತ್ ಬಿಲ್ ಪಾವತಿ ಅವಧಿ ಇಳಿಸಿ'

ಪ್ರಜಾವಾಣಿ ವಾರ್ತೆ



ಮುರುಗೇಶ ನಿರಾಣಿ

ಬೆಂಗಳೂರು: 'ಸಕ್ಕರೆ ಕಾರ್ಖಾನೆಗಳಿಂದ ರಾಜ್ಯದ ಇಂಧನ ಇಲಾಖೆಯು ಖರೀದಿಸುತ್ತಿರುವ ವಿದ್ಯುತ್ ಮೇಲಿನ ಬಿಲ್ ಪಾವತಿ ಅವಧಿಯನ್ನು 6 ತಿಂಗಳಿಂದ 15-30 ದಿನಗಳಿಗೆ ಇಳಿಕೆ ಮಾಡಬೇಕು' ಎಂದು ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಸಂಘದ ಅಧ್ಯಕ್ಷ ಮುರುಗೇಶ ನಿರಾಣಿ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಬ್ಬು ಬೆಳೆಗಾರರಿಗೆ ಅನುಕೂಲವಾಗಲಿ ಎಂದು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ರಾಜ್ಯ ಸರ್ಕಾರವೂ ಒಂದು ಹೆಜ್ಜೆ ಮುಂದೆ ಬಂದು ಇರುವ ತೊಡಕುಗಳನ್ನು ನಿವಾರಿಸಬೇಕು' ಎಂದರು.

'ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರವು ಅನುಮತಿ ಕೊಟ್ಟ ನಂತರ ಸಕ್ಕರೆ ಬೆಲೆ ತುಸು ಸುಧಾರಿಸಿದೆ. ಇದರಿಂದ ಬೆಳೆಗಾರರಿಗೆ ತ್ವರಿತವಾಗಿ ಬಾಕಿ ಪಾವತಿ ಮಾಡಲು ಸಾಧ್ಯವಾಗುತ್ತದೆ. ಜತೆಗೆ ಸಕ್ಕರೆ ಕಾರ್ಖಾನೆ ಮಾಲೀಕರು ಬಡ್ಡಿ ಮತ್ತು ಸಾಲ ಪಾವತಿಸಲು ಅನುಕೂಲವಾಗುತ್ತಿದೆ' ಎಂದರು.

'ಸಕ್ಕರೆ ಕಾರ್ಖಾನೆ ಮಾಲೀಕರು ಬೇಡಿಕೆ ಸಲ್ಲಿಸಿದ ಕಾರಣಕ್ಕೆ ಎಥೆನಾಲ್ ಪೂರೈಕೆಗೆ ತೈಲ ಸಂಸ್ಕರಣ ಕಂಪನಿಗಳು ಬಿಲ್ ಪಾವತಿಗೆ ಇದ್ದ 20 ದಿನಗಳ ಅವಧಿಯನ್ನು 10 ದಿನಕ್ಕೆ ಇಳಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಸ್ತಾವ ಸಲ್ಲಿಸಿದ್ದಾರೆ. ಅದು ಜಾರಿಯಾದರೆ ಎಲ್ಲರಿಗೂ ಅನುಕೂಲವಾಗುತ್ತದೆ' ಎಂದರು.

402 ಕೋಟಿ ಲೀ. ಎಥೆನಾಲ್ ಉತ್ಪಾದನೆ


'ಈ ಆರ್ಥಿಕ ವರ್ಷದಲ್ಲಿ ದೇಶದಾದ್ಯಂತ ಇರುವ ಎಲ್ಲ ಸಕ್ಕರೆ ಕಾರ್ಖಾನೆಗಳು 672 ಕೋಟಿ ಲೀಟರ್ ಎಥೆನಾಲ್ ಉತ್ಪಾದಿಸಿವೆ. ಇದರಲ್ಲಿ ಶೇ 40ರಷ್ಟು ಕಬ್ಬಿನಿಂದ ಉತ್ಪಾದಿಸಿದ್ದರೆ, ಶೇ 60ರಷ್ಟು ಅಕ್ಕಿ ಮತ್ತು ಮೆಕ್ಕೆಜೋಳದಿಂದ ಉತ್ಪಾದಿಸಲಾಗಿದೆ' ಎಂದು ಮುರುಗೇಶ ನಿರಾಣಿ ಮಾಹಿತಿ ನೀಡಿದರು.

'ಅಕ್ಕಿ ಮತ್ತು ಮೆಕ್ಕೆಜೋಳದಿಂದ 400 ಕೋಟಿ ಲೀಟರ್ ಮತ್ತು ಕಬ್ಬಿನ ಮೂಲದಿಂದ 272 ಕೋಟಿ ಲೀಟರ್ ಎಥೆನಾಲ್ ಉತ್ಪಾದಿಸಲಾಗಿದೆ. ಪೆಟ್ರೋಲ್ ಮಿಶ್ರಣಕ್ಕೆ ಎಥೆನಾಲ್ ಬಳಸುತ್ತಿರುವುದರಿಂದ ಆದಾಯ ಸುಧಾರಿಸಿದೆ. ಎಥೆನಾಲ್ ಖರೀದಿ ದರ ಏರಿಕೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರಸ್ತಾವ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಎಥೆನಾಲ್ ಉತ್ಪಾದನೆ ಸಹ ಏರಿಕೆ ಆಗಲಿದೆ' ಎಂದರು.

'ಸಕ್ಕರೆ ಕಾರ್ಖಾನೆಗಳು ತ್ಯಾಜ್ಯದಿಂದ ಉತ್ಪಾದಿಸಿದ ವಿದ್ಯುತ್ ಅನ್ನು ರಾಜ್ಯದ ಇಂಧನ ಇಲಾಖೆಯು ಖರೀದಿಸುತ್ತಿದೆ. ಆದರೆ, ಖರೀದಿಸಿದ ಆರು ತಿಂಗಳ ನಂತರ ಬಿಲ್ ಪಾವತಿಗೆ ಅವಕಾಶವಿದೆ. ಪರಿಣಾಮವಾಗಿ ಸಕ್ಕರೆ ಕಾರ್ಖಾನೆ ಮಾಲೀಕರ ಹೊರೆ ಹೆಚ್ಚಾಗುತ್ತಿದೆ. ಆದಾಯವೆಲ್ಲಾ ಸಾಲದ ಮೇಲಿನ ಬಡ್ಡಿಗೆ ಹೋಗುತ್ತದೆ. ಹೀಗಾಗಿ ಬಿಲ್ ಪಾವತಿ ಅವಧಿಯನ್ನು 15ರಿಂದ 30 ದಿನಗಳಿಗೆ ಇಳಿಸಬೇಕು' ಎಂದರು.

'ಕಡಲೆಕಾಳು ಖರೀದಿ: ನೋಂದಣಿ ಶೀಘ್ರ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಅಡಿ ಒಂದು ವಾರದೊಳಗೆ ಕಡಲೆಕಾಳು ಖರೀದಿಗೆ ರೈತರ ಹೆಸರು ನೋಂದಣಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಮನವಿ ಮೇರೆಗೆ ಕೇಂದ್ರ ಸರ್ಕಾರ ಬೆಂಬಲ ಬೆಲೆ ಅಡಿ ಕಡಲೆಕಾಳು ಖರೀದಿಗೆ ಅನುಮತಿ ನೀಡಿದೆ. ಕ್ವಿಂಟಲ್‌ಗೆ ₹5,650 ದರ ನಿಗದಿಪಡಿಸಿದೆ. ಹೆಸರು ನೋಂದಣಿಗೆ 80 ದಿನ ಹಾಗೂ ಖರೀದಿಗೆ 90 ದಿನ ನಿಗದಿಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಖರೀದಿ ಏಜೆನ್ಸಿಗಳಾದ ನಾಫೆಡ್, ಎನ್‌ಸಿಸಿಎಫ್ ಹಾಗೂ ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ, ಕಲಬುರಗಿಯ ಕರ್ನಾಟಕ ರಾಜ್ಯ ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿಯನ್ನು ಖರೀದಿ ಏಜೆನ್ಸಿಗಳಾಗಿ ನೇಮಕ ಮಾಡಿ ಕಡಲೆಕಾಳು ಖರೀದಿ ಮಾಡಬೇಕಾದ ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿದೆ. ರೈತರು ಸಮೀಪದ ಟಿಎಪಿಸಿಎಂಎಸ್, ಎಫ್‌ಪಿಒ ಹಾಗೂ ಪಿಎಸಿಎಸ್‌ಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಧಾರವಾಡ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಖರೀದಿ ಕೇಂದ್ರ ಆರಂಭಿಸಲಾಗುವುದು ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

24-01-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	10100-10100
ದಪ್ಪ ಮಧ್ಯಪ್ರದೇಶ(ಹೊಸ)	8700-8800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1460)
ಒಂದು ವಾರದ ಡೆಲಿವರಿ	1445 (1455)
ಪಾಮ್ ವಾರದ ಡೆಲಿವರಿ	1308 (1308)
ಸೂರ್ಯಕಾಂತಿ ಎಣ್ಣೆ ಕಚ್ಚಾ	1285 (1290)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹80,150 (79,650)
ಬೆಳ್ಳಿ ಕೆ.ಜಿ ₹91,250 (90,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಮೆರಿಕ: ನೂರಾರು ವಲಸಿಗರ ಸೆರೆ– ಶ್ವೇತಭವನ

ಗಡೀಪಾರು ಕಾರ್ಯಾಚರಣೆ ಶುರು



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವಂತೆ, ಅಕ್ರಮ ವಲಸಿಗರನ್ನು ಅಮೆರಿಕದಿಂದ ಗಡೀಪಾರು ಮಾಡುವ ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ. ಇನ್ನೊಂದೆಡೆ, ನೂರಾರು ವಲಸಿಗರನ್ನು ಬಂಧಿಸಲಾಗಿದೆ.

ಅಕ್ರಮ ವಲಸಿಗರನ್ನು ಸೇನೆಯ ವಿಮಾನಗಳ ಮೂಲಕ ದೇಶದಿಂದ ಹೊರಗೆ ಕಳುಹಿಸಲಾಗುತ್ತಿದೆ ಎಂದು ಶ್ವೇತಭವನ ತಿಳಿಸಿದೆ.

'ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ 538 ಅಕ್ರಮ ವಲಸಿಗರನ್ನು ಅಧಿಕಾರಿಗಳು ಬಂಧಿಸಿದ್ದು, ನೂರಾರು ಮಂದಿಯನ್ನು ದೇಶದಿಂದ ಹೊರ ಹಾಕಲಾಗಿದೆ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೊಲಿನ್ ಲೆವಿಟ್ ತಿಳಿಸಿದ್ದಾರೆ.

'ಅಮೆರಿಕದ ಇತಿಹಾಸದಲ್ಲಿಯೇ, ಅಕ್ರಮ ವಲಸಿಗರನ್ನು ಗಡೀಪಾರು ಮಾಡುವ ಭಾರಿ ಪ್ರಮಾಣದ ಕಾರ್ಯಾಚರಣೆ ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಅಮೆರಿಕದಲ್ಲಿ 1.1 ಕೋಟಿ ದಾಖಲೆರಹಿತ ವಲಸಿಗರು ನೆಲಸಿದ್ದಾರೆ ಎಂದು ಅಂದಾಜಿಸಲಾಗಿದೆ.

ಇನ್ನೊಂದೆಡೆ, 'ಬೇರೆ ದೇಶದಲ್ಲಿ ಆಶ್ರಯ ಕೋರುವುದು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ಮಾನವ ಹಕ್ಕು ಎಂಬುದನ್ನು ಎಲ್ಲ ರಾಷ್ಟ್ರಗಳು ನೆನಪಿನಲ್ಲಿಟ್ಟುಕೊಳ್ಳಬೇಕು' ಎಂದು ವಿಶ್ವಸಂಸ್ಥೆಯ ಹಕ್ಕುಗಳ ವಿಭಾಗದ ವಕ್ತಾರೆ ರವೀನಾ ಶಾಮದಾಸಾನಿ ಅವರು ಜಿನೀವಾದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಅಧ್ಯಕ್ಷರಿಗೆ 3ನೇ ಅವಧಿ: ನಿರ್ಣಯ ಮಂಡನೆ

ವಾಷಿಂಗ್ಟನ್(ಪಿಟಿಐ): ಅಮೆರಿಕ ಅಧ್ಯಕ್ಷರೊಬ್ಬರು ಮೂರನೇ ಅವಧಿಗೆ ಅಧಿಕಾರದ ಚುಕ್ಕಾಣಿ ಹಿಡಿಯುವುದಕ್ಕೆ ಅವಕಾಶ ಕಲ್ಪಿಸುವ ಕುರಿತು ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ ಸಂಬಂಧಿಸಿದ ಜಂಟಿ ಸದನ ನಿರ್ಣಯವೊಂದನ್ನು ರಿಪಬ್ಲಿಕನ್ ಸಂಸದರೊಬ್ಬರು ಮಂಡಿಸಿದ್ದಾರೆ.

ಈ ನಿರ್ಣಯವು ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮೂರನೇ ಅವಧಿಗೆ ಆಯ್ಕೆಯಾಗುವುದಕ್ಕೆ ನೆರವಾಗುವ ಉದ್ದೇಶ ಹೊಂದಿದೆ.

ನಿರ್ಣಯ ಮಂಡಿಸಿರುವ ಸಂಸದ ಆ್ಯಂಡಿ ಒಗ್ಲೆಸ್,'ಈ ತಿದ್ದುಪಡಿಯು ಅಧ್ಯಕ್ಷ ಟ್ರಂಪ್ ಅವರು ಮೂರನೇ ಅವಧಿಗೆ ದೇಶದ ಸೇವೆ ಮಾಡಲು ಅವಕಾಶ ಒದಗಿಸಲಿದೆ. ದೇಶಕ್ಕೆ ದಿಟ್ಟ ನಾಯಕತ್ವ ಕೊಡಲು ಸಾಧ್ಯವಾಗಲಿದೆ' ಎಂದು ಹೇಳಿದ್ದಾರೆ.

'ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಟ್ರಂಪ್ ಅವರು ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಹಿಂದಿನ ಅಧ್ಯಕ್ಷ ಜೋ ಬೈಡನ್ ಜಾರಿಗೊಳಿಸಿದ್ದ ವಿನಾಶಕಾರಿ ನೀತಿಗಳನ್ನು ರದ್ದು ಮಾಡಿರುವ ಟ್ರಂಪ್, ಅಮೆರಿಕವನ್ನು ಅಭಿವೃದ್ಧಿ ಮತ್ತು ಸಶಕ್ತ ರಾಷ್ಟ್ರವಾಗುವ ಪಥಕ್ಕೆ ಮತ್ತೆ ಮರಳಿ ತಂದಿದ್ದಾರೆ' ಎಂದೂ ಹೇಳಿದ್ದಾರೆ.

ಜಿಎಸ್‌ಟಿ ವ್ಯಾಪ್ತಿಗೆ ಎಟಿಎಫ್ ನೈಸರ್ಗಿಕ ಅನಿಲ: ಸಚಿವ ಪುರಿ

ಪ್ರಜಾವಾಣಿ ವಾರ್ತೆ



ಮುಂಬೈ: 'ಕೇಂದ್ರ ಸರ್ಕಾರವು ನೈಸರ್ಗಿಕ ಅನಿಲ ಮತ್ತು ವಿಮಾನಗಳಲ್ಲಿ ಬಳಸುವ ಇಂಧನವನ್ನು (ಎಟಿಎಫ್) ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಗೆ ತರಲು ಉತ್ಸುಕವಾಗಿದೆ. ಇದರಿಂದ ರಾಜ್ಯಗಳಿಗೆ ಆಗುವ ಸಂಭವನೀಯ ನಷ್ಟಕ್ಕೆ ಪರಿಹಾರ ರೂಪಿಸಲು ಸಿದ್ಧವಾಗಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದಕ್ಕೆ ಹಲವು ರಾಜ್ಯಗಳು ವಿರೋಧ ವ್ಯಕ್ತಪಡಿಸುತ್ತಿವೆ. ಅವುಗಳ ಆದಾಯವು ನಷ್ಟವಾಗುವುದೇ ಇದಕ್ಕೆ ಕಾರಣ' ಎಂದರು.

'ತನ್ನ ಆದಾಯದ ಮೂಲವನ್ನು ಬಿಟ್ಟುಕೊಡಲು ಯಾವುದೇ ರಾಜ್ಯ ಸರ್ಕಾರ ಸಿದ್ಧ ಇರುವುದಿಲ್ಲ. ಇದು ಎಲ್ಲಾ ರಾಜ್ಯಗಳ ಸಾಮಾನ್ಯ ಪ್ರವೃತ್ತಿಯಾಗಿದೆ. ಈ ಬಗ್ಗೆ ಅವುಗಳ ಮನವೊಲಿಸುವ ಅಗತ್ಯವಿದೆ' ಎಂದು ಹೇಳಿದರು.

'ಡಿಸೆಂಬರ್‌ನಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ನೈಸರ್ಗಿಕ ಅನಿಲ ಮತ್ತು ಎಟಿಎಫ್ ಅನ್ನು ಜಿಎಸ್‌ಟಿ ಅಡಿ ತರುವ ಬಗ್ಗೆ ಚರ್ಚೆಯಾಗಿಲ್ಲ. ಮುಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಲಿದೆ. ಶೀಘ್ರವೇ, ಜಿಎಸ್‌ಟಿ ವ್ಯಾಪ್ತಿಗೆ ಎಟಿಎಫ್ ಬರಲಿದೆ. ಆ ನಂತರ ನೈಸರ್ಗಿಕ ಅನಿಲವನ್ನು ಸೇರ್ಪಡೆಗೊಳಿಸಲಾಗುವುದು' ಎಂದರು.

ಜನ್ಮದತ್ತ ಪೌರತ್ವ ಹಕ್ಕು ರದ್ದತಿ ಆದೇಶಕ್ಕೆ ತಾತ್ಕಾಲಿಕ ತಡೆ

ಸಿಯಾಟಲ್ (ಎಪಿ): ಜನ್ಮದಿಂದಾಗಿ ಸಿಗುವ ಅಮೆರಿಕ ಪೌರತ್ವ ಹಕ್ಕನ್ನು ರದ್ದುಗೊಳಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿದ್ದ ಆದೇಶಕ್ಕೆ ಇಲ್ಲಿನ ಜಿಲ್ಲಾ ನ್ಯಾಯಾಲಯ ತಾತ್ಕಾಲಿಕ ತಡೆ ನೀಡಿದೆ.

ಟ್ರಂಪ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ವಾಷಿಂಗ್ಟನ್, ಅರಿಜೋನಾ, ಇಲಿನಾಯ್ಸ್ ಹಾಗೂ ಒರೆಗಾನ್ ರಾಜ್ಯಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದವು. ಅಮೆರಿಕದಲ್ಲಿ ಜನಿಸಿದವರಿಗೆ ಸಿಗುವ ಪೌರತ್ವ ಹಕ್ಕು ಕುರಿತ ಕಾಯ್ದೆಗೆ ಸಂವಿಧಾನದ 14ನೇ ತಿದ್ದುಪಡಿ ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ಖಾತ್ರಿ ಇದೆ ಎಂದು ಈ ರಾಜ್ಯಗಳು ವಾದಿಸಿದ್ದವು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ಜಾನ್ ಸಿ.ಕಾಫೆನೋರ್, ಈ ಕುರಿತ ಆದೇಶ ಹೊರಡಿಸಿದ್ದಾರೆ.

ಜನ್ಮದಿಂದಾಗಿ ಸಿಗುವ ಪೌರತ್ವದ ಹಕ್ಕು ರದ್ದುಪಡಿಸಿ ಟ್ರಂಪ್ ಹೊರಡಿಸಿರುವ ಆದೇಶ ಪ್ರಶ್ನಿಸಿ ಒಟ್ಟು 22 ರಾಜ್ಯಗಳು ಕೋರ್ಟ್ ಮೆಟ್ಟಿಲೇರಿವೆ. ಅಲ್ಲದೇ, ಹಲವಾರು ವಲಸಿಗರ ಹಕ್ಕುಗಳ ಗುಂಪುಗಳು ಕೂಡ ಈ ಸಂಬಂಧ ಅರ್ಜಿ ಸಲ್ಲಿಸಿವೆ.

ಹವಾಮಾನ ವೈಪರೀತ್ಯ: ಕಳೆದ ವರ್ಷ 25 ಕೋಟಿ ಮಕ್ಕಳ ಶಿಕ್ಷಣಕ್ಕೆ ತೊಡಕು

ಕೇಪ್‌ಟೌನ್ (ಎಪಿ): ಬಿಸಿಗಾಳಿ, ಚಂಡಮಾರುತ, ಪ್ರವಾಹ ಮತ್ತು ಇತರ ಹವಾಮಾನ ವೈಪರೀತ್ಯಗಳಿಂದ ಕಳೆದ ವರ್ಷ ವಿಶ್ವದ 85 ದೇಶಗಳಲ್ಲಿ ಕನಿಷ್ಠ 24.2 ಕೋಟಿ ಮಕ್ಕಳ ಶಾಲಾ ಶಿಕ್ಷಣಕ್ಕೆ ಅಡೆತಡೆ ಎದುರಾಗಿತ್ತು ಎಂದು ವಿಶ್ವಸಂಸ್ಥೆಯ ಮಕ್ಕಳ ನಿಧಿ (ಯುನಿಸೆಫ್) ಶುಕ್ರವಾರ ತಿಳಿಸಿದೆ.

2024ರ ಕೆಲ ಸಂದರ್ಭದಲ್ಲಿ, ಶಾಲೆಗೆ ಹೋಗುವ ಪ್ರತಿ ಏಳು ಮಕ್ಕಳ ಪೈಕಿ ಒಬ್ಬರು ತರಗತಿಯಿಂದ ಹೊರಗುಳಿದಿದ್ದರು ಎಂದು ಯುನಿಸೆಫ್ ಹೊಸ ವರದಿಯಲ್ಲಿ ಹೇಳಿದೆ.

ಹವಾಮಾನ ವ್ಯತ್ಯಾಸಗಳ ಪರಿಣಾಮ, ಏಷ್ಯಾ ಮತ್ತು ಆಫ್ರಿಕಾದಲ್ಲಿನ ಕಡಿಮೆ ಆದಾಯದ ದೇಶಗಳಲ್ಲಿ ನೂರಾರು ಶಾಲೆಗಳೇ ನಾಶವಾಗಿವೆ ಎಂದು ವರದಿ ಉಲ್ಲೇಖಿಸಿದೆ.

ಇಟಲಿಯಲ್ಲಿ ಕಳೆದ ವರ್ಷಾಂತ್ಯದಲ್ಲಿ ಸುರಿದ ಧಾರಾಕಾರ ಮಳೆ ಮತ್ತು ಪ್ರವಾಹದಿಂದ 9 ಲಕ್ಷಕ್ಕೂ ಹೆಚ್ಚು ಮಕ್ಕಳ ಶಾಲಾ ಶಿಕ್ಷಣಕ್ಕೆ ತೊಂದರೆಯಾಗಿತ್ತು. ಅಂತೆಯೇ ಸ್ಪೇನ್‌ನಲ್ಲಿ ಸಂಭವಿಸಿದ ಪ್ರವಾಹದಿಂದಲೂ ಸಹಸ್ರಾರು ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಿದೆ.

ಕಳೆದ ವರ್ಷ ದಕ್ಷಿಣ ಯುರೋಪ್ ಭಾರಿ ಮಳೆ ಮತ್ತು ಪ್ರವಾಹಗಳನ್ನು ಕಂಡಿದ್ದರೆ, ಏಷ್ಯಾ ಮತ್ತು ಆಫ್ರಿಕಾದ ದೇಶಗಳು ಚಂಡಮಾರುತ, ಪ್ರವಾಹ ಮತ್ತು ಬಿಸಿಗಾಳಿಯನ್ನು ಎದುರಿಸಿವೆ. ಇದೆಲ್ಲದರ ಪರಿಣಾಮ ಹಲವು ಶಾಲೆಗಳು ಬಾಗಿಲು ಮುಚ್ಚಿದವು ಎಂದು ಯುನಿಸೆಫ್ ಹೇಳಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	49600-50000
ಬೆಟ್ಟೆ	23800-24200
ಕೆಂಪುಗೋಟು	20600-21000
ರಾಶಿ	49100-49500
ಕಾರ್ಕಳ	
ಹೊಸತು	25000-36000
ಹಳತು	30000-49000
ಕುಮಟ	
ಚಾಲಿ	33029-37299
ಚಿಪ್ಪು	15029-25699
ಕೋಕ	6099-21019
ಫ್ಯಾಕ್ಟರಿ	3069-24699
ಹಳೆಚಾಲಿ	36089-37569
ಹೊಸಚಾಲಿ	25569-31299
ಶಿವಮೊಗ್ಗ	
ಬೆಟ್ಟೆ	40099-54459
ಗೊರಬಲು	18168-27699
ರಾಶಿ	30009-51500
ಸರಕು	56009-64700
ಸಿದ್ದಾಪುರ	
ಬಿಳಿಗೋಟು	21689-24669
ಚಾಲಿ	33099-37899
ಕೋಕ	15699-18889
ಹೊಸಚಾಲಿ	23699-33599
ಕೆಂಪುಗೋಟು	18699-27119
ರಾಶಿ	42309-49899
ತಟ್ಟಿಬೆಟ್ಟೆ	28099-41099

ರಣಜಿ ಟ್ರೋಫಿ ಕ್ರಿಕೆಟ್: ಬೃಹತ್ ಮುನ್ನಡೆ ಗಳಿಸಿದ ಕರ್ನಾಟಕ • ಪಂಜಾಬ್ ಪರದಾಟ

ಸ್ಮರಣ್ ಅವಿಸ್ಮರಣೀಯ ದ್ವಿಶತಕ

• ಗಿರೀಶ ದೊಡ್ಡಮನಿ



ಸ್ಮರಣ್ ರವಿಚಂದ್ರನ್ ದ್ವಿಶತಕದ ಸಂಭ್ರಮ —ಚಿತ್ರ/ವಿ. ಪುಷ್ಕರ್

ಬೆಂಗಳೂರು: ಸ್ಮರಣ್ ರವಿಚಂದ್ರನ್ ಅವರಿಗೆ ತಮ್ಮ ಚೊಚ್ಚಲ ರಣಜಿ ಕ್ರಿಕೆಟ್ ಋತು ಅವಿಸ್ಮರಣೀಯವಾಗಿ ಉಳಿಯಲಿದೆ. ತಾವು ಆಡಿದ ಆರನೇ ಪ್ರಥಮ ದರ್ಜೆ ಪಂದ್ಯದಲ್ಲಿಯೇ ದ್ವಿಶತಕ ಗಳಿಸಿದ ಸಾಧನೆಗೆ ಪಾತ್ರರಾದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ರಣಜಿ ಟೂರ್ನಿಯ ಆರನೇ ಪಂದ್ಯದ ಎರಡನೇ ದಿನದಾಟದಲ್ಲಿ ಇಡೀ ದಿನ ಸ್ಮರಣ್ ಅವರದ್ದೇ ಆಟ. ಶುಭಮನ್ ಗಿಲ್ ನಾಯಕತ್ವದ ಪಂಜಾಬ್ ತಂಡದವರದ್ದು ಬರೀ ಪರದಾಟವಷ್ಟೇ.

21 ವರ್ಷದ ಸ್ಮರಣ್ (203; 277ಎಸೆತ) ಅವರ ಚೆಂದದ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 122.1 ಓವರ್‌ಗಳಲ್ಲಿ 475 ರನ್ ಗಳಿಸಿತು. 420 ರನ್‌ಗಳ ಮುನ್ನಡೆ ಸಾಧಿಸಿತು ದಿನದಾಟದ ಮುಗಿದಾಗ ಹೊತ್ತಿಗೆ ಪಂಜಾಬ್ ತಂಡವು 13 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 24 ರನ್ ಗಳಿಸಿದೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿ ಇವೆ. ಲೆಕ್ಕ ಚುಕ್ತಾ ಮಾಡಲು 396 ರನ್ ಅವಶ್ಯಕತೆ ಇದೆ. ಗಿಲ್ (ಬ್ಯಾಟಿಂಗ್ 7) ಮತ್ತು ಮತ್ತು ಜಸ್ ಇಂದರ್ ಕ್ರೀಸ್‌ನಲ್ಲಿದ್ದಾರೆ. ಕರ್ನಾಟಕದ ವೇಗಿಗಳಾದ ಅಭಿಲಾಷ್ ಶೆಟ್ಟಿ ಮತ್ತು ಪ್ರಸಿದ್ಧ ಕೃಷ್ಣ ತಲಾ ಒಂದು ವಿಕೆಟ್ ಗಳಿಸಿದ್ದಾರೆ.

ಸ್ಮರಣ್ ಸಾಧನೆ: ಬೆಂಗಳೂರಿನ ಸ್ಮರಣ್ ಅವರು ಗುರುವಾರ ದಿನದಾಟದ ಮುಕ್ತಾಯಕ್ಕೆ 83 ರನ್ ಗಳಿಸಿ ಕ್ರೀಸ್ ನಲ್ಲಿದ್ದರು. ಅವರೊಂದಿಗೆ ಅಭಿನವ್ ಮನೋಹರ್ ಕೂಡ ಇದ್ದರು.

ಎರಡನೇ ದಿನ ಬೆಳಿಗ್ಗೆ ಆಟ ಮುಂದುವರಿಸಿದ ಅವರು ಪಂಜಾಬ್ ಬೌಲರ್‌ಗಳ ಎಸೆತಗಳನ್ನು ಲೀಲಾಜಾಲವಾಗಿ ಎದುರಿಸಿದರು. ಆತ್ಮವಿಶ್ವಾಸದಿಂದ ಬೌಲರ್‌ಗಳನ್ನು ಎದುರಿಸಿದರು. ತಾವೆದುರಿಸಿದ 120ನೇ ಎಸೆತವನ್ನು ಸಿಕ್ಸರ್‌ಗೆ ಎತ್ತಿ ಶತಕ ಪೂರೈಸಿದರು. ನಂತರವೂ ಅವರ ರನ್ ಗಳಿಕೆ ಮುಂದುವರಿಯಿತು. ಹೀಗಾಗಿ ಪಂಜಾಬ್ ತಂಡಕ್ಕೆ ಕರ್ನಾಟಕದ ಮೊತ್ತ ಏರುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಸ್ಮರಣ್ ಅವರು 141 ರನ್ ಗಳಿಸಿದ್ದ ಸಂದರ್ಭದಲ್ಲಿ ಸುಖದೀಪ್ ಬಜ್ವಾ ಅವರು ಸುಲಭ ಕ್ಯಾಚ್ ಕೈಬಿಟ್ಟರು. ಇದರಿಂದಾಗಿ ಸ್ಮರಣ್ ದ್ವಿಶತಕದತ್ತ ಸಾಗಲು ಸಾಧ್ಯವಾಯಿತು.

ಸ್ಮರಣ್ ಅವರು ಶುಕ್ರವಾರದ ಆಟದಲ್ಲಿ ಮೂರು ಪ್ರಮುಖ ಜೊತೆಯಾಟಗಳಲ್ಲಿ ಭಾಗಿಯಾದರು. ಅಭಿನವ್ ಜೊತೆ ಐದನೇ ವಿಕೆಟ್ ಜೊತೆಯಾಟದಲ್ಲಿ 86 (140ಎಸೆತ) ರನ್ ಸೇರಿಸಿದರು. ಆರನೇ ವಿಕೆಟ್ ಜೊತೆಯಾಟದಲ್ಲಿ ಶ್ರೇಯಸ್ ಗೋಪಾಲ್ ಅವರೊಂದಿಗೆ 75 ರನ್ (114ಎಸೆತ) ಹಾಗೂ 7ನೇ ವಿಕೆಟ್ ಜೊತೆಯಾಟದಲ್ಲಿ ಯಶೋವರ್ಧನ್ ಪರಂತಾಪ್ ಜೊತೆಗೆ 67 ರನ್ (107 ಎಸೆತ) ಸೇರಿಸಿದರು.

ಸ್ಮರಣ್ ಅವರು ದ್ವಿಶತಕದ ಗಡಿ ಮುಟ್ಟಲು ಒಟ್ಟು 270 ಎಸೆತಗಳನ್ನು ಎದುರಿಸಿದರು. 25 ಬೌಂಡರಿ ಮತ್ತು 3 ಸಿಕ್ಸರ್ ಗಳಿಸಿದರು. ಅವರು ಒಟ್ಟು 434 ನಿಮಿಷಗಳಲ್ಲಿ ಈ ಸಾಧನೆ ಮಾಡಿದರು.

ರಣಜಿ ಟೂರ್ನಿಯ ಮೊದಲ ಹಂತದಲ್ಲಿ (ಅಕ್ಟೋಬರ್ ನವೆಂಬರ್) ಸ್ಮರಣ್ ಬ್ಯಾಟಿಂಗ್ ಲಯ ಕಂಡುಕೊಳ್ಳಲು ಪರದಾಡಿದ್ದರು. ಆದರೆ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಅಮೋಘವಾಗಿ ಆಡಿದ್ದರು. ಹೋದ ಶನಿವಾರ ನಡೆದಿದ್ದ ಫೈನಲ್‌ನಲ್ಲಿ ವಿದರ್ಭ ಎದುರು ಶತಕ ಗಳಿಸಿದ್ದರು. ಟೂರ್ನಿಯಲ್ಲಿ ಒಟ್ಟು ಎರಡು ಶತಕ ಮತ್ತು ಎರಡು ಅರ್ಧಶತಕಗಳನ್ನು ಗಳಿಸಿದ್ದರು. ಅದೇ ಬ್ಯಾಟಿಂಗ್ ಲಯವನ್ನು ಇಲ್ಲಿಯೂ ಮುಂದುವರಿಸಿದರು. ಚೆಂದದ ಡ್ರೈವ್, ನೇರ ಹೊಡೆತಗಳನ್ನು ಆಡಿದರು. ಆಫ್‌ಸ್ಟಂಪ್ ಹೊರಗಿನ ಎಸೆತಗಳನ್ನು ಮುಟ್ಟುವ ಗೋಜಿಗೆ ಹೋಗಲಿಲ್ಲ. ನಿಖರವಾದ ಪಾದಚಲನೆಯ ಮೂಲಕ ಗಮನ ಸೆಳೆದರು.

108ನೇ ಓವರ್‌ನಲ್ಲಿ ಜಸ್ ಇಂದರ್ ಅವರು ಹಾಕಿದ ಎಸೆತದಲ್ಲಿ ಸ್ಮರಣ್ ಕ್ಲೀನ್‌ಬೌಲ್ಡ್ ಆದರು. ಅದರೊಂದಿಗೆ ಅವರ ಆಟಕ್ಕೆ ತೆರೆಬಿತ್ತು.

ಸಂಕ್ಷಿಪ್ತ ಸ್ಕೋರು:
ಮೊದಲ ಇನಿಂಗ್ಸ್: ಪಂಜಾಬ್: 29 ಓವರ್‌ಗಳಲ್ಲಿ 55. ಕರ್ನಾಟಕ: 122.1 ಓವರ್‌ಗಳಲ್ಲಿ 475 (ಸ್ಮರಣ್ ರವಿಚಂದ್ರನ್ 203, ಕೆ.ಎಲ್. ಶ್ರೀಜಿತ್ 26, ಅಭಿನವ್ ಮನೋಹರ್ 34, ಶ್ರೇಯಸ್ ಗೋಪಾಲ್ 31, ಯಶೋವರ್ಧನ್ ಪರಂತಾಪ್ 26, ಪ್ರಸಿದ್ಧ ಎಂ ಕೃಷ್ಣ 30, ವಿ. ಕೌಶಿಕ್ ಔಟಾಗದೇ 10, ಅಭಿಲಾಷ್ ಶೆಟ್ಟಿ 12, ಗುರ್ನೂರು ಬ್ರಾರ್ 125ಕ್ಕೆ2, ಜಸ್ ಇಂದರ್ 66ಕ್ಕೆ3, ಮಯಂಕ್ ಮಾರ್ಕಂಡೆ 53ಕ್ಕೆ3) ಎರಡನೇ ಇನಿಂಗ್ಸ್: ಪಂಜಾಬ್: 13 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 24 (ಅನ್ಮೋಲ್‌ಪ್ರೀತ್ ಸಿಂಗ್ 14, ಶುಭಮನ್ ಗಿಲ್ ಬ್ಯಾಟಿಂಗ್ 7)

5ನೇ ಬ್ಯಾಟರ್ ಸ್ಮರಣ್

ರಣಜಿ ಟ್ರೋಫಿ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕವನ್ನೇ ದ್ವಿಶತಕವನ್ನಾಗಿ ಪರಿವರ್ತಿಸಿದ ಐದನೇ ಬ್ಯಾಟರ್ ಆರ್. ಸ್ಮರಣ್ ಅವರಾಗಿದ್ದಾರೆ.

ಈ ಮೊದಲು ಜಿ.ಆರ್. ವಿಶ್ವನಾಥ್, ರೋಜರ್ ಬಿನ್ನಿ, ಸಂಜಯ್ ದೇಸಾಯಿ ಮತ್ತು ಜೆಸ್ವಂತ್ ಅವರು ಈ ಸಾಧನೆ ಮಾಡಿದ್ದಾರೆ ಎಂದು ಅಂಕಿ ಸಂಖ್ಯೆ ತಜ್ಞ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ರೋಹಿತ್, ಜೈಸ್ವಾಲ್, ಪಂತ್ ಮತ್ತೆ ನಿರಾಸೆ

ಬೆಂಗಳೂರು: ಭಾರತ ತಂಡದ ಆಟಗಾರರಾದ ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್ ಮತ್ತು ರಿಷಭ್ ಪಂತ್ ಅವರು ರಣಜಿ ಕ್ರಿಕೆಟ್‌ನ ಎರಡನೇ ಇನಿಂಗ್ಸ್‌ನಲ್ಲೂ ನಿರಾಸೆ ಮೂಡಿಸಿದರು. ಆದರೆ, ಆಲ್‌ರೌಂಡರ್ ರವೀಂದ್ರ ಜಡೇಜ ಬೌಲಿಂಗ್‌ನಲ್ಲಿ ಮಿಂಚಿದ್ದಾರೆ.

ಬಾಂದ್ರಾ- ಕುರ್ಲಾ ಸೆಂಟರ್ ಕ್ರೀಡಾಂಗಣದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿರುದ್ಧ ನಡೆಯುತ್ತಿರುವ ರಣಜಿ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕೇವಲ 3 ರನ್ ಗಳಿಸಿದ್ದ ರೋಹಿತ್, ದ್ವಿತೀಯ ಇನಿಂಗ್ಸ್‌ನಲ್ಲಿ 28 ರನ್ (35ಎ) ಗಳಿಸಲಷ್ಟೇ ಶಕ್ತವಾದರು.

ಜೈಸ್ವಾಲ್ ಜೊತೆ ಕ್ರೀಸಿಗಿಳಿದ ರೋಹಿತ್ ಮೊದಲ ವಿಕೆಟ್‌ಗೆ 54 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾದರು. ಆಕ್ರಮಣಕಾರಿ ಆಟಕ್ಕೆ ಮುಂದಾದ ರೋಹಿತ್, ಮೂರು ಸಿಕ್ಸರ್ ಹಾಗೂ ಎರಡು ಬೌಂಡರಿಗಳನ್ನು ಬಾರಿಸಿದರು. ಯಶಸ್ವಿ 26 ರನ್ ಗಳಿಸಿ ಔಟ್ ಆದರು.

ಮೊದಲ ಇನಿಂಗ್ಸ್‌ನಲ್ಲಿ 86 ರನ್‌ಗಳ ಹಿನ್ನಡೆ ಅನುಭವಿಸಿದ್ದ ಮುಂಬೈ ತಂಡವು ಎರಡನೇ ಇನಿಂಗ್ಸ್‌ನಲ್ಲಿ 101 ರನ್ ಗಳಿಸುವಷ್ಟರಲ್ಲಿ ಏಳು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಶಾರ್ದೂಲ್ ಠಾಕೂರ್ (ಔಟಾಗದೇ 113; 119ಎ) ಮತ್ತು ತನುಷ್ ಕೋಟ್ಯಾನ್ (ಔಟಾಗದೇ 58;119ಎ) ಅವರು ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 173 ರನ್ ಸೇರಿಸಿದರು. ಮುಂಬೈ ತಂಡವು 67 ಓವರ್‌ಗಳಲ್ಲಿ 7 ವಿಕೆಟ್‌ಗೆ 274 ರನ್ ಗಳಿಸಿದ್ದು, 188 ರನ್‌ಗಳ ಲೀಡ್ ಪಡೆದಿದೆ.

ಜಡೇಜ ಮೋಡಿ: ಮತ್ತೊಂದೆಡೆ ಜಡೇಜ ಸ್ಪಿನ್ ಮೋಡಿ ನೆರವಿನಿಂದ ಸೌರಾಷ್ಟ್ರ ತಂಡವು ದೆಹಲಿ ವಿರುದ್ಧ ನಡೆದ ಪಂದ್ಯದಲ್ಲಿ 10 ವಿಕೆಟ್ ಅಂತರದಿಂದ ಭರ್ಜರಿ ಗೆಲುವು ದಾಖಲಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗಳಿಸಿದ್ದ ಜಡೇಜ, ದ್ವಿತೀಯ ಇನಿಂಗ್ಸ್‌ನಲ್ಲಿ ಏಳು ವಿಕೆಟ್ ಸಾಧನೆ ಮಾಡಿದರು. ಆ ಮೂಲಕ ಪಂದ್ಯದಲ್ಲಿ ಒಟ್ಟು 12 ವಿಕೆಟ್‌ಗಳನ್ನು ಗಳಿಸಿದರು. ಅಲ್ಲದೆ ಬ್ಯಾಟಿಂಗ್‌ನಲ್ಲೂ 38 ರನ್‌ಗಳ ಉಪಯುಕ್ತ ಕೊಡುಗೆ ನೀಡಿದರು.

ದೆಹಲಿ ತಂಡವನ್ನು ಪ್ರತಿನಿಧಿಸಿದ್ದ ಪಂತ್ ಮೊದಲ ಇನಿಂಗ್ಸ್‌ನಲ್ಲಿ 1 ಮತ್ತು ಎರಡನೇ ಇನಿಂಗ್ಸ್‌ನಲ್ಲಿ 17 ರನ್ ಗಳಿಸಿ ಔಟ್ ಆದರು.

ಸರಣಿ ಮುನ್ನಡೆಯತ್ತ ಭಾರತ ಚಿತ್ತ

ಚೆನ್ನೈನಲ್ಲಿ ಟಿ20 ಇಂದು • ಶಮಿಗೆ ಲಭಿಸುವುದೇ ಅವಕಾಶ?



ಸ್ಪಿನ್ನರ್‌ಗಳಾದ ವರುಣ ಚಕ್ರವರ್ತಿ ಮತ್ತು ರವಿ ಬಿಷ್ಣೋಯಿ —ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವಣ ಶನಿವಾರ ಇಲ್ಲಿಯ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಟಿ20 ಪಂದ್ಯದಲ್ಲಿ ವೇಗಿ ಮೊಹಮ್ಮದ್ ಶಮಿ ಕಣಕ್ಕಿಳಿಯುವರೇ ಎಂಬ ಕುತೂಹಲ ಗರಿಗೆದರಿದೆ.

ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯದಲ್ಲಿ ಶಮಿ ಕಣಕ್ಕಿಳಿದಿರಲಿಲ್ಲ. ಗಾಯ ಮತ್ತು ಶಸ್ತ್ರಚಿಕಿತ್ಸೆಯಿಂದಾಗಿ ದೀರ್ಘ ಕಾಲದವರೆಗೆ ಅವರು ಕ್ರಿಕೆಟ್‌ನಿಂದ ದೂರವಿದ್ದರು. ಈಚೆಗೆ ರಣಜಿ ಟ್ರೋಫಿ ಟೂರ್ನಿಯ ಮೂಲಕ ಅವರು ಕ್ರಿಕೆಟ್‌ಗೆ ಮರಳಿದ್ದರು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅವರು ತಮ್ಮ ಸಾಮರ್ಥ್ಯ ತೋರಲು ಸಿದ್ಧವಾಗಿದ್ದಾರೆ. ಬಹುಶಃ ಚೆಪಾಕ್ ಕ್ರೀಡಾಂಗಣದಲ್ಲಿ ಅವರಿಗೆ ಅವಕಾಶ ಸಿಗಬಹುದು.

ಕೋಲ್ಕತ್ತ ಪಂದ್ಯದಲ್ಲಿ ಶಮಿ ಅವರು ಆಡದಿದ್ದರೂ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ಹೊಸಚೆಂಡಿನಲ್ಲಿ ಸಮರ್ಥವಾಗಿ ಹೊಣೆ ನಿಭಾಯಿಸಿದ್ದರು. ಮಧ್ಯ ಹಂತದ ಓವರ್‌ಗಳಲ್ಲಿ ಸ್ಪಿನ್ನರ್ ವರುಣ ಚಕ್ರವರ್ತಿ ತಮ್ಮ ಮ್ಯಾಜಿಕ್ ತೋರಿಸಿದ್ದರು. ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಕೂಡ ಅಬ್ಬರಿಸಿದ್ದರು. ಅದರಿಂದಾಗಿ ಭಾರತ ತಂಡವು ಜಯಿಸಿತ್ತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತ್ತು.

ಇಲ್ಲಿಯ ಪಿಚ್ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆಗಳಿವೆ. ಮೊದಲಿನಿಂದಲೂ ಇದೇ ಗುಣವೂ ಇಲ್ಲಿಯ ಅಂಗಣಕ್ಕೆ ಇದೆ. ಇದರಿಂದಾಗಿ ವರುಣ್ ಜೊತೆಗೆ ಅಕ್ಷರ್ ಪಟೇಲ್ ಮತ್ತು ರವಿ ಬಿಷ್ಣೋಯಿ ಅವರಿಗೂ ತಮ್ಮ ಕೈಚಳಕ ಮೆರೆಯುವ ಅವಕಾಶ ದೊರೆಯಬಹುದು.

ಇಂಗ್ಲೆಂಡ್ ತಂಡದ ಸ್ಪಿನ್ನರ್ ಆದಿಲ್ ರಶೀದ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ಅವರು ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರೆ ಪಂದ್ಯವು ಮತ್ತಷ್ಟು ರೋಚಕವಾಗಬಹುದು. ಕಳೆದ ಪಂದ್ಯದಲ್ಲಿ ವೇಗಿ ಜೋಫ್ರಾ ಆರ್ಚರ್ ಅವರೊಬ್ಬರೇ ಯಶಸ್ವಿಯಾಗಿದ್ದರು.

ಭಾರತದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಕೋಲ್ಕತ್ತದಲ್ಲಿ 230ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದರು. ಆದರೆ ಶುಕ್ರವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ಅವರ ಹಿಮ್ಮಡಿಗೆ ಗಾಯವಾಗಿದೆ. ಅವರಿಗೆ ತಂಡದ ಫಿಸಿಯೊ ಸುಮಾರು ಅರ್ಧಗಂಟೆ ಚಿಕಿತ್ಸೆ ನೀಡಿದರು. ಆದರೆ ಅಭಿಷೇಕ್, ಪಂದ್ಯದಲ್ಲಿ ಕಣಕ್ಕಿಳಿಯುವ ಕುರಿತು ಇನ್ನೂ ಸ್ಪಷ್ಟವಾಗಿಲ್ಲ.

ಸಂಜು ಅವರು ಕಳೆದ ಆರು ಇನಿಂಗ್ಸ್‌ಗಳಲ್ಲಿ 3 ಶತಕ ಗಳಿಸಿ ಉತ್ತಮ ಲಯದಲ್ಲಿದ್ದಾರೆ. ಈ ಎಡಗೈ -ಬಲಗೈ ಬ್ಯಾಟಿಂಗ್ ಜೋಡಿಯು ತಂಡಕ್ಕೆ ಉತ್ತಮ ಆರಂಭ ನೀಡಿ ದೊಡ್ಡ ಮೊತ್ತ ಪೇರಿಸಲು ಅಡಿಪಾಯ ಹಾಕುವ ಸಾಮರ್ಥ್ಯ ಹೊಂದಿದೆ.

ಅವರನ್ನು ಬಿಟ್ಟರೆ ತಿಲಕ್ ವರ್ಮಾ, ರಿಂಕು ಸಿಂಗ್, ನಿತೀಶ್ ಕುಮಾರ್ ರೆಡ್ಡಿ, ಹಾರ್ದಿಕ್ ಪಾಂಡ್ಯ ಅವರೂ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಸೂರೆ ಮಾಡುವ ಸಮರ್ಥರು. ಆದರೆ ನಾಯಕ ಸೂರ್ಯಕುಮಾರ್ ಯಾದವ್ ಅವರು ಲಯಕ್ಕೆ ಮರಳಬೇಕಿದೆ. ಕಳೆದ ಪಂದ್ಯದಲ್ಲಿ ಅವರು ವೈಫಲ್ಯ ಅನುಭವಿಸಿದ್ದರು. ಅವರೂ ತಮ್ಮ ನೈಜ ಬೀಸಾಟಕ್ಕೆ ಕುದುರಿಕೊಂಡರೆ ಇಂಗ್ಲೆಂಡ್ ತಲೆನೋವು ಹೆಚ್ಚುವುದು ಖಚಿತ.

ಪ್ರವಾಸಿ ಬಳಗದಲ್ಲಿ ನಾಯಕ ಜೋಸ್ ಬಟ್ಲರ್, ಹ್ಯಾರಿ ಬ್ರೂಕ್, ಬೆನ್ ಡಕೆಟ್, ಫಿಲ್ ಸಾಲ್ಟ್ ಮತ್ತು ಜೇಮಿ ಸ್ಮಿತ್ ಅವರ ಮುಂದೆ ಭಾರತದ ಬೌಲಿಂಗ್ ಪಡೆಯನ್ನು ಎದುರಿಸಿ ನಿಲ್ಲುವ ಸವಾಲು ಇದೆ.

ಪಂದ್ಯ ಆರಂಭ : ರಾತ್ರಿ 7ರಿಂದ
ನೇರಪ್ರಸಾರ : ಸ್ಟಾರ್ ಸ್ಪೋರ್ಟ್ಸ್



ಸಿಎಂ ಸನ್ಮಾನ

ಚೊಚ್ಚಲ ಕೊಕ್ಕೊ ವಿಶ್ವಕಪ್ ಗೆದ್ದ ಭಾರತದ ಮಹಿಳಾ ಮತ್ತು ಪುರುಷರ ತಂಡದಲ್ಲಿದ್ದ ಮೈಸೂರಿನ ಕುರಬೂರಿನ ಚೈತ್ರಾ ಮತ್ತು ಮಂಡ್ಯದ ಡಿ.ಮಲ್ಲಿಗೆರೆಯ ಎಂ.ಕೆ.ಗೌತಮ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸನ್ಮಾನಿಸಿದರು. ಜತೆಗೆ ತಲಾ ₹5 ಲಕ್ಷ ಬಹುಮಾನ ಘೋಷಿಸಿದರು.

ಲೆಜೆಂಡ್ಸ್ ತಂಡಕ್ಕೆ ಭರ್ಜರಿ ಜಯ

ಬೆಂಗಳೂರು: ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ತಂಡವು ಶುಕ್ರವಾರ ಕೆಎಸ್‌ಎಫ್‌ಎ ಎ ಡಿವಿಷನ್ ಮಹಿಳಾ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 9–0 ಗೋಲುಗಳಿಂದ ಜಿ.ಆರ್.ಕೆ. ಗರ್ಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬ್ಯಾಡ್ಮಿಂಟನ್: ಸನೀತ್‌ಗೆ ಕಿರೀಟ

ಬೆಂಗಳೂರು: ಕರ್ನಾಟಕದ ಸನೀತ್ ಡಿ.ಎಸ್. ಯೋನೆಕ್ಸ್ ಸನ್‌ರೈಸ್ ಅಖಿಲ ಭಾರತ ಸೀನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಪಡುಕೋಣೆ- ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್ ಕೋರ್ಟ್‌ನಲ್ಲಿ ನಡೆದ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕದ ಸನೀತ್ ಫೈನಲ್ ಹಣಾಹಣಿಯಲ್ಲಿ 21-11, 21-10 ರಿಂದ ರಘು ಎಂ. ಅವರನ್ನು ಮಣಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಕರ್ನಾಟಕ ಶಿಖಾ ಗೌತಮ್ ಮತ್ತು ಅಶ್ವಿನಿ ಭಟ್ ಕೆ. ಜೋಡಿಯು 21-16, 21-14ರಿಂದ ಉತ್ತರ ಪ್ರದೇಶದ ಅಮೃತಾ ಪಿ. ಮತ್ತು ಸೋನಾನಿ ಸಿಂಗ್ ಅವರನ್ನು ಮಣಿಸಿ ಚಾಂಪಿಯನ್ ಆಯಿತು.ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ಆಂಧ್ರ ಪ್ರದೇಶದ ಸೂರ್ಯ ಚರಿಷ್ಮಾ ತಮಿರಿ 21-18, 23-21ರಿಂದ ಉತ್ತರ ಪ್ರದೇಶದ ಮಾನ್ಸಿ ಸಿಂಗ್ ಅವರನ್ನು ಮಣಿಸಿ ಕಿರೀಟ ಗೆದ್ದರು.

ವರ್ಷದ ಟೆಸ್ಟ್ ತಂಡ: ಮೂವರು ಭಾರತೀಯರು



ಜಸ್‌ಪ್ರೀತ್ ಬೂಮ್ರಾ

ದುಬೈ (ಪಿಟಿಐ): ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ, ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಪ್ರಕಟಿಸಿರುವ 2024 ವರ್ಷದ ಪುರುಷರ ಟೆಸ್ಟ್ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹನ್ನೊಂದು ಆಟಗಾರರ ತಂಡದಲ್ಲಿ ಇಂಗ್ಲೆಂಡ್‌ನ ನಾಲ್ವರು, ಭಾರತದ ಮೂವರು, ನ್ಯೂಜಿಲೆಂಡ್‌ನ ಇಬ್ಬರು ಮತ್ತು ಶ್ರೀಲಂಕಾದ ಒಬ್ಬರು ಸ್ಥಾನ ಪಡೆದಿದ್ದಾರೆ. ಆಸ್ಟ್ರೇಲಿಯಾದ ಏಕೈಕ ಆಟಗಾರ ಪ್ಯಾಟ್ ಕಮಿನ್ಸ್ ತಂಡಕ್ಕೆ ನಾಯಕರಾಗಿದ್ದಾರೆ.

2024ರ ಋತುವಿನಲ್ಲಿ ಅಮೋಘ ಪ್ರದರ್ಶನ ನೀಡಿರುವ 31 ವರ್ಷ ವಯಸ್ಸಿನ ಬೂಮ್ರಾ 14.92ರ ಸರಾಸರಿಯಲ್ಲಿ ಒಟ್ಟು 71 ವಿಕೆಟ್ ಪಡೆದಿದ್ದಾರೆ. ವರ್ಷದಲ್ಲಿ ಒಟ್ಟು ವಿಕೆಟ್ ಗಳಿಕೆಯಲ್ಲಿ ಅಗ್ರಸ್ಥಾನ ಹೊಂದಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್ ಗಾವಸ್ಕರ್ ಸರಣಿಯಲ್ಲಿ 32 ವಿಕೆಟ್ ಪಡೆದು, ಸರಣಿಯ ಆಟಗಾರ ಗೌರವಕ್ಕೂ ಅವರು ಪಾತ್ರರಾಗಿದ್ದರು.

36 ವರ್ಷ ವಯಸ್ಸಿನ ಜಡೇಜ ಅವರು ಕಳೆದ ವರ್ಷ 29.27ರ ಸರಾಸರಿಯಲ್ಲಿ 527 ರನ್ ಗಳಿಸಿಸುವ ಜೊತೆಗೆ 24.29ರ ಸರಾಸರಿಯಲ್ಲಿ 48 ವಿಕೆಟ್ ಪಡೆದಿದ್ದಾರೆ. 23 ವರ್ಷ ವಯಸ್ಸಿನ ಜೈಸ್ವಾಲ್ ವರ್ಷದಲ್ಲಿ 54.74ರ ಸರಾಸರಿಯಲ್ಲಿ 1,478 ರನ್ ಗಳಿಸಿದ್ದಾರೆ. ವರ್ಷದ ರನ್ ಗಳಿಕೆಯಲ್ಲಿ ಇಂಗ್ಲೆಂಡ್‌ನ ಜೋ ರೂಟ್ (1,556) ಅವರ ನಂತರದ ಸ್ಥಾನದಲ್ಲಿ ಜೈಸ್ವಾಲ್ ಇದ್ದಾರೆ.

ಟೆಸ್ಟ್ ತಂಡ ಹೀಗಿದೆ: ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್(ನಾಯಕ), ಭಾರತದ ಯಶಸ್ವಿ ಜೈಸ್ವಾಲ್, ರವೀಂದ್ರ ಜಡೇಜ, ಜಸ್‌ಪ್ರೀತ್ ಬೂಮ್ರಾ, ಇಂಗ್ಲೆಂಡ್‌ನ ಬೆನ್ ಡಕೆಟ್, ಜೊ ರೂಟ್, ಹ್ಯಾರಿ ಬ್ರೂಕ್, ಜೆಮ್ಮಿ ಸ್ಮಿತ್ (ವಿಕೆಟ್ ಕೀಪರ್), ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್, ಮ್ಯಾಟ್ ಹೆನ್ರಿ, ಶ್ರೀಲಂಕಾದ ಕಮಿಂದು ಮೆಂಡಿಸ್.

ಮಹಿಳಾ ಏಕದಿನ ತಂಡದಲ್ಲಿ ಮಂದಾನ, ದೀಪ್ತಿ



ಮಂದಾನ

ದುಬೈ: ಭಾರತದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಮತ್ತು ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಐಸಿಸಿ ಪ್ರಕಟಿಸಿರುವ ವರ್ಷದ ಮಹಿಳೆಯರ ಏಕದಿನ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಆದರೆ, ಪುರುಷರ ತಂಡದಲ್ಲಿ ಭಾರತದ ಯಾವುದೇ ಆಟಗಾರರಿಗೆ ಸ್ಥಾನ ಲಭಿಸಿಲ್ಲ.

ಮಹಿಳೆಯ ತಂಡದಲ್ಲಿ ಇಂಗ್ಲೆಂಡ್‌ನ ಮೂವರು, ಭಾರತ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾದ ತಲಾ ಇಬ್ಬರು, ಶ್ರೀಲಂಕಾ, ವೆಸ್ಟ್‌ಇಂಡೀಸ್‌ನ ತಲಾ ಒಬ್ಬರು ಸ್ಥಾನ ಪಡೆದಿದ್ದಾರೆ. ದಕ್ಷಿಣ ಆಫ್ರಿಕಾದ ಲಾರಾ ವೊಲ್ವಾರ್ಟ್ ತಂಡಕ್ಕೆ ಸಾರಥಿಯಾಗಿದ್ದಾರೆ.

28 ವರ್ಷ ವಯಸ್ಸಿನ ಮಂದಾನ 2024ರಲ್ಲಿ ಒಟ್ಟು 13 ಏಕದಿನ ಪಂದ್ಯಗಳಿಂದ 747 ರನ್ ಗಳಿಸಿ, ವರ್ಷದ ಗರಿಷ್ಠ ಸ್ಕೋರರ್ ಎನಿಸಿಕೊಂಡಿದ್ದಾರೆ. ಅವರು 2024ರ ಐಸಿಸಿ ಏಕದಿನ ಆಟಗಾರ್ತಿ ಪ್ರಶಸ್ತಿಯ ರೇಸ್‌ನಲ್ಲಿಯೂ ಇದ್ದಾರೆ. 27 ವರ್ಷ ವಯಸ್ಸಿನ ದೀಪ್ತಿ ಕಳೆದ ವರ್ಷ 13 ಪಂದ್ಯಗಳಿಂದ 186 ರನ್ ಗಳಿಸುವ ಜೊತೆಗೆ 24 ವಿಕೆಟ್ ಪಡೆದಿದ್ದಾರೆ.

ಪುರುಷರ ತಂಡದಲ್ಲಿ ಶ್ರೀಲಂಕಾದ ನಾಲ್ವರು, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದ ತಲಾ ಮೂವರು, ವೆಸ್ಟ್‌ಇಂಡೀಸ್‌ನ ಒಬ್ಬರು ಸ್ಥಾನ ಪಡದಿದ್ದಾರೆ. ಶ್ರೀಲಂಕಾದ ಚರಿತ್ ಅಸಲಂಕಾ ತಂಡಕ್ಕೆ ನಾಯಕ ನಾಗಿದ್ದಾರೆ. ಭಾರತದ ಜತೆ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್ ಹಾಗೂ ನ್ಯೂಜಿಲೆಂಡ್‌ನ ಯಾವುದೇ ಆಟಗಾರನೂ ಸ್ಥಾನ ಗಿಟ್ಟಿಸಿ-ಕೊಂಡಿಲ್ಲ.

ಮಹಿಳೆಯರ ಏಕದಿನ ತಂಡ: ಭಾರತದ ಸ್ಮೃತಿ ಮಂದಾನ, ದೀಪ್ತಿ ಶರ್ಮಾ, ಇಂಗ್ಲೆಂಡ್‌ನ ಆ್ಯಮಿ ಜೋನ್ಸ್ (ವಿಕೆಟ್ ಕೀಪರ್), ಸೋಫಿ ಎಕ್ಲೆಸ್ಟೋನ್, ಕೇಟ್ ಕ್ರಾಸ್, ದಕ್ಷಿಣ ಆಫ್ರಿಕಾದ ಲಾರಾ ವೊಲ್ವಾರ್ಟ್ (ನಾಯಕಿ), ಮರಿಜಾನ್ ಕಪ್, ಆಸ್ಟ್ರೇಲಿಯಾದ ಆಶ್ಲೆ ಗಾರ್ಡನರ್, ಅನ್ನಾಬೆಲ್ ಸದರ್‌ಲ್ಯಾಂಡ್, ವೆಸ್ಟ್‌ಇಂಡೀಸ್‌ನ ಹೇಯಲಿ ಮ್ಯಾಥ್ಯೂಸ್, ಶ್ರೀಲಂಕಾದ ಚಮಾರಿ ಅಟ್ಟಪಟ್ಟು

ಪುರುಷರ ಏಕದಿನ ತಂಡ: ಶ್ರೀಲಂಕಾದ ಚರಿತ್ ಅಸಲಂಕಾ (ನಾಯಕ), ಪಥುಮ್ ನಿಸ್ಸಾಂಕ, ಕುಶಾಲ್ ಮೆಂಡಿಸ್, ವನಿಂದು ಹಸರಂಗ, ಪಾಕಿಸ್ತಾನದ ಸೈಮ್ ಅಯೂಬ್, ಶಾಹಿದ್ ಅಫ್ರಿದಿ, ಹ್ಯಾರಿಸ್ ರವೂಫ್, ಅಫ್ಗಾನಿಸ್ತಾನದ ರಹಮಾನುಲ್ಲಾ ಗುರ್ಬಾಜ್, ಅಜ್ಮತ್‌ಉಲ್ಲಾ ಒಮರ್‌ಝೈ, ಎ.ಎಂ.ಗಜನ್ಫರ್, ವೆಸ್ಟ್‌ಇಂಡೀಸ್‌ನ ಶೆರ್ಫನ್ ರುದರ್‌ಫೋರ್ಡ್

ಅಂಧರ ಫುಟ್‌ಬಾಲ್ ಟೂರ್ನಿ: ಕರ್ನಾಟಕಕ್ಕೆ ಮಿಶ್ರಫಲ

ಬೆಂಗಳೂರು: ಆತಿಥೇಯ ಕರ್ನಾಟಕ ತಂಡ, ಅಶ್ವಿನಿ ಅಂಗಡಿ ಟ್ರಸ್ಟ್ ಮತ್ತು ಭಾರತೀಯ ಅಂಧರ ಫುಟ್‌ಬಾಲ್ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ 'ಮ್ಯಾಚ್ ಡೇ ಸೂಪರ್ ಲೀಗ್ ಅಂಧರ ಫುಟ್‌ಬಾಲ್ ಟೂರ್ನಿ'ಯ ಮಹಿಳಾ ವಿಭಾಗದ ಪಂದ್ಯದಲ್ಲಿ ಶುಕ್ರವಾರ ಮಹಾರಾಷ್ಟ್ರ ತಂಡವನ್ನು 3–0 ಗೋಲುಗಳಿಂದ ಸೋಲಿಸಿ ಸತತ ಎರಡನೇ ಜಯ ದಾಖಲಿಸಿತು.

ಮ್ಯಾಚ್ ಡೇ ಮೈದಾನದಲ್ಲಿ ನಡೆಯುತ್ತಿರುವ ಟೂರ್ನಿಯ ಇತರ ಪಂದ್ಯಗಳಲ್ಲಿ ತಮಿಳುನಾಡು 4–0 ಯಿಂದ ಅರುಣಾಚಲ ಪ್ರದೇಶ ತಂಡವನ್ನು, ಸೋಲಿಸಿತು. ಪುರುಷರ ವಿಭಾಗದಲ್ಲಿ ತಮಿಳುನಾಡು ನಾಲ್ಕು ಗೋಲುಗಳಿಂದ ಕರ್ನಾಟಕ ತಂಡವನ್ನು ಸೋಲಿಸಿತು. ಮಹಾರಾಷ್ಟ್ರ ಇನ್ನೊಂದು ಪಂದ್ಯದಲ್ಲಿ 1-0ಯಿಂದ ಗುಜರಾತ್ ತಂಡವನ್ನು ಸೋಲಿಸಿತು.

ಆಸ್ಟ್ರೇಲಿಯನ್ ಒಪನ್: ಗಾಯಾಳಾಗಿ ಅರ್ಧದಲ್ಲೇ ಹಿಂದೆ ಸರಿದ ಜೊಕೊವಿಚ್

ಪ್ರಶಸ್ತಿಗೆ ಸಿನ್ನರ್–ಜ್ವರೇವ್ ಸೆಣಸಾಟ



ಇಟಲಿಯ ಯಾನಿಕ್ ಸಿನ್ನರ್ —ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರು ಶುಕ್ರವಾರ ನೇರ ಸೆಟ್‌ಗಳಿಂದ ಬೆನ್ ಶೆಲ್ಟನ್ ಅವರ ಸವಾಲನ್ನು ಬದಿಗೊತ್ತಿ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದರು. ವಿಶ್ವದ ಅಗ್ರಮಾನ್ಯ ಆಟಗಾರ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ.

ಎರಡನೇ ಶ್ರೇಯಾಂಕದ ಜ್ವರೇವ್ ಇನ್ನೊಂದು ಸೆಮಿ-ಫೈನಲ್‌ನಲ್ಲಿ ಒಂದು ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ 7–6 (7–5)ರಲ್ಲಿ ಪಡೆದಾಗ ಅವರ ಎದುರಾಳಿ ನೊವಾಕ್ ಜೊಕೊವಿಚ್ ಗಾಯಾಳಾಗಿ ಪಂದ್ಯ ಬಿಟ್ಟುಕೊಟ್ಟರು. ಇದರಿಂದ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸುವ 37 ವರ್ಷ ವಯಸ್ಸಿನ ಆಟಗಾರನ ಕನಸು ಇಲ್ಲಿ ನುಚ್ಚುನೂರಾಯಿತು. ಎಡಗಾಲಿನ ಮೇಲೆ ಟೇಪ್ (ಬ್ಯಾಂಡೇಜ್) ಸುತ್ತಿ ಕೊಂಡಿದ್ದ ಸರ್ಬಿಯಾದ ಆಟಗಾರ ಎದುರಾಳಿಗೆ ಹಸ್ತಲಾಘವ ಮಾಡಿ ಕೋರ್ಟ್ ತೊರೆದರು.

ಇದು ತಮ್ಮ ಕೊನೆಯ ಆಸ್ಟ್ರೇಲಿಯನ್ ಓಪನ್ ಆಗಿರಬಹುದು ಎಂಬ ಸುಳಿವನ್ನು 10 ಬಾರಿಯ ಚಾಂಪಿಯನ್ ಆಟಗಾರ ನೀಡಿದರು. ಮತ್ತೆ ಆಡುವ ಸಾಧ್ಯತೆಯ ಬಗ್ಗೆ ಕೇಳಿದಾಗ 'ಯಾರಿಗೆ ಗೊತ್ತು? ಈ ವರ್ಷದ ಟೂರ್ನಿಗಳನ್ನು ನಾನು ಹೇಗೆ ನಿರ್ವಹಿಸು-ತ್ತೇನೆ ಎಂಬುದನ್ನು ನೋಡಿಕೊಂಡು ನಿರ್ಧಾರಕ್ಕೆ ಬರಬೇಕಾಗುತ್ತದೆ' ಎಂದರು.

ಇದು ಜ್ವರೇವ್‌ಗೆ ಇಲ್ಲಿ ಮೊದಲ ಫೈನಲ್ ಆಗಿದೆ. ಈ ಹಿಂದೆ ಎರಡು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ರನ್ನರ್ ಅಪ್ ಆಗಿದ್ದರು. 2024ರ ಫ್ರೆಂಚ್ ಓಪನ್‌ನಲ್ಲಿ ಮತ್ತು 2020ರ ಅಮೆರಿಕ ಓಪನ್‌ನಲ್ಲಿ ಅವರು ಫೈನಲ್ ತಲುಪಿದ್ದರು.

ಸಿನ್ನರ್‌ಗೆ ಜಯ: ಇಟಲಿಯ ಸಿನ್ನರ್ ಮೊದಲ ಸೆಟ್ ಗೆಲ್ಲುವ ಮೊದಲು ಎರಡು ಬಾರಿ ಅದನ್ನು ಕಳೆದುಕೊಳ್ಳುವ ಅಪಾಯದಲ್ಲಿದ್ದರು. ನಂತರ ಉತ್ತಮವಾಗಿ ಆಡಿ 22 ವರ್ಷ ವಯಸ್ಸಿನ ಶೆಲ್ಟನ್ ಅವರನ್ನು 2 ಗಂಟೆ 36 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 7–6 (7–2), 6–2, 6–2 ರಿಂದ ಸೋಲಿಸಿದರು.

ಮಹಿಳಾ ಫೈನಲ್ ಇಂದು

ಅಗ್ರ ಶ್ರೇಯಾಂಕದ ಆಟಗಾರ್ತಿ, ಬೆಲರೂಸ್‌ನ ಅರಿನಾ ಸಬಲೆಂಕಾ ಶನಿವಾರ ನಡೆಯುವ ಫೈನಲ್‌ನಲ್ಲಿ ಅಮೆರಿಕದ ಮ್ಯಾಡಿಸನ್ ಕೀಸ್ ಅವರನ್ನು ಎದುರಿಸಲಿದ್ದಾರೆ. ಅರಿನಾ ಹ್ಯಾಟ್ರಿಕ್ ಪ್ರಶಸ್ತಿಯ ಗುರಿ ಯಲ್ಲಿದ್ದಾರೆ. 19ನೇ ಶ್ರೇಯಾಂಕದ ಕೀಸ್ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ನಿರೀಕ್ಷೆಯಲ್ಲಿದ್ದಾರೆ.

ಅಮೆರಿಕದ ಆಟಗಾರನ ವಿರುದ್ಧ ಆಡಿರುವ ಐದು ಪಂದ್ಯಗಳಲ್ಲಿ ಸಿನ್ನರ್‌ಗೆ ಇದು ನಾಲ್ಕನೇ ಜಯ. ಕಳೆದ ವರ್ಷ ಇದೇ ಟೂರ್ನಿಯಲ್ಲಿ ಸಿನ್ನರ್ ತಮ್ಮ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದರು.

ಮೂರನೇ ಸೆಟ್‌ನಲ್ಲಿ ಸಿನ್ನರ್‌ಗೂ ಸ್ನಾಯು ಸೆಳೆತದ ಸಮಸ್ಯೆ ಎದುರಾಯಿತು. ಚೇಂಜ್‌ಓವರ್ ವೇಳೆ ಎಡಗಾಲಿನ ಸ್ನಾಯುರಜ್ಜು ನೋವು ಮತ್ತು ಬಲತೊಡೆಯ ಸ್ನಾಯು ಸೆಳೆತಕ್ಕೆ ಅವರು ಟ್ರೇನರ್‌ನಿಂದ ಚಿಕಿತ್ಸೆ ಪಡೆದರು.

ಮೊದಲ ಸೆಟ್‌ನಲ್ಲಿ ಅವರು ಲಯಕ್ಕೆ ಪರದಾಡಿದರು. ಅದರೆ ಶೆಲ್ಟನ್ 6–5ರಲ್ಲಿ ಸೆಟ್‌ಗಾಗಿ ಸರ್ವ್ ಮಾಡುತ್ತಿದ್ದಾಗ ಮಾಡಿದ ತಪ್ಪಿನಿಂದ 23 ವರ್ಷ ವಯಸ್ಸಿನ ಸಿನ್ನರ್‌ಗೆ ಪುನರಾಗಮನ ಮಾಡಲು ಸಾಧ್ಯವಾಯಿತು. ಈ ಸೆಟ್ 71 ನಿಮಿಷ ನಡೆಯಿತು. ಎರಡನೇ ಸೆಟ್‌ನ ಆರಂಭದಲ್ಲೇ ಶೆಲ್ಟನ್ ಸರ್ವ್ ಬ್ರೇಕ್ ಮಾಡಿದ ಅವರು ಅದನ್ನು 42 ನಿಮಿಷಗಳಲ್ಲಿ ಪಡೆದರು.

ಕೆಪಿಬಿ ಟ್ರಸ್ಟ್ ಮಹಿಳಾ ಓಪನ್ ಟೆನಿಸ್
ಸಾರಾಗೆ ಮಣಿದ ಸಹಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸಹಜಾ ಯಮಲಪಲ್ಲಿ ಅವರು ಕೆಪಿಬಿ ಟ್ರಸ್ಟ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದಿದ್ದಾರೆ. ಈ ಮೂಲಕ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಝೆಕ್ ಗಣರಾಜ್ಯದ ಸಾರಾ ಬೆಜ್ಲಿಕ್ 6-4, 6-4ರಿಂದ ವಿಶ್ವ ಕ್ರಮಾಂಕದಲ್ಲಿ 315 ಸ್ಥಾನದಲ್ಲಿರುವ ಸಹಜಾ ಅವರನ್ನು ಹಿಮ್ಮೆಟ್ಟಿಸಿದರು.

ಭಾರತದ ಆಟಗಾರ್ತಿಯು ಎರಡನೇ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಮರಿಯಾ ಟಿಮೊಫೀವಾಗೆ ಆಘಾತ ನೀಡಿ ಎಂಟರ ಘಟ್ಟ ಪ್ರವೇಶಿಸಿದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 155ನೇ ಸ್ಥಾನದಲ್ಲಿರುವ ಝೆಕ್ ಆಟಗಾರ್ತಿಗೆ ಪೈಪೋಟಿ ನೀಡಿ ಸೋಲೊಪ್ಪಿಕೊಂಡರು.

ಅಗ್ರ ಶ್ರೇಯಾಂಕದ ತಾತ್ಯಾನಾ ಮರಿಯಾ (ಜರ್ಮನಿ) 6-2, 6-2ರಿಂದ ಥಾಯ್ಲೆಂಡ್‌ನ ಲ್ಯಾನ್ಲಾನಾ ತಾರೌಡಿ ಅವರನ್ನು ಸೋಲಿಸಿದರು. ಇತರ ಪಂದ್ಯಗಳಲ್ಲಿ ಏಳನೇ ಶ್ರೇಯಾಂಕದ ಲಿಯೊಲಿಯಾ ಜೀನ್‌ಜೀನ್ (ಫ್ರಾನ್ಸ್) 3-6, 7-5, 7-5ರಿಂದ ಎರಡನೇ ಶ್ರೇಯಾಂಕದ ರೆಬೆಕಾ ಮರಿನೊ (ಕೆನಡಾ) ಅವರಿಗೆ ಆಘಾತ ನೀಡಿದರು. ಝೆಕ್ ಗಣರಾಜ್ಯದ ಲಿಂಡಾ ಫ್ರುಹ್ವಿರ್ಟೋವಾ 5-7, 6-2, 6-2ರಿಂದ ದಲಿಲಾ ಜಕುಪೋವಿಕ್ (ಸ್ಲೊವೇನಿಯಾ) ಅವರನ್ನು ಸೋಲಿಸಿದರು.



ಝೆಕ್ ಗಣರಾಜ್ಯದ ಸಾರಾ ಬೆಜ್ಲಿಕ್ —ಚಿತ್ರ: ಎಸ್‌.ಕೆ. ದಿನೇಶ್

ಚೆಸ್ ಪ್ರಶಸ್ತಿ ಗೆದ್ದ ಇನಿಯನ್



ನವದೆಹಲಿ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಇನಿಯನ್ ಪನೀರ್‌ಸೆಲ್ವಂ ಅವರು ಜೋಹರ್ ಇಂಟರ್‌ನ್ಯಾಷನಲ್ ಓಪನ್ ಚೆಸ್ ಟೂರ್ನಿಯಲ್ಲಿ ಅಮೋಘ ಆಟದ ಪ್ರದರ್ಶನದೊಡನೆ ಪ್ರಶಸ್ತಿ ಗೆದ್ದುಕೊಂಡರು.

ಈರೋಡ್‌ನ 22 ವರ್ಷ ವಯಸ್ಸಿನ ಈ ಆಟಗಾರ ಗುರುವಾರ ಮುಕ್ತಾಯಗೊಂಡ ಟೂರ್ನಿಯಲ್ಲಿ 9 ಪಂದ್ಯಗಳಿಂದ 8.5 ಪಾಯಿಂಟ್ಸ್ ಕಲೆಹಾಕಿ, ಎರಡನೇ ಸ್ಥಾನ ಪಡೆದ ಆಟಗಾರನಿಗಿಂತ ಒಂದೂವರೆ ಪಾಯಿಂಟ್ಸ್ ಹೆಚ್ಚು ಗಳಿಸಿ ಚಾಂಪಿಯನ್ ಆದರು. ನಾಲ್ವರು ಐಎಂ ಮತ್ತು ಒಬ್ಬರು ಗ್ರ್ಯಾಂಡ್‌ಮಾಸ್ಟರ್ ವಿರುದ್ಧ ಜಯಗಳಿಸಿದರು.

ಎಂಟು ರಾಷ್ಟ್ರಗಳ 84 ಮಂದಿ ಕಣದಲ್ಲಿದ್ದರು. ಕೊನೆಯ ಸುತ್ತು ಆಡುವ ಮೊದಲೇ ಇಂಡೊನೇಷ್ಯಾದ ನಾಯಕ ಬುಧಿಧರ್ಮ ಅವರನ್ನು ಸೋಲಿಸಿ ಇನಿಯನ್ ಪ್ರಶಸ್ತಿ ಖಚಿತ-ಪಡಿಸಿಕೊಂಡಿದ್ದರು. ಭಾರತದ ಐಎಂ ವಿ.ಎಸ್.ರಾಹುಲ್ ಎರಡನೇ ಸ್ಥಾನ ಪಡೆದರು.